ಕರ್ಮವೀರ

ಹುಬ್ಬಳ್ಳಿ ತಾ. ೧೭—೧—೪೯

ಸಂಪುಟ ೨೦]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು
ಹ. ರಾ. ಪುರೋಹಿತ]

[ಸಂಪ್ರಾದಕರು:
ರಂ. ರಾ. ದಿವಾಕರ

- ಬಲ್ಲವರ ನುಡಿಗಳು -

ದೇಶದಲ್ಲಿ ಸುಶಾಸನವಿದ್ದರೆ ಬಡತನವೊಂದು ಲಜ್ಜಾವಹವಾದ ವಿಷಯವೆನಿಸುವದು. ದೇಶದ ಶಾಸನ ದುಶ್ಶಾಸನವಾಗಿದ್ದರೆ ಆಗ ಐಶ್ವರ್ಯವೇ ಲಾಂಛನಾಸ್ಪದವೆನಿಸೀತು.

—ಕಂಗ್ ಪ್ಯುಶಸ್

ಸುನೀತಿಯನ್ನು ಅನುಸರಿಸಿರದ ರಾಜ್ಯಕ್ಕೆ ಏಳ್ಗತಿಯಿಲ್ಲ.


—ಥಾಮಸ್ ಮಸಾರಿಕ್

ಸಮಾಜವೆಂಬದು ಹುಟ್ಟಿದ್ದೇ ಅನ್ಯಾಯವನ್ನು ಹೋಗಲಾಡಿಸುವ ಉದ್ದೇಶದಿಂದ.

—ವಾರ್ಬರ್ಟನ್

ಶ್ರೀಮಂತನು ತನ್ನ ಶ್ರೀಮಂತಿಕೆಯನ್ನು ಕುರಿತು ಹೆಗ್ಗಳಿಕೆ ಪಡುತಿದ್ದರೆ, ಮೊದಲು ಅವನು ಅದನ್ನು ಹೇಗೆ ವಿನಿಯೋಗಿಸುವನೆಂದು ನೋಡಿ ಆ ಮೇಲೆ ಅವನನ್ನು ಹೊಗಳಿರಿ.

—ಸಾಕ್ರಟೀಸ



ಅಮೇರಿಕೆಯ ವಿದೇಶಮಂತ್ರಿ
ಡೀನ್ ಆಚಿಸನ್

ಪ್ರಕೃತಿ ಸ್ವಾಸ್ಥ್ಯದ ನಿಮಿತ್ತ ರಾಜೀನಾಮೆಯಿತ್ತ ಅಮೇರಿಕೆಯ ವಿದೇಶಮಂತ್ರಿ ಜನರಲ್ ಜಾರ್ಜ ಮಾರ್ಶಲ್ಲರ ಸ್ಥಾನದಲ್ಲಿ ಹೊಸದಾಗಿ ನೇಮಿಸಲ್ಪಟ್ಟ ಡೀನ್ ಆಚಿಸನ್ನರು ವಿದೇಶನೀತಿಯಲ್ಲಿ ಪ... ದೀರ್ಘ ಅನುಭವವುಳ್ಳವರು ... ಚಯಕ್ಕಾಗಿ

—ಪುಟ ೭

ನಿಯಂತ್ರಣಗಳು ಹೋಗಬೇಕು —ಪುಟ ೩

ಜಗತ್ತಿನ ವರ್ಷ ಭವಿಷ್ಯ —ಪುಟ ೬

KARMAVEER- Kannada Illustrated Weekly, HUBLI

ಐದು ಕೊಡಗಳ ಆತ್ಮಕಥೆ

ಡಿ. ಕೌಜಲಗಿ ಹಣಮಂತರಾಯರು

ನಾಂದಿ ಯುಗದಲ್ಲಿ ಏನು ಅಹಲ್ಯೆಯು ಏನು ಇಂಗ್ಲೆಂಡಿನ ಇವರ ಕಲ್ಪನೆ ಕಥೆ ಮಾಡುವುದಾಗುವದಿಲ್ಲ; ಪಾಶ್ಚಾತ್ಯ ದೃಷ್ಟಿಗೆ ಅಸ್ವಾಭಾವಿಕ ಕೃತ್ರಿಮ ಗಳೆಂದು ಹೆಸರಾದ ಜನರು ತಮ್ಮ ಮನೆ ಮಕ್ಕಳ ಮೇಲೆ ತಾಳಿಸಿದ ಪತ್ರ ಇರಿಸಲೂ ಶಿಕ್ಷ್ಯವಾಗಿರುವವನ್ನು ಎಷ್ಟೋ ಹೇಡಿಗಳು ಇಂದು ತಮ್ಮ ಪ್ರಾಣಾಹುತಿಯನ್ನೆ ಕೊಡಲು ಮುಂದೆ ಬಂದಿರುವವನ್ನು ನೋಡಿದರೆ ನಾವೇನು ಸ್ವಪ್ನಸೃಷ್ಟಿಯಲ್ಲಿರುವೆವೊ ಏನೊ ಎಂದು ಅನಿಸಬಹುದು. ಇಂಥ ಒಂದು ವಿಚಿತ್ರ ಘಟನೆಯು ಬಾಗಲಕೋಟೆಯ ಜೇಲಿನಲ್ಲಿ ನಡೆದದ್ದು ನನ್ನ ಅನುಭವಕ್ಕೆ ಬಂದಿತು. ಅದನ್ನೆ ನನ್ನ ಗೆಳೆಯರ ಲಾಭಕ್ಕಾಗಿ ಇಲ್ಲಿ ಸಂಕ್ಷಿಪ್ತ ರೂಪದಲ್ಲಿ ಕೊಡುತ್ತಿದ್ದೇನೆ.

ನಾನು ಆದಿನ ಬಾಗಲಕೋಟೆಯ ಜೇಲಿನಲ್ಲಿ ದೈ. ಬ್ರಿಟಿಶ ಸರಕಾರದ ಅತಿಥ್ಯ. ನನ್ನ ಕೋಣೆಯಲ್ಲಿಯೇ ೫ ಹಿತ್ತಾಳಿ ಕೊಡಗಳಿದ್ದವು. ಅವು ಅಲ್ಲಿ ಹೇಗೆ ಬಂದವು ಯಾಕೆ ಬಂದವು ಎಂಬುವನ್ನು ತಿಳಿದುಕೊಳ್ಳುವ ಕುತೂಹಲ ಉಂಟಾಯಿತು. ಆದರೆ ಯಾರಿಗೆ ಕೇಳಬೇಕು? ನನ್ನ ಕೋಣೆಯ ಕಾವಲುಗಾರನನ್ನು ನೋಡಿದರೆ ಅವನೊಬ್ಬ ಸೂತ್ರದ ಗೊಂಬೆ. ತಾನು "ಡ್ಯೂಟೀ" ಮೇಲೆ ಇದ್ದಾಗ ಕೈದಿ ಇರಲಿ ಅಥವಾ ಏನೇ ವಸ್ತುಗಳಿರಲಿ ಅವನ್ನು ಇದ್ದಕ್ಕಿದ್ದಂತೆ ತನ್ನ ಬದಲಿಯಾಗಿ ಬಂದವನಿಗೆ ಒಪ್ಪಿಸುವವಷ್ಟೇ ಅವನಿಗೆ ಗೊತ್ತು. ಆದರೆ ಆ ಕೊಡಗಳ ಕಡೆಗೆ ಮೇಲಿಂದ ಮೇಲೆ ನೋಡಿದಂತೆ ನನ್ನ ಕುತೂಹಲವು ಮಾತ್ರ ಬೆಳೆಯತೊಡಗಿತು. ಅವುಗಳ ಮೈತುಂಬ ಬಿದ್ದ ತಗ್ಗುಗಳು, ಕಂಟಿ ಕುಸಿದ ವಿದ್ರೂಪವಾದ ಅವುಗಳ ಸ್ವರೂಪ, ಅವುಗಳಲ್ಲಿ ಅಲ್ಲಲ್ಲಿ ಕಾಣುವ ಛಿದ್ರಗಳು, ಮತ್ತು ಅನೇಕ ದಿನಗಳ ವರೆಗೆ ಕೈಯಾಡಿಸದೆ ಬಿಟ್ಟಿದ್ದರಿಂದ ಹಸಿರು ಗಟ್ಟಿ ಹೋದ ಅವುಗಳ ಬಣ್ಣ ಇವನ್ನೆಲ್ಲ ನೋಡಿದರೆ ಈ ಕೊಡಗಳು ಸಹ ಮನುಷ್ಯರಂತೆಯೇ ಈ ಸಂಸಾರಸಾಗರದಲ್ಲಿ ಅನೇಕ ತೆರೆಗಳ ಹೊಡೆತಕ್ಕೆ ಸಿಕ್ಕಿ ಕಡೆಗೆ "ಇಲ್ಲಿಗೆ" ಬಂದಿರಬಹುದೆಂದು ಅನಿಸತೊಡಗಿತು. ದುಷ್ಟವಾಗೂ ಕ್ರೂರವಾದ ಬಾಹ್ಯ ಜಗತ್ತಿನಿಂದ ತಮ್ಮ ಬೆಂದು ಹೋದ, ನೊಂದ ಅಂತಃಕರಣವನ್ನು ಮಾಮಲೇದಾರ ಕಚೇರಿಯ ಈ ಚಿಕ್ಕ ಕೋಣೆಯಲ್ಲಿ ಬಚ್ಚಿಟ್ಟುಕೊಳ್ಳಲು ಇಲ್ಲಿಗೆ ಬಂದಿರಬೇಕೆಂದು ಅನಿಸಿತು. ಅಂತೂ ಸಂಜೆಯಾದರೂ ನನಗೆ ಆ ಕೊಡಗಳ ಬಗ್ಗೆ ನಿಜ ಸಂಗತಿಯೇ ಗೊತ್ತಾಗಲಿಲ್ಲ. ರಾತ್ರಿ ಯಾದರೂ ನನ್ನ ಮನಸ್ಸಿನಲ್ಲಿ ಇನ್ನೂ ಅದೇ ವಿಚಾರವೇ ಕಟಿಯುತ್ತಿತ್ತು.

ರಾತ್ರಿ ಸುಮಾರು ೧೧ ಗಂಟೆಯಾಗಿರಬಹುದು. ನಾನು ಇನ್ನೂ ತೂಕಡಿಸುತ್ತಿದ್ದೆ. ಅಷ್ಟರಲ್ಲಿ ಕಾಲ ಕೆಳಗೆ ಏನೋ ಸರಿದಾಡಿದಂತೆ ಭಾಸವಾಯಿತು. ಇಲಿಗಳೇನಾದರೂ ಇರಬಹುದೆಂದು ಮತ್ತೊಂದು ಬದಿಗೆ ಹೊರಳಿದೆ. ಪುನಃ ಮತ್ತೊಮ್ಮೆ ಅದೇ ಪ್ರಕಾರದ ಸಪ್ಪಳವಾಯಿತು. ಈ ಸಾರೆ ಸ್ವಲ್ಪ ಹೆಚ್ಚು ಲಕ್ಷ್ಯ ಕೊಟ್ಟು ಆ ಕಡೆಗೆ ನೋಡಲು, ನನ್ನ ಕಾಲ ಹತ್ತರ ಮೂಲೆಯಲ್ಲಿಟ್ಟಿದ್ದ ಕೊಡವು ಎರಡನೆ ಕೊಡದ ಕಡೆಗೆ ಸರಿಯುವದು ಕಾಣಿಸಿತು. ನಾನು ಆಶ್ಚರ್ಯದಿಂದ ಅವಾಕ್ಕಾದೆ. ಚಳಿಗಾಲದಲ್ಲಿ ಚಳಿ ಕಾಯಿಸಲು ಬೈಲಿನಲ್ಲಿ ಹಳ್ಳಿಗರು ಗುಂಪು ಕಟ್ಟಿಕೊಂಡು ಕೂಡುವಂತೆ ಆ ಐದೂ ಕೊಡಗಳು ಕೂಡಿಕೊಂಡವು. ಅದರೊಳಗೆ ಒಂದು ಕೊಡದ ಬಾಯಿಂದ ಕೆಲವು ಶಬ್ದಗಳೂ ಸಹ ಹೊರಟಂತೆ ಕೇಳಿಸಿತು. ಛೆ! ಕೊಡಗಳೆಂದಾದರೂ ಮಾತಾಡಬಹುದೆ? ಎಂದು ವಿಚಾರ ಮಾಡುತ್ತಿರುವಾಗ "ಎ, ಘಾಳ ಜ್ಯಾಸರಕಿ ಬಂದದ. ಒಂದ ಚುಟ್ಟಾ ಅರೆ ಇದ್ದರ ತಗಿ ಅಲಾ" ಎಂದು ಆ ಕೊಡವು ಅನ್ನುವದು ಸ್ಪಷ್ಟವಾಗಿ ಕೇಳಿಸಿತು. ಮುಂದೆ ಆ ಐದು ಕೊಡಗಳೂ ತಮ್ಮ ತಮ್ಮೊಳಗೆ ಏನೊ ಮಾತಾಡತೊಡಗಿದವು. ಕುತೂಹಲ ಕೆರಳುತ್ತಿತ್ತು. ಕಿವಿಗೊಟ್ಟು ಕೇಳಿದೆ. ಅವು ತಮ್ಮ ತಮ್ಮೊಳಗೆ ತಾವು ಮಾಮಲೇದಾರ ಕಚೇರಿಯ ಈ ಕೋಣೆಯೊಳಗೆ ಹೇಗೆ ಬಂದೆವೆಂಬುದರ ಇತಿಹಾಸವನ್ನು ಹೇಳುತ್ತಿದ್ದವು. ಒಂದು ಕೊಡವು ತನ್ನ ಆತ್ಮಕಥೆಯನ್ನು ಹೇಳುವಾಗ ಉಳಿದವುಗಳು ಅದನ್ನು ಲಕ್ಷ ಕೊಟ್ಟು ಕೇಳುತ್ತಿದ್ದವು.

ನಾನಿನ್ನೂ ಆಗ ಅರನಿದ್ರೆಯಲ್ಲಿಯೇ ಇದ್ದೆ. ಅದರಿಂದ ಅವು ಹೇಳಿದ್ದೆಲ್ಲ ನನ್ನ ಲಕ್ಷ್ಯದಲ್ಲಿ ಉಳಿದಿಲ್ಲ. ಅದರೂ ಸ್ಮರಣೆಯಲ್ಲಿದ್ದಷ್ಟನ್ನೇ ಹೇಳುತ್ತಿರುವೆನು.

ಒಂದನೇ ಕೊಡದ ಆತ್ಮಕಥೆ

"ಗೆಳೆಯರೇ, ನನ್ನ ಈ ಅವತಾರದ ಕಡೆಗೆ ನೋಡಿ ನಗಬೇಡಿರಿ. ನನ್ನ ಮೈತುಂಬ ಈಗ ತೂತು ತಗ್ಗುಗಳು ಬಿದ್ದಿವೆ. ನುತ್ತು ಕಂಠವೂ ಕುಸಿದಿದ್ದಂತೆ ಕಾಣಬಹುದು. ಆದರೆ ನಾನು ಜನ್ಮತಃ ಹೀಗೆ ಇದ್ದೆನೆಂದು ಮಾತ್ರ ತಿಳಿಯಬೇಡಿರಿ. ನಾನು ಎಷ್ಟೋ ಸುದಿನಗಳನ್ನು ಕಂಡಿದ್ದೇನೆ. ಒಂದು ಊರಿನ ಒಬ್ಬ ಕಂಚುಗಾರನ ಮನೆಯಲ್ಲಿ ನನ್ನ ಜನ್ಮವಾಯಿತು. ನನ್ನ ಆಗಿನ ಮನಮೋಹಕ ರೂಪ ಹಾಗೂ ನೈಕಟ್ಟನ್ನು ಕಂಡು ಕಂಚುಗಾರನ ಹೆಂಡತಿಯು ಹುಚ್ಚಾಗಿ ನನ್ನನ್ನು ಮಾರಬಾರದೆಂದು ಹಟ ಹಿಡಿದಳು. ಆದರೆ ಆದು ಕಂಚುಗಾರನ ಮನಸ್ಸಿಗೆ ಬರಲಿಲ್ಲ. ತಾನು ಮಾಡಿದ ಕೊಡಗಳ ಸಲುವಾಗಿ ಹೀಗೆ ಹಟ ಹಿಡಿಯುತ್ತ ಕುಳಿತರೆ ಮನೆ ತುಂಬೆಲ್ಲ ಕೊಡಗಳನ್ನೇ ಇಟ್ಟುಕೊಂಡು ಹೊಟ್ಟೆಗೆ ಕೇರು ಹಾಕಿಕೊಳ್ಳುವ ಪ್ರಸಂಗ ಬಂದೀತೆಂದು ಅವನು ನಿಷ್ಠುರವಾಗಿ ಹೇಳಿದನು. ಹೆಂಡತಿಯ ಉತ್ತರಕ್ಕೆ ಕೂಡ ಕಾಯದೆ ನನ್ನನ್ನು ಎತ್ತಿಕೊಂಡು ಒಬ್ಬ ವ್ಯಾಪಾರಿಗೆ ಕೊಟ್ಟು ಬಂದನು. ಅಲ್ಲಿ ನನ್ನ ಬಳಗದವರೊಂದಿಗೆ ನಾನು ಎರಡು ತಿಂಗಳ ವರೆಗೆ ಮಾತ್ರ ಇದ್ದೆನು. ಮುಂದೆ ವೈಶಾಖ ಮಾಸವು ಬಂದಿತು. ಹತ್ತಿಯ ವ್ಯಾಪಾರವು ಆದೇ ಪ್ರಾರಂಭವಾಗಿತ್ತು. ಆ ಸುಮಾರಿಗೆ ದಂಪತಿಗಳ ಜೋಡಿಯೊಂದು ನಾನಿದ್ದ ಅಂಗಡಿಗೆ ಬಂದಿತು. ಅವರಿಗೆ ಒಂದು ಕೊಡವನ್ನು ತೆಗೆದುಕೊಳ್ಳುವದಿತ್ತು. ಅವರು ಬಡವರಿದ್ದರೂ ಆ ಹತ್ತಿಯ ಸುಗ್ಗಿಯಲ್ಲಿ ೧೫-೨೦ ರೂಪಾಯಿಗಳಿಸಿಟ್ಟಿದ್ದರು. ಈ ರೂಪಾಯಿಗಳಿಂದ ತನಗೊಂದು ಜರದಂಚಿನ ರುಮಾಲು, ಹೆಂಡತಿಗೊಂದು ಸೀರೆ ತೆಗೆದುಕೊಳ್ಳಬೇಕೆಂದು ಗಂಡನ ವಿಚಾರವಿತ್ತೆಂದು ನನಗೆ ನಂತರ ತಿಳಿಯಿತು. ಅವರು ಅಂಗಡಿಗೆ ಬಂದಾಗ ಬರಿ ಗಂಡನ ತಲೆಯ ಮೇಲೆ ಆಷ್ಟೆ ಹೊಸ ರುಮಾಲು ಕಂಡು ಬಂದರೂ ಹೆಂಡತಿಯ ಅಗ್ರಹದ ಮೇರೆಗೆ ಆಕೆಗೆ ಸೀರೆ ತೆಗೆದುಕೊಳ್ಳದೆ ಒಂದು ಹಿತ್ತಾಳಿಯ ಕೊಡ ತೆಗೆದುಕೊಳ್ಳುವದನ್ನು ಅವರು ನಿಶ್ಚಯಿಸಿದ್ದು ಕಂಡಿತು. ಅಂಗಡಿಯೊಳಗಿದ್ದಷ್ಟೆಲ್ಲ ಕೊಡಗಳನ್ನು ತಿರುವಿ ಹಾಕಿದರೂ ಆ ಸುಹಾಗಾಯಳ ಮನಸ್ಸಿಗೆ ಒಂದೂ ಬರಲಿಲ್ಲ. ಕಟ್ಟಕಡೆಗೆ ನಾನು ಆಕೆಯ ಕೈಗೆ ಸಿಕ್ಕಿದೆ. ಆಕೆಯ ದರ್ಶನ ಮಾತ್ರದಿಂದಲೇ ನಾನು ಮೋಹಿತನಾಗಿದ್ದೆ. ಹಾಗು ಕರ್ಮಧರ್ಮ ಸಂಯೋಗದಿಂದ ನನ್ನನ್ನೇ ಆಕೆಯು "ಪಾಸು" ಮಾಡಿದಳು. ಒಂದು ಯಃಕಶ್ಚಿತ್ ಕೊಡದ ಸಲುವಾಗಿ ಇಷ್ಟು ಚೌಕಸಿ (ಜಿಕೇರಿ) ಮಾಡಿದ್ದಕ್ಕಾಗಿ ಆಕೆಯ ಗಂಡ ಎಷ್ಟು ಗೇಲಿ ಮಾಡಿದರೂ ಆಕೆಯೇನೂ ಮುನಿಯಲಿಲ್ಲ. ನನ್ನ ತೂಕ ಮಾಡಿ ಅಂಗಡಿಕಾರನು ಬೆಲೆಯನ್ನು ಹೇಳಿದ. ಅದು ಬಹಳವೆನಿಸಿ ಎಲ್ಲಿ ಆಕೆ ನನ್ನ ಕೈ ಬಿಡುವಳೊ ಎಂದು ಹೆದರಿದೆ. ಆದರೆ ಮುಂದೆ ಇಬ್ಬರೂ ಸ್ವಲ್ಪ ಜಗಳಾಡಿ ಒಂದು ಬೆಲೆಯನ್ನು ಗೊತ್ತು ಮಾಡಿ ನನ್ನನ್ನು ತಕ್ಕೊಂಡರು. ನಾನು ಆ ದಂಪತಿಗಳ ಜೊತೆಗೆ ಅವರೂರಿಗೆ ಹೊರಟೆ. ದಾರಿಯಲ್ಲಿ ನನ್ನನ್ನು ಅವರು ತಮ್ಮ ಪ್ರೀತಿಯ ಮಗನಂತೆ ಹೆಗಲ ಮೇಲೂ ಬಗಲಲ್ಲಿಯೂ ಕರೆದುಕೊಂಡು ಹೊರಟರು.

ಅಂತೂ ನಾನೊಂದು ಹಳ್ಳಿಯ ಜೀವಿಯಾದೆ. ನನ್ನನ್ನು ಕೊಂಡು ತಂದ ಮನೆಯಲ್ಲಿ ಮಣ್ಣಿನ ಮಡಿಕೆಗಳೇ ಹೆಚ್ಚಾಗಿದ್ದವು. ಇದ್ದ ಬಿದ್ದ ನಾಲ್ಕಾರು ಹಿತ್ತಾಳಿ ಸಾಮಾನಗಳಲ್ಲಿ ನಾನೇ ಅಗ್ರಸ್ಥಾನವನ್ನು ಪಡೆದೆ. ನನ್ನನ್ನು ತಂದ ಎರಡನೆಯ ದಿವಸದಿಂದಲೇ ನನ್ನ "ಅವ್ವನು" ನನ್ನನ್ನು ಬಗಲಲ್ಲಿ ಕೂಡಿಸಿಕೊಂಡು ನೀರಿಗೆ ಹೊರಟಳು. ಆಕೆ ನನ್ನನ್ನು ಪ್ರೀತಿಸುವದನ್ನು ನೋಡಿದರೆ ಆಕೆಯನ್ನು ಅವ್ವನೆಂದೇ ನಾನು ಕರೆಯಬೇಕು. ಆಕೆಗೆ ಇತರರು ಚಿನ್ನವ್ವ ಎಂದು ಕರಿಯುತ್ತಿದ್ದರು. ನದಿ ಮುಟ್ಟುವದರೊಳಗೆ ಕನಿಷ್ಠ ೪೦-೫೦ ಜನರಾದರೂ ಚಿನ್ನವ್ವನಿಗೆ, 'ಈ ಕೊಡ ಎಲ್ಲಿಂದ ತಂದೆ, ಎಷ್ಟು ಕೊಟ್ಟೆ, ತೂಕ ಎಷ್ಟಿದೆ, ಹೆಸರು ಹಾಕಿಸಿದೆಯಾ?" ಎಂದು ಮುಂತಾದ ನೂರಾರು ಪ್ರಶ್ನೆಗಳನ್ನು ನನ್ನ ಬಗ್ಗೆ ಕೇಳುತ್ತಿದ್ದರು. ಆವಳು ಅವಕ್ಕೆಲ್ಲ ಉತ್ತರ ಕೊಡುತ್ತ ನದಿ ಮುಟ್ಟಲು ೧೫ ನಿಮಿಷದ ಬದಲು ಒಂದು ತಾಸು ಹತ್ತಿತು. ಅದರೂ ಆಕೆಗೆ ಬೇಸರ ಬರಲಿಲ್ಲ. ತಾನು ಬಗಲೊಳಗೆ ತನ್ನ ಚೊಚ್ಚಲ ಮಗನೇ ಕುಳಿತಿರುವನೆಂದು ಆಕೆ ತಿಳಿದುಕೊಂಡು ಬಿಟ್ಟಿದ್ದಳು!

ನದಿಯಲ್ಲಿ ತಾನು ಜಳಕ ಮಾಡುವದಕ್ಕಿಂತ ಮುಂಚೆ ಚಿನ್ನವ್ವನೂ ನನ್ನ ಮೈಯನ್ನು ಹುಣಸೆ ಹಣ್ಣು ಹಚ್ಚಿ ಉಸುಕಿನಿಂದ ಸ್ವಚ್ಛವಾಗಿ ತೊಳೆದಳು. ನನ್ನನ್ನು ಎಷ್ಟೇ ತಿಕ್ಕಿದರೂ ಆಕೆಗೆ ಸಮಾಧಾನವಾಗಲಿಲ್ಲ. ಕಡೆಗೆ ಬಹಳ ತಡವಾದೀತೆಂಬ ಭಯದಿಂದ ನಿರುಪಾಯಳಾಗಿ ಮನೆಗೆ ತಿರುಗಿದಳು. ನನ್ನನ್ನು ಅಂಚುಮುಟಿ ತುಂಬಿ ತಲೆಯ ಮೇಲೆ ಇಟ್ಟುಕೊಂಡಳು. ನನ್ನನ್ನು ಎತ್ತಿಕೊಳ್ಳಲು ಆಕೆಗೆ ಆಸರ ಕೊಡಲು ಒಬ್ಬ ತರುಣನು ಮುಂದೆ ಬಂದಿದ್ದ. ಆದರೆ ಚಿನ್ನವ್ವನು "ಇದೇನು 'ಘಾಗ್ಗರಿ' ಕೊಡ. ನಿನೋ, ಈಟಿ ಐತಿ. ಇದ ಕ್ಯಾಕ ಎತ್ತೇದರ ಕೈ" ಎಂದು ಅವನ ಸಹಾಯವನ್ನು ನಿರಾಕರಿಸಿದಳು. ನಾನೇನು ಚಿಕ್ಕವನಿರಲಿಲ್ಲ. ನನ್ನನ್ನು ಒಬ್ಬಳೇ ಎತ್ತಿಕೊಂಡು ಹೋಗಿ ಚಿನ್ನವ್ವನಿಗೆ ಬಹಳ ಶ್ರಮವಾಗಿರಲೇಬೇಕು. ಆದರೆ ಆ ತರುಣನು ಅದೇ ಹೆಂಡೆಗಸ ಮಾಡಿ (ಗೊಬ್ಬರ ತೆಗೆದು) ಬಂದದ್ದರಿಂದ ಅವನ ಕೈ ಹೊಲಸು ನನ್ನ ಮೈಗೆ ಹತ್ತೀತೆಂಬುದೆ ಚಿನ್ನವ್ವನ ಭಯ. ಅದಕ್ಕಾಗಿಯೇ ಆಕೆ ಅವನ ಸಹಾಯ ನಿರಾಕರಿಸಿದಳು.

ಚಿನ್ನವ್ವ ನನ್ನನ್ನು ಕರಕೊಂಡು ಮನೆಗೆ ತಿರುಗಿದಳು. ಹಾದಿಯಲ್ಲಿ ಪುನಃ ಮೊದಲಿನ ಪ್ರಶ್ನೆಗಳನ್ನೇ ಮತ್ತೆ ಅನೇಕರು ಕೇಳಿದರು. ಅವಕ್ಕೆಲ್ಲ ಆಕೆ ನಗುನಗುತ್ತಲೇ ಉತ್ತರ ಕೊಡುತ್ತಿದ್ದಳು. ಮನೆ ಬಾಗಿಲಿಗೆ ಬಂದ ಕೂಡಲೆ ನನ್ನನ್ನು ಇಳಿಸಿಕೊಳ್ಳಲು ಆಕೆ ತನ್ನ ಗಂಡನನ್ನು ಕರೆದಳು. ಅವನು ಕೂಡಲೇ ಎದ್ದು ಬಂದ. ಕೆಲ ನಿಮಿಷ ಆತ ತನ್ನ ಹೆಂಡತಿಯನ್ನೂ ನನ್ನನ್ನೂ ಆಸೆಯಿಂದ ನೋಡಿ ನನ್ನನ್ನು ಕೆಳಗೆ ಇಳಿಸಿ, ಅಡಿಗೆ ಮನೆಯಲ್ಲಿ ಒಂದು ಸ್ವಚ್ಛವಾಗಿ ಸಾರಿಸಿದ ಮೂಲೆಯಲ್ಲಿ ಇರಿಸಿದ.

ಈ ರೀತಿ ಆ ದಂಪತಿಗಳ ಅಚ್ಚು ಮೆಚ್ಚಿನ ಚೊಚ್ಚಲಮಗನಾಗಿ ಆ ಮನೆಯಲ್ಲಿ ನಾನು ಆನಂದದಿಂದ ಇರುತ್ತಿದ್ದೆ. ಆದರೆ ಎಲ್ಲ ದಿನಗಳೂ ಸಮನೆಲ್ಲಿರಬೇಕು? ಕಾಲಚಕ್ರ ತಿರುಗಿತು. ಭರಮಪ್ಪನು, ಚಿನ್ನವ್ವನ ಗಂಡ- ಬಾಗಲಕೋಟೆಗೆ ಮೇಲಿಂದಮೇಲೆ ಹೋಗತೊಡಗಿದ. ಒಬ್ಬ ಗೆಳೆಯನ ಕೃಪೆಯಿಂದ ಅತನಿಗೆ ಸುರಾಪಾನದ ವ್ಯಸನ ಹತ್ತಿತು. ಮೊದಲನೆಯ ದಿವಸ ಭರಮಪ್ಪ ಕುಡಿದು ಮನೆಗೆ ಬಂದಾಗ್ಗೆ ಏನು ಶೆರೆಯ ದುರ್ಗಂಧ ವಾಸವು ಹಬ್ಬಿತೊ ಅದರಿಂದ ಆ ಪುಟ್ಟಮನೆಯ ಪ್ರೀತಿಯ ಸುಗಂಧವು ಶಾಶ್ವತವಾಗಿಯೇ ಅಳಿದು ಹೋಯಿತು. ಚಿನ್ನವ್ವನ ಮೋರೆಯ ಮೇಲಿನ ಮುಗುಳುನಗೆಯು ಕಮರಿ ಹೋಯಿತು. ಅವಳ ಮುಖಚರ್ಯೆಯ ಮೇಲೆ ಯಾವಾಗಲೂ ಭೀತಿಯ ಕಳೆಯೇ ಸುರಿಯುತ್ತಿತ್ತು. ಅಗಸ್ತ್ಯದ ಕೆಲಸದ ಹೊರ್ತು ಗಂಡ ಹೆಂಡಿರ ಪರಸ್ಪರ ಮಾತುಕತೆಗಳು ನಿಂತುಹೋದೆವು. ಮೊದಲಿನ ನಗುವದು ನಲಿಯುವದು ಎಲ್ಲವೂ ಮಾಯವಾದವು. ಶೆರೆಯ ಗುಂಗು ಇಳಿದ ಕೂಡಲೇ ಭರಮಪ್ಪನು ಒಬ್ಬ ಆರೋಪಿಯಂತೆ ಮುಖ ಮಾಡಿಕೊಂಡು ಸ್ತಬ್ಧನಾಗಿ ಕೂಡುತ್ತಿದ್ದ. ರೋಷದಿಂದ ಉರಿದುರಿದು ಹಾಯ್ದಾಡುವ ಚಿನ್ನವ್ವನ ಕಡೆಗೆ ನೋಡಿ ಅತ ಒಮ್ಮೊಮ್ಮೆ ತನ್ನ ವಿಕಟ ಹಾಗೂ ಕ್ರೂರವಾದ ನಗೆಯನ್ನೂ ಬೀರುತ್ತಿದ್ದ.

ಇಂಥ ಪ್ರಕ್ಷುಬ್ಧ ಮನಃಸ್ಥಿತಿಯಲ್ಲಿ ಚಿನ್ನವ್ವನ ಮನಸ್ಸು ಸಂಸಾರದಿಂದ ದೂರಾಗತೊಡಗಿತು. ನನ್ನ ಮೇಲಿನ ಆಕೆಯ ಪ್ರೀತಿಯು ಎಳ್ಳಷ್ಟೂ ಕಡಿಮೆಯಾಗದಿದ್ದರೂ ನನ್ನ ಸ್ವಚ್ಛತೆಯ ಬಗ್ಗೆ ಆಕೆ ಮೊದಲಿನಷ್ಟು ಕಾಳಜಿ ತೆಗೆದುಕೊಳ್ಳುತ್ತಿರಲಿಲ್ಲ. ನಾನು ಮುಖಾಳನಾಗತೊಡಗಿದೆ. ಒಂದು ರಾತ್ರಿ ಸುಮಾರು ಎಂಟು ಗಂಟೆಯ ಸಮಯಕ್ಕೆ ಭರಮಪ್ಪ ಬಕ್ಕ ತಲೆಯಿಂದ ಮನೆಗೆ ಬಂದ. ಪರಸ್ಪರರ ಪ್ರೀತಿಯ ಕುರುಹಾದ ಅತನ ಜರದಂಚಿನ ರುಮಾಲು ತಲೆಯ ಮೇಲಿರಲಿಲ್ಲ. ಚಿನ್ನವ್ವನಿಗೆ ಅದು ಒಮ್ಮೆಲೆ ಹೊಳೆಯಿತು. ಕೂಡಲೆ ಆ ರುಮಾಲಿನ ಬಗ್ಗೆ ಆಕೆ ವಿಚಾರಿಸಿದಳು. ಆದರೆ ಭರಮಪ್ಪ ಮಾತ್ರ ಅದಕ್ಕೆ ಉತ್ತರಕೊಡುವ ಸ್ಥಿತಿಯಲ್ಲಿರಲಿಲ್ಲ. ಬೆಳಕು ಹರಿಯುತ್ತಲೆ ಅಮಲಿಳಿದ ಭರಮಪ್ಪ ಹೆಂಡತಿಯ ಕಣ್ಣು ತಪ್ಪಿಸಿ ತನ್ನ ಕೆಲಸಕ್ಕೆ ಹೋದ.

ಮುಂದೆ ಏಳೆಂಟು ದಿನ ಶಾಂತವಾಗಿ ಉರುಳಿದವು ಎನ್ನುವಷ್ಟರೊಳಗೆ ಒಂದು ದುರ್ಘಟನೆ ಸಂಭವಿಸಿತು. ಭರಮಪ್ಪ ಶೆರೆಯ ತಲೆಬಾಗಿದ್ದರೂ ಅತನ ಹಸ್ತರ ಒಂದು ಒಡಕ ಕವಡಿಸಹ ಇರಲಿಲ್ಲ. ಮಧ್ಯಾಹ್ನದ ಸುಮಾರು ಮೂರು ಘಂಟೆಯ ವೇಳೆಯಾಗಿರಬಹುದು. ಚಿನ್ನವ್ವನು ಕೂಲಿಮಾಡಿ ಬಂದು ದಣಿದದ್ದರಿಂದ ಹಾಯಾಗಿ ಬಿದ್ದುಕೊಂಡಿದ್ದಳು. ಆಕೆ ಮಲಗಿದ್ದನ್ನು ಕಂಡು ಭರಮಪ್ಪ ಕಳ್ಳ ಹೆಜ್ಜೆಯಿಂದ ಅಡಿಗೆಮನೆಯಲ್ಲಿ ಪ್ರವೇಶಮಾಡಿದ. ಅತ್ತಿತ್ತ ನೋಡುತ್ತ, ನಡುಗುತ್ತಿರುವ ತನ್ನ ಕೈಗಳಿಂದ ನನ್ನನ್ನು ಹಗುರಾಗಿ ಎತ್ತಿಕೊಂಡು ಹೊರಗೆ ಬಂದ. ಭರಮಪ್ಪನ ಚಲನವಲನಗಳನ್ನು ನೋಡಿದ ಕೂಡಲೇ ನನಗೆ ಏನೊ ದುರ್ಧರ ಪ್ರಸಂಗ ಬಂದೇ ತೀರುವದೆಂದು ಸಂಶಯ ಬಂದಿತು. ಭರಮಪ್ಪನು ತನ್ನ ಕಠೋರ ಹಸ್ತದಿಂದ ನನ್ನನ್ನು ಎತ್ತಿದ. ಕೂಡಲೇ ನಾನು ಚಿನ್ನವ್ವನನ್ನು ಕರೆದೆ. ಆದರೆ ನಿರ್ಜೀವಿಯಾದ ನನ್ನ ಕೂಗು ಚಿನ್ನವ್ವನಿಗೆ ಕೇಳಿಸಿತೋ ಇಲ್ಲೋ ನನಗೆ ಗೊತ್ತಿಲ್ಲ. ಚಿನ್ನವ್ವನು ಮಾತ್ರ ಭರಮಪ್ಪನು ಅಡಿಗೆ ಮನೆಯಿಂದ ಪಾರಾಗುವದರೊಳಗಾಗಿ ಎಚ್ಚರಾದಳು.

ಭರಮಪ್ಪನ ಸ್ವರೂಪ ನೋಡಿದ ಕೂಡಲೇ ಆಕೆಗೆ ಅವನ ಉದ್ದೇಶ ಹೊಳೆಯಿತು. ಕೂಡಲೆ ಆಕೆ ಸಿಂಹಿಣಿಯಂತೆ ಅವನ ಮೇಲೆ ಹಾರಿ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಗಂಡಹೆಂಡತಿಯರ ಬಡಿದಾಟಕ್ಕೆ ಪ್ರಾರಂಭವಾಯಿತು. ಇವರಿಬ್ಬರ ಗುದ್ದಾಟದಲ್ಲಿ, ನನ್ನೊಳಗಿನ ಅರ್ಧಕ್ಕಿಂತ ಹೆಚ್ಚು ನೀರು ಚೆಲ್ಲಿ ಹೋಯಿತು. ಭರಮಪ್ಪನು ಗಂಡಸಾಗಿದ್ದರೂ ನನ್ನ ಮೇಲಿನ ಮಮತೆಯ ಬಲದಿಂದ ಚಿನ್ನವ್ವನ ಬಲವು ದ್ವಿಗುಣಿತವಾಗಿ ಅವನ ಕೈಯೊಳಗಿಂದ ಆಕೆ ನನ್ನನ್ನು ಕಸಿದುಕೊಂಡಳು. ಆದರೆ ಅಷ್ಟರಲ್ಲಿ ಆಕೆಯ ಕೈಜಾರಿ ನಾನು ಕೆಳಗೆ ಅಪ್ಪಳಿಸಿಕೊಂಡು ಬಿದ್ದು ಉರುಳಿ ಬಿಟ್ಟೆ. ಹೊಡೆತದಿಂದ ನನಗೆ ಅನೇಕ ಕಡೆಗೆ ತಗ್ಗುಗಳು ಬಿದ್ದವು. ನನ್ನ ಸ್ಥಿತಿಯು ಹೀಗಾದದ್ದನ್ನು ಕಂಡ ಕೂಡಲೇ ಚಿನ್ನವ್ವನು ತನ್ನ ಹಣೆಯನ್ನು ಗೋಡೆಗೆ ಬಡಿದುಕೊಳ್ಳಹತ್ತಿದಳು. ಇದನ್ನು ನೋಡಿ ನಮ್ಮಿಬ್ಬರನ್ನು ಬಿಟ್ಟು ಭರಮಪ್ಪನು ಓಡಿ ಹೋದ. ಶೆರೆಯ ಸಲುವಾಗಿ ಅತನ ರುಮಾಲು ಒತ್ತೆ ಬಿದ್ದಿದ್ದರೂ ಚಿನ್ನವ್ವನ ಕೃಪೆಯಿಂದ ನಾನು ಮಾತ್ರ ಆ ದಿನ ಉಳಿದುಕೊಂಡೆ.

ಅತ್ತು ಅತ್ತು ದಣಿದ ಮೇಲೆ ಭಾರವಾದ ಅಂತಃಕರಣದಿಂದ ಚಿನ್ನವ್ವನು ನನ್ನನ್ನು ಎತ್ತಿ ಒಳಗೆ ಒಯ್ದಿಟ್ಟಳು. ಮುಂದೆ ಎರಡು ದಿವಸಗಳಾದರೂ ಭರಮಪ್ಪನ ಸುದ್ದಿಯೇ ಇದ್ದಿಲ್ಲ. ಮೂರನೆ ದಿನ ಪೋಲೀಸರ ಕಾವಲಿನೊಂದಿಗೆ ಭರಮಪ್ಪ ಮನೆಗೆ ಬಂದ; ಶೆರೆಕುಡಿದು ಗೊಂದಲಮಾಡಿದ್ದಕ್ಕಾಗಿ ಅವನಿಗೆ ೫ ರೂಪಾಯಿ ದಂಡವಾಗಿತ್ತು. ಅದರ ವಸೂಲಿಗಾಗಿ ಪೋಲೀಸರು ನನ್ನನ್ನು ಜಪ್ತಮಾಡಿ ಇಲ್ಲಿಗೆ ತಂದರು. ನನ್ನನ್ನು ಅವರು ಮನೆಯಿಂದ ಹೊರಗೆ ಒಯ್ಯುವಾಗ ಚಿನ್ನವ್ವನು ಹಾಡಿ ಹಾಡಿ ಹೊರಳಾಡಿ ಅತ್ತಳು. ಅದು ಇನ್ನೂ ನನ್ನ ಕಣ್ಣಮುಂದೆ ಕಟ್ಟಿದೆ. ಅದೆಲ್ಲವನ್ನು ನೆನೆದರೆ ಮೈ ಜುಮ್ ಅನ್ನುತ್ತದೆ. ನಾನು ಬಡವರ ಮನೆಯಲ್ಲಿರುತ್ತಿದ್ದರೂ ಅತ್ಯಂತ ಸುಖದಿಂದ ಇರುತ್ತಿದ್ದೆ. ಈ ಸುಡಗಾಡು ಶೆರೆ ನನ್ನನ್ನೂ ಈ ಅವಸ್ಥೆಗೀಡುಮಾಡಿತು. ಕಳೆದ ಸುಖದ ದಿನಗಳನ್ನು ಪುನಃ ಈ ಜನ್ಮದಲ್ಲಿ ಕಾಣಬಹುದೆ."?

ಉಳಿದ ಕೊಡಗಳ ಕಥೆ

ತನ್ನ ಕಥೆಯನ್ನು ಮುಗಿಸಿ ಮೊದಲನೆಯ ಕೊಡವು ಸುಮ್ಮನೆ ಕುಳಿತಿತು. ಆ ಮೇಲೆ ಎರಡು ಕೊಡಗಳು ತಮ್ಮ ಕಥೆಯನ್ನು ಪ್ರಾರಂಭಿಸಿದವು. ಅದೇನು ಅಷ್ಟು ಮನೋವೇಧಕವಿಲ್ಲದ್ದರಿಂದ ಸಂಪೂರ್ಣವಾಗಿ ನನ್ನ ಸ್ಮರಣೆಯಲ್ಲಿ ಉಳಿದಿಲ್ಲ. ಆವೆರಡು ಕೊಡಗಳೂ ಒಂದೇ ಮನೆಯಿಂದ ಬಂದಿದ್ದವು. ಅವು ಬಂದ ಮನೆತನವು ಒಂದು ಹಳ್ಳಿಯಲ್ಲಿ ಎಂಟೆತ್ತಿನ ಕಮತ ಮಾಡುತ್ತಿತ್ತು. ಆ ಮನೆಗೆ ಬಹಳ ನೀರು ಬೇಕಾಗುತ್ತಿದ್ದದರಿಂದ ಎತ್ತಿನ ಮೇಲೆ ಲಗಳಿ ಹಾಕಿ ನಾಲ್ಕು ನಾಲ್ಕು ಕೊಡ ಒಮ್ಮೆಲೆ ತರುತ್ತಿದ್ದರು. ಈ ಎರಡೂ ಕೊಡಗಳು ಆ ಲಗಳಿ ಒಳಗಿನವಿದ್ದವು. ನೀರು ತರುವ ಆಳು ಮಕ್ಕಳಿಗೆ ಕೊಡಗಳನ್ನು ಮೇಲಿಂದ ಮೇಲೆ ತಿಕ್ಕುತ್ತಿರಬೇಕೆಂಬುದರ ಕಲ್ಪನೆ ಕೂಡ ಇರುತ್ತಿರಲಿಲ್ಲ. ಲಗಳಿ ಎತ್ತು ಒಮ್ಮೊಮ್ಮೆ ಹೊಸದೂ ಅಥವಾ ಉದ್ಧಟವೂ ಇದ್ದಾಗ ಸಬರದ ಮೇಲಿನ ಕೊಡಗಳನ್ನು ಕೆಳಗೆ ಅಪ್ಪಳಿಸುತ್ತಿದ್ದವು. ಅದರಿಂದ ಈ ಕೊಡಗಳು ನಗ್ಗಿ ಅಷ್ಟು ಮುಖಗಳೇ ಆಗಿಬಿಟ್ಟವೆ. ಅದರೂ ಒಂದು

(೧೬ನೆಯ ಪುಟಕ್ಕೆ)

ದೇಶಾಂತರಗಳಿಂದ

ಏಶಿಯ ರಾಷ್ಟ್ರಗಳ ಪರಿಷತ್ತು

ಇಂಡೊನೇಶಿಯದ ಸಮಸ್ಯೆಯನ್ನು ಚರ್ಚಿಸಲು ಏಶಿಯದ ದೇಶಗಳನ್ನು ಕುರಿತು ಪ್ರತಿನಿಧಿಗಳನ್ನು ಭಾರತಕ್ಕೆ ಕಳಿಸಬೇಕೆಂದು ಪಂ. ನೆಹರು ಪ್ರಾರ್ಥಿಸಿಕೊಂಡಿದ್ದಾರೆ. ತುರ್ಕಿ, ಈಜಿಪ್ತ, ಸಿರಿಯ, ಲೆಬನಾನ್, ಹದ ಜಾಜ್ ಇರಾನ್, ಇರಾಕ್, ಅಫ್ಘಾನಿಸ್ತಾನ, ಪಾಕಿಸ್ತಾನ, ಸಿಂಹಳ, ಸಯಾಂ ಮತ್ತು ಚೀನಗಳಿಗೆ ಪಂಡಿತರ ಆಮಂತ್ರಣ ಹೋಗಿದೆ. ಮುಖ್ಯ ಮಂತ್ರಿಗಳ ಈ ಹೇಳಿಕೆಯಿಂದ ಲಂಡನಿನಲ್ಲಿಯ ಮುತ್ಸದ್ದಿಗಳು ಸಖೇದಾಶ್ಚರ್ಯ ಹೊಂದಿದ್ದಾರೆ. ಅಟ್ಲಾಂಟಿಕ್ ಒಕ್ಕೂಟವನ್ನು ರಚಿಸಲು ಮಾತುಕತೆ ನಡೆಸಬೇಕೆಂದಿರುವ ಈ ಕಾಲದಲ್ಲಿ ಮಿತ್ರ ರಾಷ್ಟ್ರವೆನಿಸಿದ ಹಾಲೆಂಡಿನ ವಿರುದ್ಧವಾಗಿ ಮಂತ್ರಿಗಳು ಕೊಟ್ಟ ಹೇಳಿಕೆ ಪಾಶ್ಚಾತ್ಯರಿಗೊಂದು ಬರೆಕೊಟ್ಟಂತಾಗಿದೆ. ಉಗುಳಿದರೆ ತುಪ್ಪಕೆಡುತ್ತದೆ, ನುಂಗಲು ಗಂಟಲು ಸುಡುತ್ತದೆ ಎಂಬಂತಾಗಿದೆ ಅವರಿಗೀಗ.

ಡಚ್ಚರ ನೌಕಾದಲ ಸುಮಾತ್ರದ ದಕ್ಷಿಣ ಕೋಟೆಯನ್ನು ಪ್ರವೇಶಿಸಿ ಪ್ರಜಾರಾಜ್ಯದ ಮೂರು ಬಂದರುಗಳನ್ನು ಹಿಡಿದಿದೆ. ಕಲ್ಲಿದ್ದಲಿನ ಜಿಲ್ಲೆಯಾದ ಸವಾಲೋಯಂತೋವನ್ನೂ ಅವರು ಆಕ್ರಮಿಸಿರುವರೆಂದು ಅವರ ಹೇಳಿಕೆಯಿದೆ.

ಲಂಡನ್ನಿನ ವಿದೇಶ ಶಾಖೆಯ ಕಚೇರಿಯಲ್ಲಿ ಬ್ರಿಟಿಶ್ ವಿದೇಶ ಮಂತ್ರಿ ಬೆವಿನ್ನರು ಇಂಡೊನೇಶಿಯದಲ್ಲಿಯ ಡಚ್ ಧೋರಣವನ್ನು ಚರ್ಚಿಸಲು ಕಾಮನ್‌ವೆಲ್ತ ಹೈಕಮಿಶನ್ನರ ಸಭೆ ಸೇರಿಸಿದರು. ಇದರಲ್ಲಿ ಏಶಿಯನ್ ಪರಿಷತ್ತಿನ ಬಗ್ಗೆ ಕಾಮನ್‌ವೆಲ್ತಿನ ವಿವಿಧ ಸರಕಾರಗಳ ಮತವೇನೆಂಬುದನ್ನು ವಿಚಾರಿಸಲಾಗುವುದು.

ನೆದರ್‌ಲೆಂಡ್ಸಿನ ಜೂಲಿಯಾನಾರಾಣಿ ಇಂಡೊನೇಶಿಯದಲ್ಲಿ ಸದ್ಯದಲ್ಲೇ ಸ್ವತಂತ್ರ ಚುನಾವಣೆಯನ್ನು ನಡೆಸಿ ಕೆಲವೇ ವಾರಗಳಲ್ಲಿ ಸಂಯುಕ್ತ ಸರಕಾರವನ್ನು ಸ್ಥಾಪಿಸುವ ಇಚ್ಛೆಯನ್ನು ಹೊರಗೆಡಹಿದ್ದಾಳೆ. ಹೀಗೆ ಒಬ್ಬಿಬ್ಬರು ಪ್ರಜಾರಾಜ್ಯದ ಮುಖಂಡರನ್ನು ಒಳಪಡಿಸಿಕೊಂಡು ಹೊಸ ಸರಕಾರವನ್ನು ಸ್ಥಾಪಿಸುವುದು ಭಾರತದಲ್ಲಿ ಪಂ. ನೆಹರು ಕರೆದಿರುವ ಏಶಿಯ ರಾಷ್ಟ್ರಗಳ ಪರಿಷತ್ತಿಗೊಂದು ಪ್ರತ್ಯಸ್ತ್ರವೆಂದು ಬಟೇವಿಯದಲ್ಲಿರುವ ಕೆಲ ರಾಜತಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಪ್ರಜಾರಾಜ್ಯದವರು ದಿಲ್ಲಿಯಲ್ಲಿ ನಡೆಸಲು ಮೇಲ್ಕಾಣಿಸಿದ ಪರಿಷತ್ತಿನ ಫಲಿತಾಂಶವನ್ನೇ ಎದುರು ನೋಡುತ್ತಿದ್ದಾರೆ.

ಪ್ರಜಾರಾಜ್ಯದ ಆರ್ಥಿಕ ಮಂತ್ರಿ ಡಾ. ಮರಾನೀಸ್ ಮತ್ತು ನ್ಯೂಯಾರ್ಕಿನಲ್ಲಿ ಇಂಡೊನೇಶಿಯದ ತಾತ್ಕಾಲಿಕ ಪ್ರತಿನಿಧಿಗಳಾದ ಡಾ. ಸೋಯೆಮಿತ್ರೋ ಅವರು ಹೊಸದಿಲ್ಲಿಗೆ ಬಂದರೆಂದು ತಿಳಿಯುತ್ತದೆ.

ಮಾಲನ್ ಸರಕಾರ ಉರುಳುವುದೇ?

ಜೋಹಾನ್ಸ್‌ಬರ್ಗಿನ ರಾಜಕೀಯ ವರ್ಗದಲ್ಲಿ ರಾಷ್ಟ್ರೀಯ ಮತ್ತು ಆಫ್ರಿಕೇಯರ ಸಂಯುಕ್ತ ಪಕ್ಷದಲ್ಲಿ ಒಡಕು ಹುಟ್ಟುವ ಸಂಭವವಿರುವದರಿಂದ ಡಾ. ಮಾಲನ್ನರ ಸರಕಾರ ಉರುಳಬಹುದೆಂದು ಹೇಳಲಾಗುತ್ತಿದೆ. ಹಣಕಾಸಿನ ಮಂತ್ರಿ ಮತ್ತು ಆಫ್ರಿಕೇಯರ ಮುಖಂಡರು ಎನಿಸಿದ ಶ್ರೀ ಎನ್. ಸಿ. ಹವೆಂಗರು ಒಂದು ಭಾಷಣದಲ್ಲಿ ಘಟನೆಯಲ್ಲಿಯ ಐರೋಪ್ಯೇತರ ಮತದಾನಾಧಿಕಾರವನ್ನು ತಿದ್ದುವದು ಅಯೋಗ್ಯವೆಂದುದರ ಪರಿಣಾಮವಾಗಿ ಅವರನ್ನು ಮಂತ್ರಿಮಂಡಲದಿಂದ ಹೊರಗೆ ಹಾಕಲಾಗುವದೆಂದೂ ಆಗ ಸೇನಾಪತಿ ಸ್ಮಟ್ಸರೊಡನೆ ಸೇರಿ ಪಾರ್ಲಿಮೆಂಟಿನ ಮುಂದಿನ ಸಭೆಯಲ್ಲಿ ಅವರು ಸರಕಾರವನ್ನು ಸೋಲಿಸಬಹುದೆಂದೂ ತರ್ಕಿಸಲಾಗಿದೆ. ಆದರೆ ಮಾಲನ್ನರು ತಮ್ಮ ಹೇಳಿಕೆಯಲ್ಲಿ ಈ ಪ್ರಶ್ನೆಯನ್ನು ಮಾರ್ಚ ೯ ರಲ್ಲಿ ನಡೆಯುವ ಪ್ರಾಂತೀಯ ಶಾಸನಸಭೆಯ ಚುನಾವಣೆಯ ಕಾಲದಲ್ಲಿ ಜನಮತಕ್ಕೀಡಮಾಗುಗುವದೆಂದೂ ಅಲ್ಲಿಯ ವರೆಗೆ ಆ ಪ್ರಯತ್ನವನ್ನು ನಿಲ್ಲಿಸುವದಿಲ್ಲವೆಂದೂ ಹಟದಿಂದ ಸಾರಿದ್ದಾರೆ

ಜಾಗತಿಕ ಶಾಂತಿಗೆ ಭಾರತದ ಕೊಡುಗೆ

ಸಂ. ರಾ. ಸಂಘದ ಸಾಂಸ್ಕೃತಿಕ ಸಮಿತಿ ೧೯೪೯ ರ ಅಂತ್ಯದಲ್ಲಿ ಜಾಗತಿಕ ವಿಷಯಗಳ ಕೋಶವೊಂದನ್ನು ಪ್ರಕಟಿಸಲಿದೆ. ಈ ಗ್ರಂಥವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗುವುದು. ಒಂದು ಭಾಗದಲ್ಲಿ ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿಗಳಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನೂ ಇನ್ನೊಂದರಲ್ಲಿ ಯುಗಯುಗಗಳಿಂದ ಬೇರೆ ಬೇರೆ ದೇಶಗಳು ಜಾಗತಿಕ ಶಾಂತಿಯನ್ನು ಸಾಧಿಸಲು ಎಷ್ಟರ ಮಟ್ಟಿಗೆ ಸಹಕಾರಿಗಳಾದವು ಎಂಬ ಅಂಶವನ್ನೂ ಕಾಣಿಸಲಾಗುವುದು. ಸಮಿತಿಯವರು ಸದಸ್ಯ ರಾಷ್ಟ್ರಗಳೆಲ್ಲಕ್ಕೂ ತಂತಮ್ಮಲ್ಲಿಯ ಸಂಗತಿಗಳ ಬಗ್ಗೆ ಇತಿಹಾಸದ ದೃಷ್ಟಿಯಿಂದ ವರದಿಮಾಡಲು ಕೇಳಿಕೊಂಡಿದ್ದಾರೆ ಗೌತಮ ಬುದ್ಧ, ಅಶೋಕ ಮತ್ತು ಮಹಾತ್ಮರ ಕಾರ್ಯಗಳ ಬಗ್ಗೆ ವಿವರಪೂರ್ಣವಾದ ವರದಿಯನ್ನು ಸಿದ್ಧಮಾಡಿ ಭಾರತ ಸರಕಾರದ ಶಿಕ್ಷಣ ಶಾಖೆ ಕಳಿಸಲಿದೆಯೆಂದು ತಿಳಿಯುತ್ತದೆ.

"ಕೆಂಪಿಗರ" ದಾಳಿ

ಉತ್ತರ ಚೀನದ ನಗರವಾದ ಟೆಂಟ್ಸಿನ ಮೇಲೆ ಕಮ್ಯುನಿಸ್ಟರು ಬಲವಾದ ದಾಳಿಮಾಡಿದ ಸುದ್ದಿಬಂದಿದೆ. ನಗರದ ಅಷ್ಟ ದಿಕ್ಕುಗಳನ್ನೂ ಹೊಗೆ ವ್ಯಾಪಿಸಿದೆಯಂತೆ. ಜನರಲಿಸಿಮೋ ಚಿಯಂಗ್-ಕೈ-ಶೇಕರು ಕೊಟ್ಟ ಹೊಸವರುಷದ ಶಾಂತಿಯ ಕರಾರುಗಳು ಕಮ್ಯುನಿಸ್ಟರಿಗೆ ಮಾನ್ಯವೆನಿಸಿಲ್ಲವೆಂದೂ ಆ ಕಾರಣದಿಂದ ಮಧ್ಯ ಚೀನದಲ್ಲಿ ಎಣಿಸಿದಂತೆ ಕಮ್ಯುನಿಸ್ಟರ ಕೋಲಾಹಲ ಕಡಿಮೆಯಾಗಲಿಲ್ಲವೆಂದೂ ತಿಳಿಯುತ್ತದೆ. ಯಾಂಗಟ್ಸೀ ನದಿಯ ಉತ್ತರ ತೀರದಲ್ಲಿರುವ ಚುಹಸೀನಿನಲ್ಲಿ ಕಮ್ಯುನಿಸ್ಟರ ಹಾವಳಿ ಜೋರಾಗಿದೆ ಎಂದು ಸುದ್ದಿ.

ನ್ಯಾನಕಿಂಗಿನಿಂದ ಬಂದ ಒಂದು ವಾರ್ತೆಯ ಪ್ರಕಾರ ಚೀನೀ ಸರಕಾರವು ಅಮೇರಿಕ, ಬ್ರಿಟನ್, ಫ್ರಾನ್ಸುಗಳನ್ನು ಮಧ್ಯಸ್ಥಿಕೆ ಮಾಡಲು ಬಿನ್ನವಿಸಿಕೊಂಡಿದೆಯೆಂದು ತಿಳಿಯುತ್ತದೆ. ಶೂಚೋದಲ್ಲಿ ಖಾಡಾಖಾಡಿ ಕೈಕೈ ಯುದ್ಧ ನಡೆದಿದೆಯೆಂದು ಸುತ್ತುವರಿಯಲ್ಪಟ್ಟ ಸರಕಾರೀ ದಲದ ಸೇನಾನಿ ತೂಯೂಮಿಂಗನಿಗೆ ಗಾಯವಾಯಿತೆಂದೂ ಇತ್ತೀಚಿನ ವರ್ತಮಾನ.

ಯುದ್ಧಾಪರಾಧಿಗಳಿಗೆ ಮರಣದಂಡನೆ

ಈಗ ಕೆಲ ದಿನಗಳ ಹಿಂದೆ ಜಪಾನಿನಲ್ಲಿ ಏಳು ಜನ ಯುದ್ಧಾಪರಾಧಿಗಳನ್ನು ಮರಣದಂಡನೆಗೆ ಗುರಿಪಡಿಸಲಾಯಿತು. ಆ ಏಳು ಜನರೆಂದರೆ, ಯುದ್ಧಕಾಲದ ಮುಖ್ಯ ಮಂತ್ರಿ ಟೋಜೋ, ಜನರಲ್ ಡೋಹರ, ಜನರಲ್ ಕಿಮೂರ, ಜನರಲ್ ಮತ್ಸುಯಿ, ಜನರಲ್ ಮೂತೋ, ನಿವೃತ್ತ ಮುಖ್ಯ ಮಂತ್ರಿ ಹಿರೋಟ ಮತ್ತು ನಿವೃತ್ತ ಯುದ್ಧಮಂತ್ರಿ ಇತಗಾಕಿ. ಇವರನ್ನು ಗಲ್ಲಿಗೇರಿಸಿದ ಮರುದಿನ ಬಹಳ ಜಪಾನಿಗಳು ದೇವಾಲಯಗಳಲ್ಲಿ ಪ್ರಾರ್ಥನೆಯನ್ನಾಚರಿಸಿದರು. ಇದರಿಂದ ಜಪಾನಿಗಳು ಸಂತುಷ್ಟರಾದರೋ ಸಂತಪ್ತರಾದರೋ ಎಂಬುದನ್ನು ಪಾಶ್ಚಾತ್ಯರಿಗೆ ತಿಳಿಯಲು ಸಾಧ್ಯವಾಗಲಿಲ್ಲವೆಂದು ಅಮೇರಿಕದ 'ಟೈಮ್ಸ' ವರದಿಮಾಡಿದೆ.

ಜೆಕ್ ಕೂಲಿಕಾರರಿಗೆ ಹೆಚ್ಚಿಗೆ ಸೌಕರ್ಯ

ಜೆಕೊಸ್ಲೋವೇಕಿಯದ ಆಹಾರ ಮತ್ತು ಪೂರಯಿಕೆಯ ಮಂತ್ರಿ ಜಂಕೋವಕೋವಳು ಸದ್ಯದಲ್ಲಿರುವ ಸರ್ವಸಮವಾದ ಆಹಾರ ವಿತರಣವನ್ನು ನಿಲ್ಲಿಸಿ ಕೆಲಸಗಾರರಿಗೆ ಹೆಚ್ಚಾಗಿಯೂ ಪರಪುಷ್ಟರಿಗೆ ಕಡಿಮೆಯಾಗಿಯೂ ಹಂಚುವ ವ್ಯವಸ್ಥೆ ಮಾಡುವೆನೆಂದು ಸಾರಿದಳು.

ಹೊಸ ಬಟ್ಟೆ ಸೀದಾ ಕಾಯಿದೆಯ ಪ್ರಕಾರ ಖಾಸಗಿ ಉದ್ಯಮಿಗಳಿಗೆ ಸೀದಾ ಪದ್ಧತಿಯಂತೆ ಕಡಿಮೆ ಬೆಲೆಗೆ ಬಟ್ಟೆ ಹಂಚಲಾಗದೆಂದೂ ಅಂಥ ಸೌಕರ್ಯ ಕೂಲಿಕಾರರಿಗೆ, ಅಡಳತಿಗಾರರಿಗೆ, ಆಯ್ದ ಅಧಿಕಾರಿಗಳಿಗೆ ಮತ್ತು ಚಿಕ್ಕ ರೈತರಿಗೆ ಮಾತ್ರ ಮೀಸಲೆಂದು ಸಾರಲಾಗಿದೆ.

ಟ್ರೂಮನ್ನರ ಹೊಸ ವ್ಯವಸ್ಥೆ

ಅಧ್ಯಕ್ಷ ಟ್ರೂಮನ್ನರು ತಾವು ಚುನಾವಣೆಯ ಘೋಷಣೆಯಲ್ಲಿ ಮಾಡುವೆನೆಂದು ಸಾರಿದ ಒಂದೊಂದೇ ಸುಧಾರಣೆಯನ್ನು ಈಗ ಧೈರ್ಯದಿಂದ ಕಾರ್ಯರೂಪಕ್ಕೆ ತರಲಾರಂಭಿಸಿದ್ದಾರೆ. ಅಂಥ ಸುಧಾರಣೆಗಳಲ್ಲಿ ಪದಾರ್ಥಗಳ ಬೆಲೆ ಮತ್ತು ಕೂಲಿ ದರದ ನಿಯಂತ್ರಣ ಬಹು ಮುಖ್ಯವಾದದ್ದು. ಇದರಿಂದ ಅತಿಪ್ರಸರಣ ಅತಿಮೌಲ್ಯಗಳನ್ನು ತಡೆಗಟ್ಟಬಹುದೆಂದು ಆಶಿಸಲಾಗಿದೆ.

ಅಧ್ಯಕ್ಷ ಟ್ರೂಮನ್ನರು ವಿದೇಶ ಮಂತ್ರಿಗಳಾದ ಜಾರ್ಜ ಮಾರ್ಶಲ್ಲರ ರಾಜೀನಾಮೆಯನ್ನು ಘೋಷಿಸಿ ಅವರ ಸ್ಥಳದಲ್ಲಿ ಹಿಂದಿನ ವಿದೇಶ ಉಪ ಮಂತ್ರಿಗಳಾದ ಡೀನ ಆಚೆಸನ್ನರನ್ನು ನಿಯಮಿಸಿರುವುದಾಗಿ ಸಾರಿದರು. ವಿದೇಶ ಧೋರಣೆಯ ಬಗ್ಗೆ ಮತಭೇದವುಂಟಾಗಿ ಮಾರ್ಶಲ್ಲರು ರಾಜೀನಾಮೆ ಕೊಟ್ಟರೆಂದು ಯಾರೂ ಭಾವಿಸಬಾರದೆಂದೂ ಅವರು ಜನತೆಗೆ ಬಿನ್ನವಿಸಿಕೊಂಡರು.

ಸಾರ್ವಜನಿಕರಿಂದ ತೆಗೆದುಕೊಂಡ ಸಾಲವನ್ನು ಕಡಿಮೆ ಮಾಡುವುದು, ಬಳಕೆಗಾರರಿಗೆ ಅಗತ್ಯವಾದ ಸಾಮಗ್ರಿಗಳನ್ನು ಕೊಳ್ಳಲು ಸಹಾಯಧನ ಕೊಡುವ ರೂಢಿಯನ್ನು ಉಳಿಸಿಕೊಳ್ಳುವುದು, ರೇಲ್ವೆ ರಚನೆಗಾಗಿ ಹಣ ತೆಗೆದಿಡುವುದು, ಕಡೆಯಪಕ್ಷ ಬರುವ ಎರಡು ವರ್ಷಗಳ ವರೆಗಾದರೂ ಬಾಡಿಗೆಯ ಮೇಲೆ ನಿಯಂತ್ರಣ ಇಡುವುದು, ನಿರ್ಯಾತದ ಮೇಲಿನ ನಿಯಂತ್ರಣವನ್ನು ವಿಸ್ತರಿಸುವುದು, ವಸ್ತುವಿನಿಮಯದಲ್ಲಿ ಅತಿರೇಕವಾಗಿ ದಲಾಲಗಿರಿ ನಡೆಸುವುದನ್ನು ನಿಲ್ಲಿಸುವುದು, ಅತಿಪ್ರಸರಣದ ದುಷ್ಪರಿಣಾಮಕ್ಕೆ ತುತ್ತಾದವರ ರಕ್ಷಣೆ, ಸಾಮಾಜಿಕ ಸುರಕ್ಷಿತತೆಯ ವಿಸ್ತರಣ ಮತ್ತು ಪ್ರಥಮಾವಧಿ ಕೂಲಿಯನ್ನು ನೂರಕ್ಕೆ ೪೦ ರಿಂದ ೭೫ ಕ್ಕೆ ಏರಿಸುವುದು ಇವೇ ಮೊದಲಾದ ಸುಧಾರಣೆಗಳನ್ನು ಟ್ರೂಮನ್ನರ ಸರಕಾರ ತರಲಿದೆಯೆಂದು ಹೇಳಲಾಗುತ್ತದೆ.

ಅಧ್ಯಕ್ಷ ಟ್ರೂಮನ್ನರು ಕಾಂಗ್ರೆಸ್ಸಿನೆದುರು ಮಂಡಿಸಿದ ೧೯೪೯-೫೦ ನೆಯ ವರ್ಷದ ಮುಂಗಡ ಪತ್ರಿಕೆಯಲ್ಲಿ ವಿದೇಶ ಸಹಾಯ ಮತ್ತು ರಾಷ್ಟ್ರರಕ್ಷಣೆಗಾಗಿ ೨೧೦೦ ಕೋಟಿ ಡಾಲರುಗಳನ್ನು ತೆಗೆದಿಡಬೇಕೆಂದು ಕೇಳಿಕೊಂಡಿದ್ದಾರೆ. ಶಾಂತಿ ಕಾಲದಲ್ಲಿ ಹಿಂದೆಂದೂ ಇದಕ್ಕಾಗಿ ಇಷ್ಟು ಹಣ ವೆಚ್ಚಮಾಡಿರಲಿಲ್ಲ. ಯುರೋಪಿನ ಪುನರುತ್ಥಾನಕ್ಕಾಗಿ ೪೫ ಕೋಟಿ ಡಾಲರುಗಳು ಬೇಕೆಂದೂ ಅಮೇರಿಕದ ರಕ್ಷಣೆಯ ದೃಷ್ಟಿಯಿಂದ ಅವಶ್ಯವೆನಿಸಿದಲ್ಲಿ ದುರ್ಬಲ ರಾಷ್ಟ್ರಗಳಿಗೆ ಸಹಾಯ ನೀಡುವುದಕ್ಕಾಗಿ ಹೆಚ್ಚು ಹಣ ತಗಲುವುದೆಂದೂ ಅಧ್ಯಕ್ಷರು ಹೇಳಿದರು. ಇದರಿಂದ ಮುಂದಾಗಲಿರುವ ಅಟ್ಲಾಂಟಿಕ್ ಒಕ್ಕೂಟದಲ್ಲಿ ಸೇರಲು ಅಸಮರ್ಥವಾದ ರಾಷ್ಟ್ರಗಳಿಗೂ ಸಹಾಯ ನೀಡಲು ಅವಕಾಶವಾಗುವುದು.

ಭಾರತದ ಘಟನಾ ಸಮಿತಿ

ಮುಂಬಯಿಯಲ್ಲಿ ಗ. ಜ. ರಾಜಾಜಿ

ಭಾರತದ ಗವರ್ನರ ಜನರಲರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಾ. ೭ರಂದು ಮಧ್ಯಾಹ್ನ ೧-೩೦ಕ್ಕೆ ವಿಶೇಷ ವಿಮಾನದಿಂದ ಮುಂಬಯಿಗೆ ಬಂದರು. ಅಧಿಕಾರ ಸ್ವೀಕಾರದ ನಂತರ ಅವರು ಮುಂಬೈಗೆ ಬಂದದ್ದು ಇದೇ ಮೊದಲ ಸಲ. ಎಂದೇ ಒಳ್ಳೆ ವೈಭವದಿಂದ ಅಧಿಕಾರಿಗಳೂ ಪುರಪ್ರಮುಖರೂ ಅವರಿಗೆ ಸ್ವಾಗತ ನೀಡಿದರು. ಬಂದ ದಿನವೇ ಮುಂಬಯಿ ನಗರ ಸಭೆಯವರು ೯೩೩ ತೊಲೆಯ ಬೆಳ್ಳಿಯ ಕರಂಡಕದಲ್ಲಿ ರಾಜಾಜಿಯವರಿಗೆ ಮಾನಪತ್ರ ಅರ್ಪಿಸಿದರು. ರಾಜಾಜಿ ಇದಕ್ಕೆ ಉತ್ತರ ಕೊಡುತ್ತ, ನಾನೊಬ್ಬ ಸಾಮಾನ್ಯ ಮನುಷ್ಯ. ಇಂತಹ ಪ್ರತಿಷ್ಠಿತರ ಸಭೆಗಿಂತ ಅನ್ಯಸ್ಥಿತ ಸಭೆಗಳಲ್ಲಿ ಭಾಗವಹಿಸುವದೇ ಲೇಸೆಂದು ನನಗೆ ತೋರುತ್ತದೆ. ಕಾಶ್ಮೀರ ಯುದ್ಧ ನಿಲ್ಲುವ ಮೂಲಕ ಭಾರತದ ಹೊಸ ವರ್ಷವು ಶುಭಲಕ್ಷಣಗಳಿಂದ ಮೊದಲಿಸಿದೆ. ನಮ್ಮ ಮುತ್ಸದ್ದಿತನವನ್ನು ಇಡೀ ಜಗತ್ತೇ ಕೊಂಡಾಡಿದೆ. ಇದರಿಂದ ನಮ್ಮ ಮೇಲೆ ಹೊಸ ಹೊಣೆ ಬಂದಿದ್ದು ಅದನ್ನು ಈಡೇರಿಸುವಲ್ಲಿ ಮುಂಬಯಿ ನಗರದ ಪಾತ್ರವು ಬಹು ದೊಡ್ಡದಿದೆಯೆಂದೂ ಮುಂಬರುವ ಮಹಾತ್ಮರ ಪುಣ್ಯದಿನವನ್ನು ಆತ್ಮನಿರೀಕ್ಷೆಯಿಂದ ಆಚರಿಸಿ ಹೊಸ ಹೊಸ ರಾಷ್ಟ್ರನಿರ್ಮಾಪಕ ಕಾರ್ಯಕ್ರಮಗಳ ಬಗ್ಗೆ ಟೊಂಕಕಟ್ಟಬೇಕಲ್ಲದೆ ಭಾವನಾಪರವಶರಾಗಕೂಡದೆಂದೂ ಅವರ ಸುಲಭವಾದ ಸ್ವಭಾವ ಸಹಜವಾದ ಸುಹಾಸದಿಂದ ಕೂಡಿದ ರೀತಿಯಲ್ಲಿ ಹೇಳಿದರು. ಮುಂಬಯಿ ಗವರ್ನರ, ಮುಖ್ಯಮಂತ್ರಿ, ಮುಖ್ಯನ್ಯಾಯಾಧೀಶರು, ನಗರಾಧ್ಯಕ್ಷರು, ವಿದೇಶದ ರಾಯಭಾರಿಗಳು, ಸೇನಾಧಿಕಾರಿಗಳೇ ಮೊದಲಾದ ಅಧಿಕಾರಿಗಳೂ ಇನ್ನಿತರ ಅನೇಕ ಪ್ರತಿಷ್ಠಿತರೂ ಈ ಸಮಾರಂಭಕ್ಕೆ ಆಗಮಿಸಿದ್ದರು. ಮಾನಪತ್ರ ಅರ್ಪಿಸುವ ಸಮಾರಂಭವು ಮಲಬಾರಗುಡ್ಡದ ಮೇಲೆ ಸುಂದರವಾಗಿ ಅಲಂಕರಿಸಲ್ಪಟ್ಟ ಸರ್ ಫಿರೋಜಶಹಾ ಮೇಥಾ ತೋಟದಲ್ಲಿ ಜರುಗಿತು.

ಇದೇದಿನ ಸಂಜೆ ೮೭ ಮಹಿಲಾ ಸಂಸ್ಥೆಗಳ ಪರವಾಗಿಯೂ ಗ. ಜ. ರಾಜಾಜಿಗೆ ಮಾನಪತ್ರ ಅರ್ಪಿಸಲಾಯ್ತು. ಆಗ, ಮಹಿಳೆಯರ ಸಹಕಾರೋದ್ಯೋಗದಿಂದ ರಾಷ್ಟ್ರದ ಅಭಿವೃದ್ಧಿಯಾಗಲಿ ಎಂದು ಉಪದೇಶ ಮಾಡಿದರು.

ತಾ. ೮ರಂದು ಪುಣೆಯಲ್ಲಿ ರಾಜಾಜಿಗೆ ಪುಣೆಯ ನಗರಸಭೆಯವರು ಮಾನಪತ್ರ ಅರ್ಪಿಸಿದರು. ಅಲ್ಲಿ ಮಾತನಾಡುತ್ತ, ಯಾರೂ ದುರಾಗ್ರಹಿಗಳಾಗಬಾರದೆಂದೂ ಈ ಗುಣವನ್ನು ತಾವು ಲೋಕಮಾನ್ಯ ಟಿಳಕರಿಂದ ಕಲಿತೆವೆಂದೂ, ಲೋಕಮಾನ್ಯರು ವಿರೋಧಿ ಪಕ್ಷದವರಿಗೆ ತುಂಬ ಸವಲತ್ತು ತೋರಿಸುತ್ತಿರುವರೆಂದು ತರುಣರಿದ್ದಾಗ ತಮಗೆ ಅನಿಸುತ್ತಿತ್ತೆಂದೂ ಆದರೆ ಮುಂದೆ ಅದರಲ್ಲಿ ಮುತ್ಸದ್ದಿತನವಿತ್ತೆಂಬುದನ್ನು ತಾವು ಮನಗಂಡೆವೆಂದೂ ಶ್ರೀ ಕೇಳಕರರು ತಮಗೆ ರಾಜಕೀಯ ವಿರೋಧಿಗಳಂತಿದ್ದರೂ ತಮ್ಮ ಮಿತ್ರರಾಗಿದ್ದರೆಂದೂ ಹೇಳಿ, ಪುಣೆಯ ನಗರದಲ್ಲಿ ಅಪಾರ ಬುದ್ಧಿಭಾಂಡಾರವಿದ್ದು ಅದನ್ನು ಯಾವ ಸರಕಾರವೂ ಕಸಿದುಕೊಳ್ಳಲಾರದೆಂದು ಉದ್ಗಾರ ತೆಗೆದರು.

ತಾ. ೯ರಂದು ಜಮೀಯತ್-ಉಲ್-ಉಲೇಮಾದವರು ಕೊಟ್ಟ ಮಾನಪತ್ರಕ್ಕೆ ಉತ್ತರ ಕೊಡುತ್ತ ಗ. ಜ. ರಾಜಾಜಿ, ಕಾಶ್ಮೀರದ ಯುದ್ಧ ನಿಂತಿದ್ದರಿಂದ ಭಾರತದಲ್ಲೆಲ್ಲ ಶಾಂತಿ ನೆಲೆಸಿದೆಯೆಂದೂ ಪಾಕಿಸ್ತಾನ ಹಿಂದುಸ್ತಾನಗಳಲ್ಲಿ ತಲೆಯೆತ್ತುತ್ತಿದ್ದ ಅವಿಶ್ವಾಸದ ದ್ವೇಷದ ಭಾವನೆಗಳನ್ನು ತೊಡೆದು ಹಾಕಲು ಹಿಂದುಸ್ತಾನವು ಶಕ್ತಿಮೀರಿ ಪ್ರಯತ್ನಿಸುವದೆಂದೂ ಹೇಳಿದರು. ಇದೇದಿನ ಮುಂಬಯಿ ಪತ್ರಿಕೋದ್ಯೋಗಿಗಳು ತಾಜಮಹಾಲ ಹೋಟೆಲಿನಲ್ಲಿ ಏರ್ಪಡಿಸಿದ ಸತ್ಕಾರಕ್ಕೆ ಉತ್ತರ ಕೊಡುತ್ತ, ಹಿಂದುಸ್ತಾನದ ಪತ್ರಿಕೆಗಳಿಗೆ ಇಂಗ್ಲಂಡದಲ್ಲಿದ್ದಷ್ಟು ಸ್ವಾತಂತ್ರ್ಯವಿದೆಯೆಂದೂ ಒಬ್ಬರನ್ನು ಪ್ರತ್ಯಕ್ಷವಾಗಿ ಗದಿಯುತ್ತಿರುವವಹೊಂದನ್ನು ಬಿಟ್ಟು ಎಲ್ಲ ಬಗೆಯ ಸ್ವಾತಂತ್ರ್ಯವೂ ಪತ್ರಿಕೆಗಳಿಗಿದೆಯೆಂದೂ ಲೇಖನ ಕಲೆಯನ್ನು ಸುಂದರಗೊಳಿಸಬೇಕೆಂದೂ ಹೇಳಿದರು.

ಪುಣೆ ಮುಂಬಯಿಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ತೀರಿಸಿಕೊಂಡು ಗ. ಜ. ರಾಜಾಜಿಯವರು ತಾ. ೧೦ರಂದು ಮಧ್ಯಾಹ್ನ ೧ಕ್ಕೆ ವಿಶೇಷ ವಿಮಾನದಿಂದ ದಿಲ್ಲಿಗೆ ತೆರಳಿದರು. ಅವರನ್ನು ಬೀಳ್ಕೊಳ್ಳಲು ಉಚ್ಚ ಅಧಿಕಾರಿಗಳೇ ಮೊದಲಾದವರು ಬಂದಿದ್ದರು. ಹೊರಡುವ ಪೂರ್ವದಲ್ಲಿ ಗ. ಜ. ರಾಜಾಜಿಯವರಿಗೆ ಶಸ್ತ್ರದಲಗಳು ಗೌರವವನ್ನು ಅರ್ಪಿಸಿದರು.

ಮಂಗಳವಾರ ತಾ. ೪ ರಂದು ಪ್ರಜಾ ಸಭೆಗೆ ಸಂಬಂಧಪಟ್ಟ ಕಲಮು ಚರ್ಚೆಗೆ ಬಂದಿತು. ಮುನ್ನಾದಿನ ರಾ. ಸ್ವ. ಸೇ. ಸಂಘದ ಕೆಲವರು ಪ್ರೇಕ್ಷಕರ ಗ್ಯಾಲರಿಯಲ್ಲಿ ಮತ್ತು ಬಾಗಿಲುಗಳಲ್ಲಿ ಪ್ರವೇಶಿಸಿ ಗೊಂದಲ ಹಾಕಲು ಪ್ರಯತ್ನಿಸಿದರು. ಅದನ್ನು ಕೂಡಲೆ ನಿಯಂತ್ರಿಸಲಾಯಿತು. ಅದರಿಂದ ಪರಿಚಯವಿದ್ದವರಿಗೆ ಮಾತ್ರ ಪ್ರೇಕ್ಷಕರ ಪಾಸುಗಳನ್ನು ಕೊಡತಕ್ಕದ್ದೆಂದು ನಿರ್ಧರಿಸಲಾಯಿತು. ಈ ದಿನವೂ ಉಪಾಧ್ಯಕ್ಷರಾದ ಶ್ರೀ ಎಚ್. ಸಿ. ಮುಕರ್ಜಿಯವರೇ ಅಧ್ಯಕ್ಷಸ್ಥಾನದಲ್ಲಿದ್ದರು.

ಸ್ವತಂತ್ರ ಭಾರತದ ಪ್ರಜಾ ಸಭೆಯಲ್ಲಿ ೫೦೦ಕ್ಕಿಂತ ಹೆಚ್ಚು ಸದಸ್ಯರಿರತಕ್ಕದ್ದಲ್ಲವೆಂದೂ ಮತದಾರರು ಅವರನ್ನು ನೇರವಾಗಿ ಆರಿಸತಕ್ಕದ್ದೆಂದೂ ಘಟನಾ ಸಮಿತಿಯು ಈ ದಿನ ನಿರ್ಣಯಿಸಿತು. ಈ ಕಲಮು ೩ ತಿದ್ದುಪಡಿಗಳೊಡನೆ ಸ್ವೀಕೃತವಾಯಿತು. ಪ್ರಾದೇಶಿಕ ಮತದಾರ ಸಂಘಗಳನ್ನು ರಚಿಸಿ ಪ್ರತಿಯೊಂದು ಸಂಘಕ್ಕೆ ಎಷ್ಟು ಜನ ಸದಸ್ಯರನ್ನಾರಿಸಬೇಕೆಂಬುದನ್ನು ನಿರ್ಣಯಿಸಬೇಕು; ಆದರೆ ಪ್ರತಿ ೭½ ಲಕ್ಷ ಜನಸಂಖ್ಯೆಗೆ ಕನಿಷ್ಠ ಒಂದು ಸ್ಥಳ ಮತ್ತು ೫ ಲಕ್ಷ ಜನಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಸ್ಥಳ ದೊರೆಯದಂತೆ ವ್ಯವಸ್ಥೆಮಾಡಬೇಕು; ಹಿಂದಿನ ಜನಗಣನೆಯ ಸಂಖ್ಯೆಯನ್ನೇ ಈ ವಿಷಯದಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು; ಪ್ರೌಢ ಮತಾಧಿಕಾರವಿರಬೇಕು; ಅಲ್ಪಸಂಖ್ಯಾಕರಿಗೆ ಸ್ಥಳ ಕಾದಿಡಬೇಕು ಎಂದು ಮೊದಲಾಗಿ ಈ ಕಲಮಿನಲ್ಲಿ ಹೇಳಲಾಗಿದೆ.

ತಾ. ೫ ರಂದು ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು, ವಿಲೀನ ಹೊಂದಿದ ಸಂಸ್ಥಾನಗಳನ್ನು ಪ್ರಾಂತಗಳಲ್ಲಿ ಸಂಪೂರ್ಣ ಸಮೀಕರಿಸುವ ಹಿಂದುಸ್ಥಾನ ಕಾಯದೆಯ (೧೯೩೫) ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಅದರ ಮೂರು ವಾಚನಗಳು ಸ್ವೀಕೃತವಾದವು. ಘಟನಾ ಸಮಿತಿಯು ಹಿಂದುಸ್ತಾನದ ಕಾಯದೆಯನ್ನು ಈ ಬಗೆಯಾಗಿ ತಿದ್ದಿದ್ದು ಇದೇ ಮೊದಲ ಸಲ.

ಅಖಿಲ ಭಾರತಕ್ಕಾಗಿ ಔದ್ಯೋಗಿಕ ಕಲಹ ನಿವಾರಕ ನ್ಯಾಯಮಂಡಲ ನೇಮಿಸುವ, ಚಲಚ್ಚಿತ್ರ ಪರಿಶೀಲನಾ ಮಂಡಲ ಸ್ಥಾಪಿಸುವ, ಕೇಂದ್ರ ಸರಕಾರದ ಔದ್ಯೋಗಿಕ ಧೋರಣೆಯನ್ನು ಯಶಸ್ವಿಯಾಗಿ ಕಾರ್ಯಕಾರಿಯಾಗಿ ಮಾಡುವ ಮತ್ತು ಇದೇ ಮಾರ್ಚ ತಿಂಗಳಲ್ಲಿ ಅವಧಿ ಮುಗಿಯುತ್ತಿದ್ದ ಮದ್ರಾಸ, ಮುಂಬೈ ಬಿಹಾರ ಪ್ರಾಂತಗಳ ವಿಧಿಮಂಡಲಗಳ ಸದಸ್ಯರ ಅವಧಿಯನ್ನು ಹೆಚ್ಚಿಸುವ ಅಧಿಕಾರವನ್ನೂ ಈ ಮಸೂದೆಯು ಕೇಂದ್ರ ಸರಕಾರಕ್ಕೆ ಕೊಡುತ್ತದೆ.

ಈ ಮಸೂದೆಯನ್ನು ಮಂಡಿಸಿ ಸರದಾರ ವಲ್ಲಭಭಾಯಿ ಪಟೇಲರು ದೀರ್ಘ ಭಾಷಣ ಮಾಡಿದರು. ನಂತರ ಚರ್ಚೆಯೂ ಆಯಿತು. ಅದಕ್ಕೆ ಪಟೇಲರು ನಿರ್ಧಾರದ ಉತ್ತರವನ್ನು ಕೊಟ್ಟರು. ಪಟೇಲರು ಟೀಕೆಗೆ ಉತ್ತರ ಕೊಟ್ಟು ತಮ್ಮ ಭಾಷಣ ಮುಗಿಸಿದಾಗ ಸಭೆಯು ಪ್ರಚಂಡ ಕರತಾಡನದಿಂದ ಹರ್ಷವನ್ನು ಸೂಚಿಸಿತು.

ತಾ. ೬ ರಂದು ಪ್ರಾಂತಿಕ ಕಾಯದೆ ಮಂಡಲಗಳ ರಚನೆಯನ್ನು ಕುರಿತು ಚರ್ಚೆಯು ನಡೆದು ಮದ್ರಾಸ, ಮುಂಬಯಿ, ಸಂಯುಕ್ತ ಪ್ರಾಂತ, ಪೂರ್ವ ಪಂಜಾಬ, ಪಶ್ಚಿಮ ಬಂಗಾಲ, ಬಿಹಾರ ಈ ೬ ಪ್ರಾಂತಗಳಲ್ಲಿ ಮೇಲ್ಮನೆಗಳು ಇರಬೇಕೆಂದೂ ಅಸಾಮ, ಓಡಿಸಾ, ಮಧ್ಯಪ್ರಾಂತಗಳಲ್ಲಿ ಮಾತ್ರ ಕೆಳಮನೆಗಳಷ್ಟೇ ಇರಬೇಕೆಂದೂ ನಿರ್ಣಯಿಸಲಾಯ್ತು.

ಕೆಳಮನೆ (ಶಾಸನಸಭೆ)ಯ ಸದಸ್ಯರ ಪರಮಾವಧಿ ಸಂಖ್ಯೆಯು ೩೦೦ ಇರಬೇಕೆನ್ನುವ ಕಲಮಿಗೆ ಡಾ. ಅಂಬೇಡಕರರು ತಿದ್ದುಪಡಿ ತಂದು ಆ ಸಂಖ್ಯೆಯನ್ನು ೪೫೦ಕ್ಕೆ ಏರಿಸಬೇಕೆಂದು ಸೂಚಿಸಿದರು. ಈ ಬಗ್ಗೆ ಇಂದು ನಡೆದ ಚರ್ಚೆಯು ಮುಗಿಯಲೇ ಇಲ್ಲ. ಮರುದಿನವೂ (ತಾ. ೭) ಈ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯವೇ ಕಂಡು ಬಂದುದರಿಂದ ಪ್ರಾಂತಿಕ ಶಾಸನ ಸಭೆಗಳ ರಚನೆಯನ್ನು ಮುಂದೂಡುತ್ತ ಅಧ್ಯಕ್ಷ ಸ್ಥಾನದಲ್ಲಿದ್ದ ಶ್ರೀ ಮುಕರ್ಜಿಯವರು, ಸದಸ್ಯರು ಈ ಬಗ್ಗೆ ಒಮ್ಮತಕ್ಕೆ ಬರುವದಾಗಿ ಹಾರೈಸಿದರು.

ಅನಂತರ (ತಾ. ೭) ಅ್ಯಟರ್ನಿ ಜನರಲರನ್ನು ನಿಯಮಿಸುವ ಕಲಮು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟು ಅದು ಸ್ವೀಕೃತವಾಯಿತು. ಹಿಂದುಸ್ತಾನ ಸರಕಾರಕ್ಕೆ ಕಾಯದೆ ಸಲಹೆ ಕೊಡುವದೇ ಈ ಅ್ಯಟರ್ನಿ ಜನರಲರ ಕೆಲಸವಾಗಿದೆ.

ಸರಕಾರದ ಕಾರ್ಯನಿರ್ವಾಹಕ ಚಟುವಟಿಕೆಗಳು ಅಧ್ಯಕ್ಷರ ಹೆಸರಿನಲ್ಲಿಯೆ ನಡೆಯಬೇಕೆನ್ನುವ ಕಲಮು ಕೂಡ ಇಂದು ಅಂಗೀಕೃತವಾಯಿತು.

ತಾ. ೮ ರಂದು, ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಮಂಡಿಸಿದ ೧೯೫೦ ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಲು ಪ್ರಾಂತ ಹಾಗೂ ಸಂಸ್ಥಾನಗಳ ಅಧಿಕಾರಿಗಳಿಗೆ ತಿಳಿಸಬೇಕೆಂಬ ಗೊತ್ತುವಳಿಯು ಡಾ. ಅಂಬೇಡಕರರ ತಿದ್ದುಪಡಿಯೊಂದಿಗೆ ಅಂಗೀಕರಿಸಲ್ಪಟ್ಟಿತು. ಈ ಗೊತ್ತುವಳಿಯನ್ನು ಅಧ್ಯಕ್ಷ ಸ್ಥಾನದಲ್ಲಿದ್ದ ಉಪಾಧ್ಯಕ್ಷರಾದ ಶ್ರೀ ಮುಕರ್ಜಿಯವರೇ ಮಂಡಿಸತಕ್ಕವರಿದ್ದರು. ಅವರೆ ಈ ಮಂಡನೆಯ ಔಚಿತ್ಯದ ಬಗ್ಗೆ ಚರ್ಚೆಯಾಗಿ ಕೊನೆಗೆ ಪಂ. ಜವಾಹರಲಾಲರು ಅದನ್ನು ಮಂಡಿಸಿದರು.

ಈ ಗೊತ್ತುವಳಿಯ ಅಭಿಪ್ರಾಯವು ಹೀಗಿದೆ:-

(೧) ೧೯೫೦ ರಲ್ಲಿ ಆದಷ್ಟು ಬೇಗ ಹಿಂದುಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಬೇಕು. (೨) ಈ ಸಭೆಯು ಸ್ವೀಕರಿಸಿದ ಕೆಳಗೆ ಕಾಣಿಸಿದ ಹೊಸ ನಿಯಮಗಳನ್ವಯ ಮತದಾರರ ಪಟ್ಟಿಯು ಸಿದ್ಧವಾಗಬೇಕು. (೩) ನ್ಯಾಯಾಲಯವು ಹುಚ್ಚನೆಂದು ತೀರ್ಮಾನಿಸಿದವನ ಹೆಸರು ಮತದಾರ ಪಟ್ಟಿಯಲ್ಲಿ ಇರತಕ್ಕದ್ದಲ್ಲ. (೪) ಮತದಾರನ ವಯಸ್ಸನ್ನು ೧-೧-೪೯ ರ ವರೆಗೆ ಎಣಿಸಬೇಕು. (೫) ಯಾವನೊಬ್ಬನು ಜೀವದ ಹೆದರಿಕೆಯಿಂದ ಬೇರೆ ಕಡೆಗೆ ಹೋಗಿದ್ದರೆ ಅವನು ಮುಂದೆ ಅಲ್ಲಿಯೇ ಇರುವದಾಗಿ ಜಾಹೀರು ಮಾಡಿದರೆ ಅವನಿಗೆ ಮತಾಧಿಕಾರ ದೊರೆಯುವದು. ಇತ್ಯಾದಿ ಅಂಶಗಳು ಈ ಕಲಮಿನಲ್ಲಿವೆ.

ಮುನ್ನಾದಿನ ಮುಂದೆ ನೂಕಲ್ಪಟ್ಟ ಪ್ರಾಂತಿಕ ಶಾಸನಸಭೆಗಳ ರಚನೆಯ ಗೊತ್ತುವಳಿಯು ಶ್ರೀ ಸೆಕ್ಸೆನಾ ಅವರ ತಿದ್ದುಪಡಿಯೊಂದಿಗೆ ಸ್ವೀಕೃತವಾಯಿತು. ಈ ಕಲಮಿನಲ್ಲಿ ಪ್ರಾಂತಿಕ ಶಾಸನಸಭೆಗಳ ಸದಸ್ಯರ ಪರಮಾವಧಿ ಸಂಖ್ಯೆಯು ೫೦೦ ಇರತಕ್ಕದ್ದೆಂದೂ ೭೫ ಸಾವಿರ ಜನಸಂಖ್ಯೆಗೊಂದು ಪ್ರಾತಿನಿಧ್ಯವಿರಬೇಕೆಂದೂ ಇದೆ.

ಘಟನಾ ಸಮಿತಿಯ ಸಭೆಯು ಇಂದು ಇಷ್ಟಕ್ಕೆ ಮುಗಿದು ಮೇ ತಾ. ೧೬ ರ ವರೆಗೆ ಮುಂದೆ ಹಾಕಲ್ಪಟ್ಟಿತು.

ಜನಮತ

ರಸಿಕರಂಜನೆ

ಮಾನ್ಯರೆ,

ಸಂಪಾದಕರು, ದಿಗ್ದರ್ಶಕರು ಇವರ ಹೊಣೆ ಒಂದೇ ಬಗೆಯದೆಂದು ನನಗೆ ಅನಿಸುತ್ತದೆ. ನಮ್ಮ ನಾಡಿನ ಕೆಲವು ಪತ್ರಿಕೆಗಳು ತಮ್ಮ ಧನಬಲದಿಂದ ಉತ್ತಮ ಸಾಹಿತಿಗಳಿಂದ ಲೇಖನಗಳನ್ನು ಗಳಿಸಿಕೊಂಡರೂ ಸಂಪಾದಕತ್ವದ ಜಾಣ್ಮೆ ಇಲ್ಲದ್ದಕ್ಕಾಗಿ ರಸಿಕರನ್ನು ತಣಿಸದೆ ಪಟ್ಟ ಶ್ರಮ ವ್ಯರ್ಥವಾದಂತಾಗುತ್ತದೆ. ಇದೇ ಮಾತನ್ನು ಸಿನೆಮಾದಿಗ್ದರ್ಶಕರಿಗೂ ಅನ್ವಯಿಸಬಹುದು. ಉದಾ: 'ವಸಂತಸೇನೆ'ಯಲ್ಲಿ ಚಾರುದತ್ತನ ' ಕುಲಪತ್ನಿಯನ್ನು ಕಂಡರೆ ಯಾರಿಗೂ ಪೂಜ್ಯಭಾವ ಉದಯಿಸಬೇಕು, ಎನ್ನುವಂತಹ ಸರಳ, ಮನೋಹರಭಾವ ಕಾಯ್ದುಕೊಳ್ಳಲು ಅವಕಾಶ ಇದೆ. ಹಾಗೆ "ಜೀವನ ನಾಟಕ"ದಲ್ಲಿ ಮೋಹನಕುಮಾರಿಯೂ ಬೆಳಗಿದ್ದಾಳೆ. ಇದೇ ಈ ಇಬ್ಬರೂ ಅಭಿನಯಗಾರ್ತಿಯರು "ರಾಧಾರಮಣ"ದಲ್ಲಿ ಕಾಲಿಟ್ಟಾಗ "ಯಾವಗಿಡದ ತೊಪ್ಪಲೊ?" ಆಗಿಬಿಟ್ಟಿದ್ದಾರೆ. ಇದರ ಮೇಲಿಂದ ಅಭಿನಯಕಾರರಲ್ಲಡಗಿದ್ದ ರೂಪ, ವಿದ್ಯೆ ಇವುಗಳನ್ನು ಸರಿಯಾದ ರೀತಿಯಲ್ಲಿ ವಿಕಾಸಗೊಳಿಸಿ ಕಲೆಯ ಔನ್ನತ್ಯ ಕಂಡುಕೊಳ್ಳುವಲ್ಲಿ ದಿಗ್ದರ್ಶಕನ ಚತುರತೆಯ ಅವಶ್ಯಕತೆ ಇದ್ದಂತೆಯೇ ಲೇಖಕರಲ್ಲಡಕವಾಗಿದ್ದ ವಿದ್ಯೆ, ವಿಚಾರವಾಹಿನಿಗಳನ್ನು ಸುಗಮವಾದ ದಾರಿಯಲ್ಲಿ ಸಾಗಿಸಿ ರಸಿಕರಂಜನೋದ್ಯಾನಕ್ಕೆ ಫಲವನ್ನೀಯುವದು ಕುಶಲ ಸಂಪಾದಕರನ್ನೇ ಕೂಡಿದೆ ಎಂಬುದು ನಿರ್ವಿವಾದವಾದ ಮಾತಾಗಿದೆ. ನಾಯಿಕೊಡೆಗಳಂತೆ ದಿನದಿನವೂ ಹೆಚ್ಚುತ್ತ ನಡೆದ ಸಂಪಾದಕರು, ದಿಗ್ದರ್ಶಕರು ಇತ್ತ ಗಮನಿಸುವರೇ?

ರಾ. ಶೀ.

ಈ ದುರಂತ ನಿಯಂತ್ರಣಗಳನ್ನು ಕೊನೆಗೊಳಿಸಬೇಕು

★ ದೇಶದಲ್ಲಿ ನಿಯಂತ್ರಣಕ್ಕೆ ಅನುಕೂಲ ಸ್ಥಿತಿಯಿಲ್ಲ

★ ಅದು ನೀತಿಭ್ರಷ್ಟತೆ ಕಷ್ಟನಿಷ್ಠುರಗಳಿಗೆ ಪೋಷಕ

"ಹರಿಜನ"ದಲ್ಲಿ ಪತ್ರಕಾರರೊಬ್ಬರ ಲೇಖ ಮತ್ತು ಅದಕ್ಕೆ ಶ್ರೀ ಕಿ. ಘ. ಮಶ್ರೂವಾಲಾರ ಉತ್ತರ

"ಸರ್ವೋದಯಕ್ಕಾಗಿ ನಿಯಂತ್ರಣಗಳು" ಎಂಬ ತಲೆ ಬರಹದ ಕೆಳಗೆ ನೀವು ನಿಯಂತ್ರಣಗಳ ಸಮಸ್ಯೆಯನ್ನು ವಿಚಾರಿಸಿ ಆ ವಿಷಯದಲ್ಲಿ ನಿಮ್ಮ ಅಭಿಪ್ರಾಯಗಳನ್ನೂ ಸೂಚನೆಗಳನ್ನೂ ಕೊಟ್ಟದ್ದರಿಂದ ನನಗೆ ಸಂತೋಷವಾಗಿದೆ.

"ಆದರೂ ನಿಮ್ಮ ವಿಚಾರಗಳನ್ನು ನಾನು ಒಪ್ಪುವದಿಲ್ಲ. ನೀವನ್ನುತ್ತೀರಿ,— ಈ ಸಮಸ್ಯೆ ಸರ್ವಥಾ ಅತಿ ಸರಳವಲ್ಲ, ಬದಲಿಗೆ ಅದು ಬಹಳ ಜಟಿಲವಾಗಿದೆ; ತನ್ನ ಸ್ವಂತ ವಿಚಾರಗಳೇ ಸರಿ, ಅವೇ ಧರ್ಮ್ಯ ಎಂಬ ಚಿತ್ತವೃತ್ತಿ ಸಲ್ಲದು; ತನ್ನ ವಿಚಾರಗಳಿಗೆ ಸರಿಹೋಗದ ಧೋರಣೆಗಳನ್ನು ಧಿಕ್ಕರಿಸುವದು ಯಾರಿಗೂ ಹಿತಕರವಲ್ಲ, ಎಂದು. ನೀವು ನನ್ನ ಎರಡೂ ಲೇಖಗಳನ್ನು ಓದಿದರೆ 'ಸುಕ್ಷಮ ನಿಯಂತ್ರಣ' ಎಂಬ ಚರ್ವಿತ ಚರ್ವಣ ಉಪಾಯವನ್ನು ನಾನು ಇಲ್ಲಿ ಸೂಚಿಸಿಲ್ಲವೆಂದು ನಿಮಗೆ ಅರಿವಾಗದಿರದು. ನಾನೆನ್ನುವದಿಷ್ಟೆ: ಸರಕಾರ ಇನ್ನು ಮೇಲೆ ಇದರಲ್ಲಿ ಹೆಚ್ಚು ಕೈಹಾಕದೆ ದೇಶದ ಅರ್ಥವ್ಯವಸ್ಥೆಯನ್ನು ಪೂರ್ವಸ್ಥಿತಿಗೆ ತಂದು ನಿಲ್ಲಿಸಲಿ: ಆಗ ಇವೆಲ್ಲ ಕಷ್ಟಕ್ಲೇಶಗಳು ಅವಶ್ಯವೇ ಎಂಬದನ್ನು ಎಣಿಸಿ ನೋಡಲು ಜನರಿಗೆ ಅನುಕೂಲವಾಗುವದು. ಏನಾದರೂ ತಪ್ಪಿದ್ದರೆ ಅದನ್ನು ಸರಿಹೊಂದಿಸುವದು ಬೇರೆ, ಈಗಾಗಲೆ – ತೊಡಕುತೊಡಕಾಗಿರುವದನ್ನು ಇನ್ನಷ್ಟು ಹದಗೆಡಿಸುವ ಮಾತು ಬೇರೆ.

ನಿಯಂತ್ರಣೀಯ ಸ್ಥಿತಿಯಿಲ್ಲ

"ನನ್ನನ್ನು ಕೇಳಿದರೆ, ನಿಯಂತ್ರಣಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಬೇಕಾದ ಸ್ಥಿತಿಗತಿಗಳು ಭಾರತದಲ್ಲಿ ಇದ್ದಿಲ್ಲ, ಈಗಲೂ ಇಲ್ಲ. ಬೇರೊಂದು ದೇಶದ ಮಾದರಿಯನ್ನು ಇದ್ದಕ್ಕಿದ್ದಂತೆ ಅಳವಡಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲ. ಇಂಗ್ಲಂಡು ಹಲವು ದೇಶಗಳಿಗೆ ಹಲವು ಬಗೆಯಾಗಿ ಋಣಿಯಾಗಿದೆ, ಎಂತಲೇ ಅಲ್ಲಿ ನಿಯಂತ್ರಣಗಳು ಅವಶ್ಯವಾಗಿವೆ; ಆದುದರಿಂದಲೇ ಅವು ಅಲ್ಲಿ ಯಶಸ್ವಿಯೂ ಆಗಿವೆ. ಅಲ್ಲಿ ಕೂಡ, ರೊಟ್ಟಿಯ ವಿಷಯದಲ್ಲಿ ದೇಶ ಸರ್ವಥಾ ಪರಾವಲಂಬಿಯಾಗಿದ್ದರು ಸಹಿತ, ಯುದ್ಧ ಕಾಲದಲ್ಲಿ ಎಂದೂ ರೊಟ್ಟಿಯ ನಿಯಂತ್ರಣವಿರಲಿಲ್ಲ; ಈಗ ನಿಯಂತ್ರಿತವಾಗಿದ್ದರೂ ಅದು ಯಥಾವಶ್ಯಕ ಪ್ರಮಾಣದಲ್ಲಿ ಹಂಚಲ್ಪಡುತಿರುವ ಕಾರಣ ಕಳ್ಳಪೇಟಿಗೆ ಅಸ್ಪದವೇ ಇಲ್ಲ. ಭಾರತವು ಕೃಷಿಜೀವಿ ದೇಶ; ತನಗೆ ಬೇಕಾದುದರಲ್ಲಿ ನೂರಕ್ಕೆ ೯೦—೯೫ ಅಂಶದಷ್ಟು ಇಲ್ಲಿ ಬೆಳೆಯುತಿದ್ದು ಉಳಿದುದನ್ನು ಮಾತ್ರ ಹೊರಗಿನಿಂದ ತರಿಸಲಾಗುತಿದೆ. ಸೀದಾದಲ್ಲಿ ಜನರಿಗೆ ಈಗ ದೊರೆಯುತಿರುವ ಅಲ್ಪಾಂಶದ ಬದಲು ಅವಶ್ಯವಿದ್ದಷ್ಟು ಧಾನ್ಯವನ್ನು ಹಂಚಿದರೆ ಇಲ್ಲಿಯೂ ಕಳ್ಳಪೇಟಿಗೆ ಎಡೆ ದೊರೆಯದು, ಯಾವ ಚಿಂತೆಗೂ ಅವಕಾಶವಿರದು. ೮ ಔಂಸಿನ ಇಲ್ಲವೆ ೧೨ ಔಂಸಿನ ಶಾಸನೋಕ್ತ ಸೀದಾ ಕಾಳುಗಳು ಬಡ ಕೂಲಿಕಾರನಿಗೆ ಎಷ್ಟೂ ಸಾಲವು; ಆದರೆ ಮಧ್ಯಮವರ್ಗದ ಇಲ್ಲವೆ ಶ್ರೀಮಂತ ವರ್ಗದ ಜನಕ್ಕೆ ಇದೂ ಬಹಳ ಹೆಚ್ಚೇ ಸರಿ. ಇನ್ನು ಬಟ್ಟೆ ಸೀದಾವನ್ನು ತೆಗೆದುಕೊಳ್ಳಿರಿ: ಇದರ ಶಾಸನೋಕ್ತ ಪ್ರಮಾಣ ತಲಾ ೧೧॥ ಗಜ. ಯಾವ ನಾಗರಿಕ ಮನುಷ್ಯನೂ ಇಷ್ಟೊಂದು ಬಟ್ಟೆಯಿಂದ ಮೈಮುಚ್ಚಿಕೊಳ್ಳಲಾರ; ಇದರ ಅರ್ಥವೇನಂದರೆ ಸರಕಾರ ಅವನನ್ನು ಚಂಡಿಗೆ ಕೈಕೊಟ್ಟು ಕಳ್ಳಪೇಟೆಯತ್ತ ದೂಡುತಿದೆ. ಒಲ್ಲದಿದ್ದರೆ ಆತಗೆ ಬತ್ತಲೆ ತಿರುಗುವದೇ ಶರಣು. ಇಂಥ ತಲಾ ಪ್ರಮಾಣದಂಥ ಅರ್ಥಹೀನ ಸಂಗತಿ ಬೇರೊಂದು ದೊರಕದು. ಇಷ್ಟೇ ಸಾಲದೋ ಎಂಬಂತೆ, ಈ ಸೀದಾದಿಂದಲೇ ಸಂತುಷ್ಟರಾಗಿರಬೇಕೆಂದು ಜನರಿಗೆ ಉಪದೇಶ ಕೊಡುವ ಜಾಹಿರಾತುಗಳು ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಬರುತಿವೆ. ಇದೊಂದು ದುಂದುಗಾರಿಕೆಯೆ ಸೈ, ಏಕೆಂದರೆ ಯಾರೂ ಈ ಜಾಹಿರಾತುಗಳಿಗೆ ಮರುಳಾಗುವ ಸಂಭವವಿಲ್ಲ. ಈ ಜಾಹಿರಾತುಗಳನ್ನು ಬರೆದ ಮಹನೀಯರು ಸ್ವತಃ ಇಷ್ಟು ಬಟ್ಟೆಯಿಂದಲೇ ಕಾಲಯಾಪನೆ ಮಾಡಬಲ್ಲರೆ ಎಂದು ನಾನು ಶಂಕಿಸುತ್ತೇನೆ. ನಿಜ ಹೇಳಬೇಕೆಂದರೆ, ನಿಯಂತ್ರಣಾತ್ಪೂರ್ವದಲ್ಲಿ ಕೂಡ ನೂರಕ್ಕೆ ತೊಂಬತ್ತರಷ್ಟು ಇಲ್ಲವೆ ಅದಕ್ಕಿಂತಲೂ ಹೆಚ್ಚು ಜನರು ಅರಬತ್ತಲೆಯಾಗಿಯೆ ದಿನ ದೂಡುತ್ತಿದ್ದರು. ಉದ್ಯಮ ಮತ್ತು ಪೂರೈಕೆಯ ಮಂತ್ರಿಗಳು ಹಳ್ಳಿಗಳಿಗೆ ಹೋಗಿ ನೋಡಲಿ,ಆಗ ತಮ್ಮೀ ತಲಾ ಪ್ರಮಾಣದ ಹಂಚಿಕೆ ಹೇಗೆ ಕಳ್ಳಪೇಟೆಗಳ ಪೋಷಣೆ ಮಾಡುತಿದೆ, ಜನರು ಇದರಿಂದ ಹೇಗೆ ನೀತಿಬಾಹಿರರು ಕೂಡ ಆಗಿದ್ದಾರೆ ಎಂಬ ಮಾತಿಗೆ ಅವರ ಮೈಮೇಲಿನ ಬಟ್ಟೆಗಳೇ ಸಾಕ್ಷಿ ನುಡಿಯಬಹುದು.

ಪ್ರಾಂತೀಯತೆಯ ಪೋಷಣೆಗಾಗಿ

"ಪ್ರಾಂತೀಯತೆಯ ರಾಕ್ಷಸನ ಹೊಟ್ಟೆ ಹೊರೆಯಲೆಂದೇ ಈ ನಿಯಂತ್ರಣಗಳನ್ನು ಉಳಿಸಿಕೊಳ್ಳುವ ಹವಣಿಕೆಯಿದೆಯೆಂದು ನನ್ನ ನಂಬಿಕೆ; ಆಯಾ ಪ್ರಾಂತದವರಲ್ಲದ ವ್ಯಾಪಾರಿ ವರ್ಗವನ್ನು ಗಡಿಪಾರು ಮಾಡಲು ಇದೊಂದು ಹಂಚಿಕೆ. ಈ ಎಲ್ಲ ಸೀದಾ ಮತ್ತು ನಿಯಂತ್ರಣಗಳನ್ನು ಪ್ರಾಂತದವರಿಗೆ ಪೂರ್ವಪ್ರಾಧಾನ್ಯ ಕೊಡುವ ಸಲುವಾಗಿ ಉಪಯೋಗಿಸಿಕೊಳ್ಳಲಾಗಿದೆ ಮತ್ತು ತನ್ಮೂಲಕ, ಆ ವ್ಯವಹಾರದಲ್ಲಿ ಪೂರ್ವಜರ ಕಾಲದಿಂದ ನುರಿತ ಸಂಸ್ಥೆಗಳನ್ನೂ ಜನರನ್ನೂ ಬಹಿಷ್ಕರಿಸಲಾಗಿದೆ. ನಿಯಂತ್ರಣಾಧಿಕಾರಿಗಳಿಂದ ಸೃಷ್ಟಿಸಲ್ಪಟ್ಟ ಈ ಹೊಸಬರೇ ಕಳ್ಳಪೇಟೆಗೆ ಕಾರಣರು.

"ಇನ್ನು ನಿಯಂತ್ರಣಗಳ ವ್ಯಾಪಾರದ ಕೆಲ ನಿರ್ದಿಷ್ಟ ಉದಾಹರಣೆಗಳನ್ನು ಕೊಡುವೆ. ಧೋರಣೆಯ ತರಹದಿಂದ ಆಹಾರ ಧಾನ್ಯಗಳ ವಿನಿಯಂತ್ರಣ ೧೯೪೮ರ ಜನವರಿಯಲ್ಲಿ ಕೈಕೊಳ್ಳಲ್ಪಟ್ಟಿತು. ಆದರೆ ಆ ಮೇಲೂ ಪ್ರಾಂತ ಪ್ರಾಂತಗಳ ನಡುವಿನ ಸಾಗಾಟ ಸರಕಾರಿ ರೀತಿಯಿಂದಲೇ ನಡೆಯಬೇಕಾಗಿತ್ತು.ಅವರು ಮಾರುತಿದ್ದ ಅಕ್ಕಿ ಸ್ವಪ್ರಾಂತದ್ದೋ ಇಲ್ಲ,ಬೇರೆ ಪ್ರಾಂತಗಳಿಂದ ಆಯಾತ ಮಾಡಿದ್ದೋ ಎಂದು ವ್ಯಾಪಾರಿಗಳನ್ನು ಕೇಳಿದೆ. ಉತ್ತಮ ತರದ ಅಕ್ಕಿ ಪ್ರಾಂತದಲ್ಲಿ ದೊರೆಯುವದಿಲ್ಲವಾದುದರಿಂದ ಅದು ಪರ ಪ್ರಾಂತಗಳಿಂದ ಬರುತ್ತದೆಂದು ತಿಳಿಯಿತು. ಆದರೆ ಅದು ಬರುತ್ತಿದ್ದುದು ಪ್ರಾಂತ ಪ್ರಾಂತಗಳೊಳಗಿನ ಕೊಟ್ಟುಕೊಳ್ಳುವ ಕ್ರಮದಿಂದಾಗಿರದೆ, ಖಾಸಗಿ ವ್ಯಾಪಾರದ ಗುಪ್ತ ಮಾರ್ಗಗಳಿಂದ ಎಂದೂ ಗೊತ್ತಾಯಿತು. ಅರ್ಥಾತ್ ಅತಿರಿಕ್ತ ಸಂಗ್ರಹವನ್ನು ಶೇಖರಿಸಿ ಸಕಾಲದಲ್ಲಿ ಅದನ್ನು ಸಸ್ಥಾನಕ್ಕೆ ಸಾಗಿಸುವದು ಸರಕಾರಕ್ಕೆ ಸಾಧ್ಯವಾಗುತಿದ್ದಿಲ್ಲ. ಸ್ಥಾನಿಕ ಅಧಿಕಾರಿಗಳು ಸಾಗಾಟಕ್ಕೆ ಅಡ್ಡಗಾಲು ಹಾಕುತ್ತಾರೆ. ಆ ಸ್ವಾಭಾವಿಕ ಕೊರತೆಗಳುಂಟಾಗಲಿ, ತಮಗೆ ಕೈ ಬೆಚ್ಚಗಾಗಲಿ ಎಂಬದು ಅವರ ಗುರಿ. ಸಿಮೆಂಟಿನ ಉದಾಹರಣೆಯನ್ನೆ ತೆಗೆದುಕೊಳ್ಳಿರಿ: ಭಾರತದಲ್ಲಿರುವ ಕಾರಖಾನೆಗಳು ಯಥಾಶಕ್ತಿ ಉತ್ಪಾದನೆ ಮಾಡುತಿರುವದಿಲ್ಲ; ಆದರೆ ವಿದೇಶಿ ಸಿಮೆಂಟನ್ನು ತರಿಸಿ ಸ್ವದೇಶಿಗಿಂತ ಹೆಚ್ಚು ಬೆಲೆಗೆ ಮಾರಲಾಗುತ್ತಿದೆ. ಸಾಗಿಸುವ ಏರ್ಪಾಡನ್ನು ತಾವೇ ಮಾಡಿಕೊಳ್ಳುವೆವೆಂದು ಹೇಳಿದರೂ ಎಷ್ಟೋ ಜನರಿಗೆ ಸಿಮೆಂಟಿನ ಅಪ್ಪಣೆ ಚೀಟಿಯನ್ನು ಅಧಿಕಾರಿಗಳು ನಿರಾಕರಿಸಿದ ಉದಾಹರಣೆಗಳನ್ನು ಕೊಡಬಲ್ಲೆ. ಚೀಟಿಗಳನ್ನು ಕೊಟ್ಟಾಗ ಕೂಡ, ಹತ್ತಿರದಲ್ಲಿ ಸಿಮೆಂಟ ಕಾರಖಾನೆಗಳಿದ್ದರೂ ದೂರದೂರದವುಗಳಿಂದ ಕೊಳ್ಳಬೇಕೆಂದು ಇಲ್ಲವೆ ಚೀಟಿ ಪಡೆದವರೇ ಅದನ್ನು ಸಾಗಿಸುವ ಏರ್ಪಾಡು ಮಾಡಿಕೊಳ್ಳಬೇಕೆಂದು ವಿಧಿಸಲಾಗುತ್ತಿದೆ. ಇನ್ನು ಕಬ್ಬಿಣ ಉಕ್ಕುಗಳ ನಿದರ್ಶನ : ಒಬ್ಬನಿಗೆ ಒಳನಾಡಿನ ಊರುಗಳಲ್ಲಿ ಉಪಯೋಗಿಸಲು ಸ್ವಲ್ಪ ಕಬ್ಬಿಣವೋ ಉಕ್ಕೋ ಬೇಕೆಂದಿಟ್ಟುಕೊಳ್ಳಿರಿ. ಅವನಿಗೆ ಅದು ಉತ್ಪಾದಕ ಕೇಂದ್ರಗಳಲ್ಲಿ ಸಿಗುವದಿಲ್ಲ; ಬದಲಿಗೆ ನಾಗಪುರ, ಮುಂಬಯಿ, ಕಾನಪೂರ, ಮದ್ರಾಸ್ ಮೊದಲಾದ ಪ್ರಾಂತಿಕ ರಾಜಧಾನಿಗಳಲ್ಲಿ ಕೊಳ್ಳಬೇಕು. ಇದರ ಪರಿಣಾಮವೆಂದರೆ, ಇದ್ದಬಿದ್ದ ವಾಹನ ಸೌಕರ್ಯಗಳ ದುರುಪಯೋಗ. ಒಮ್ಮೆ ಅದನ್ನು ಪ್ರಾಂತಿಕ ರಾಜಧಾನಿಗೆ ಒಯ್ಯಬೇಕು, ಅಲ್ಲಿಂದ ತಿರುಗಿ ಬೇರೆ ಬೇರೆ ಸ್ಥಳಗಳಿಗೆ ಸಾಗಿಸಬೇಕು. ಸರಾಗವಾದ ಸಾಗಾಟಕ್ಕೆಡೆಯಿದ್ದರೆ ಸರಕುಗಳು ನೇರವಾಗಿ ಅವು ಬೇಕಾದ ಸ್ಥಳಗಳಿಗೆ ಹೋಗಬಹುದು, ಮಾತ್ರವಲ್ಲ ಅದೇ ಸರಕಿನ ಡಬ್ಬಿಯಲ್ಲಿ ಆ ಸ್ಥಳದಿಂದ ಮತ್ತೇನಾದರೂ ಸಾಮಗ್ರಿಯನ್ನು ತರಬಹುದು.

ವ್ಯರ್ಥ ಭಯ

"ವಿನಿಯಂತ್ರಣವಾದ ಬೆನ್ನಿಗೇ ಬೆಲೆಗಳು ಏರುವದನ್ನು ನೋಡಿ ಪಾಮರ ಜನರು ವ್ಯರ್ಥವಾಗಿ ಗಾಬರಿಯಾಗುತ್ತಾರೆ. ಅಲ್ಪಸ್ವಲ್ಪ ಏರುವದೇನೊ ನಿಜ. ಆದರೆ ಅದು ಅನಿವಾರ್ಯವೇ ಸೈ. ನಿಯಂತ್ರಣದ ಕಾಲದಲ್ಲಿ ಸಾಮಗ್ರಿಗಳು ಅಗ್ಗವಾಗಿ ಸಿಗುತಿದ್ದವು, ಅಥವಾ ಸಮೃದ್ಧವಾಗಿರುತಿದ್ದವು. ವಿನಿಯಂತ್ರಣದಿಂದ ತದ್ವಿಪರೀತಾವಸ್ಥೆ ಮೊದಲಿಟ್ಟಿತು ಎಂಬ ಮಾತು ನಿಜವಲ್ಲ. ನಿಯಂತ್ರಣಗಳನ್ನು ಯಶಸ್ವಿಯಾಗಿ, ಒಂದೆರಡು ವರ್ಷವಲ್ಲ, ಹತ್ತಾರು ವರ್ಷಗಳ ವರೆಗೆ ಸಾಗಿಸಿಕೊಂಡು ಹೋಗಿ ಮತ್ತೆ ವಿನಿಯಂತ್ರಣ ಮಾಡಿದರೂ ಒಮ್ಮೆ ಸ್ವಲ್ಪ ಪ್ರತಿಕ್ರಿಯೆಯಾಗದೆ ಇರದು. ತಂದೆ ತಾಯಿಗಳ ನಿಷ್ಠುರ ಸಾಂಪ್ರದಾಯಿಕ ನಿಯಂತ್ರಣದಿಂದ ಮುಕ್ತನಾಗಿ ಪ್ರಬುದ್ಧಾವಸ್ಥೆಗೆ ಒಂದು ಸ್ವತಂತ್ರನಾದ ಯುವಕನು ಸ್ವಾತಂತ್ರ್ಯಕ್ಕೆ ಒಪ್ಪದ ರೀತಿಯಲ್ಲಿ ಕೆಲಕಾಲ ಸ್ವಚ್ಛಂದನಾಗುವದು ಎಷ್ಟು ಸ್ವಾಭಾವಿಕವೋ ಈ ಬೆಲೆಗಳ ಪ್ರತಿಕ್ರಿಯೆಯೂ ಅಷ್ಟೇ ಸ್ವಾಭಾವಿಕ. ಮುಂದೆ ತನ್ನ ನಡೆವಳಿಯ ಕಟು ಫಲಗಳನ್ನು ಅನುಭವಿಸುವ ಸಂತಿ ಬಂದು ಅವನು ಬೇಗನೆ ದಾರಿಗೆ ಬರುವದಿಲ್ಲವೆ ? ವಿನಿಯಂತ್ರಣವಾದೊಡನೆ ಬೆಲೆಗಳು ಏರಿದವೆಂದು ಸರಕಾರವಾಗಲಿ ಜನತೆಯಾಗಲಿ ಕೈಕಾಲು ಕಳೆದುಕೊಳ್ಳುವ ಕಾರಣವಿಲ್ಲ ಏಕೆಂದರೆ ಬೆಲೆಯೇರಿದೊಡನೆ ಬೇಡಿಕೆ ಕುಗ್ಗಿ ಪುನಃ ಬೆಲೆಗಳು ಸ್ವಸ್ಥಾನಕ್ಕೆ ಮರಳುವವು. ಸರಕಾರ ತನ್ನ ಪ್ರಚಾರಯಂತ್ರವನ್ನು ಬದಲಿಸಿ, ಕೆಲ ಕಾಲ ಬೇಡಿಕೆಗಳನ್ನು ತಡೆಹಿಡಿಯುವ ಅವಶ್ಯಕತೆಯನ್ನು ಜನರಿಗೆ ಮನದಟ್ಟು ಮಾಡಲು ಪ್ರಯತ್ನಿಸಬೇಕು. [illegible] ಜನರ ಬೇಡಿಕೆಗಳು [illegible] ಒಂದು ತಿಂಗಳ ಕಾಲ [illegible] ಸಾಕು. ವಿನಿಯಂತ್ರಣವಾದೊಡನೆ ಈ ಮುಕ್ತ್ಯಾನುಭವದಲ್ಲಿ [illegible] ಕಳ್ಳಪೇಟೆಗನಾದರೂ [illegible] ಇತಿಶ್ರೀಯಾಗದಿರದು. [illegible] ಮಾತ್ರ ಅಂಶತಃ ಪರಿಪೂರ್ಣವಾಗಿರಬೇಕು. ಈ ಮಾತನ್ನು ನಾನು ಮೊದಲೇ ಒತ್ತಿ ಹೇಳಿದ್ದೇನೆ.

"ಇನ್ನು ಆಹಾರ ಧಾನ್ಯಗಳ ವಿಚಾರ ಹೇಳಬೇಕಾದರೆ, ಸರಕಾರವು ಎಲ್ಲ ಪ್ರಾಂತಗಳಲ್ಲಿಯೂ ಸಾಗಾಟ ಸರಾಗವಾಗಿ ನಡೆಯಲು ಅವಕಾಶ ಕೊಡಬೇಕು. ಬೆಲೆಗಳೇರಿ ಜನರಿಗೆ ತೊಂದರೆಯಾಗುತಿದೆಯೆಂದು [illegible] ಲ್ಲೆಲ್ಲ ತಾವು ಹೊರಗಿಂದ ಆಯಾತ ಮಾಡಿದ ಧಾನ್ಯಗಳನ್ನು ಅಗ್ಗದಂಗಡಿಗಳಲ್ಲಿ ಮಾರುವ ವ್ಯವಸ್ಥೆ ಮಾಡಬೇಕು. ಆದರೆ ಅದರ ಬೆಲೆ ಮಾತ್ರ ತಮ್ಮ ಮೂಲ ಬೆಲೆ ಮತ್ತು ಸಾಗಣೆ ವೆಚ್ಚ ಸೇರಿ ಎಷ್ಟಾಗುವದೋ ಅಷ್ಟೇ ಇರಬೇಕಲ್ಲದೆ, ತಮ್ಮ ತಲೆಭಾರ ಆಡಳಿತದ ವೆಚ್ಚವನ್ನೆಲ್ಲ ಅದರ ಮೇಲೆಯೆ ಹೊರಿಸುವದು ಸಲ್ಲದು.

ಇಮ್ಮಡಿ ಹಾನಿ

"ಗಾಂಧೀಜಿ ತಮ್ಮ ಸ್ವಭಾವಸಿದ್ಧವಾದ ಇಂಗಿತಜ್ಞತೆಯ ಬಲದಿಂದ, ಸರಕಾರಿ ನೌಕರರ ಮೇಲೂ ಜನತೆಯ ಮೇಲೂ ನಿಯಂತ್ರಣದಿಂದಾಗುವ ನೀತಿಬಾಹಿರ ಪರಿಣಾಮವನ್ನು ಮನಗಂಡು ವಿನಿಯಂತ್ರಣದ ಪಕ್ಷವನ್ನು ಎತ್ತಿ ಹಿಡಿದಿದ್ದರು. ಆದರೆ ದುರ್ದೈವದ ಮಾತು, ಅವರ ಮರಣಾನಂತರ, ಈ ನಿಯಂತ್ರಣವೆಂಬ ದುರ್ವ್ಯಾಪಾರದ ಒಳಗುಟ್ಟನ್ನರಿತು, ಅದರ ಹೆಸರಲ್ಲಾಗುವ ಅಗಾಧ ವೆಚ್ಚವನ್ನು ನಿಲ್ಲಿಸುವಷ್ಟು ಧೈರ್ಯವುಳ್ಳವರಾರೂ ನಮ್ಮ ಮರಿಷ್ಠ ನಾಯಕರಲ್ಲಿಲ್ಲದಾಗಿದ್ದಾರೆ. ಇತ್ತ ನಿಯಂತ್ರಣಗಳನ್ನು ಜಾರಿಯಲ್ಲಿಡುವ ವೆಚ್ಚವನ್ನೂ ಕರಗಳ ರೂಪದಲ್ಲಿ ಜನರೇ ಹೊರಬೇಕು, ಅತ್ತ ನಿಯಂತ್ರಣಗಳನ್ನು ನಡೆಸುವವರ ಅಕ್ಷಮತೆ, ಲಂಚಗುಳಿತನಗಳ ಫಲವಾಗಿ ನಿಯಂತ್ರಿತ ವಸ್ತುಗಳಿಗೆ ಹೆಚ್ಚಿನ ಬೆಲೆಯನ್ನೂ ತೆರಬೇಕು, ಹೀಗಾಗಿದೆ ಅವಸ್ಥೆ. ನಿಯಂತ್ರಣಗಳು ತಮ್ಮ ದ್ವಿಮುಖ ಧ್ಯೇಯಗಳಾದ ಸಮಂಜಸ ಹಂಚಿಕೆ ಮತ್ತು ಅಗ್ಗದ ಬೆಲೆ ಇವನ್ನು ಸಾಧಿಸಲಿಲ್ಲ. ತದ್ವಿರುದ್ಧವಾಗಿ ನಿಯಂತ್ರಣಗಳಿಂದ ಕಳ್ಳಪೇಟೆ, ಲಂಚಗುಳಿತನ, ತುಟ್ಟಿ ಬೆಲೆ, ಕೃತ್ರಿಮ ಕೊರತೆಗಳು, ಆಹಾರ ಧಾನ್ಯಗಳು ಕೆಟ್ಟು ಸರ್ವಥಾ ನಷ್ಟವಾಗಿ ಹೋಗುವದು, ದೇಶದ ಉತ್ಪಾದನ ಶಕ್ತಿಯ ಅಪೂರ್ಣ ವಿನಿಯೋಗ— ಇವೆಲ್ಲವೂ ಉದ್ಭವಿಸಿವೆ. ಲಂಚಗುಳಿತನ, ಅಕ್ರಮತೆಗಳನ್ನು ನಿರ್ನಾಮ ಮಾಡುವ ವಿಷಯದಲ್ಲಿ ಸರಕಾರಕ್ಕಿರುವ ತೊಂದರೆಗಳು ಸರಕಾರಕ್ಕೇ ಗೊತ್ತು; ಜನರೂ ಅದರಲ್ಲಿ ಸಹಕರಿಸುವದಿಲ್ಲ ಬೇರೆ, ಎಂದು ಹೇಳುವದುಂಟು. ತಮ್ಮ ನೌಕರರನ್ನು ಸುಧಾರಿಸುವದು ಕೈಲಾಗದಿದ್ದರೆ, ಜನರೆಲ್ಲ ನೀತಿಗೇಡಿಗಳಾಗಿದ್ದರೆ, ೩೦ ಕೋಟಿ ಜನರಿಗಾಗಿ ಯೋಜನಾಬದ್ಧ ಅರ್ಥಪದ್ಧತಿಯನ್ನು ಸಾಧಿಸುವ ಸರಕಾರದ ಅಭಿಲಾಷೆಯ ಗತಿಯೇನು?

ನಾನು ಮೇಲೆ ಹೇಳಿದ್ದು, ನಿಯಂತ್ರಣಗಳ ದೋಷಗಳಲ್ಲಿ ಕೆಲವು ಮಾತ್ರ. ನಿಮ್ಮೊಡನೆ ಈ ಪ್ರಶ್ನೆಯನ್ನು ಅಂಗಪ್ರತ್ಯಂಗವಾಗಿ ಚರ್ಚಿಸಿದರೆ ನಿಮಗೆ ಈ ವಿಚಾರವನ್ನು ಇನ್ನಷ್ಟು ಮನದಟ್ಟು ಮಾಡಬಲ್ಲೆ.

ಏಕೆ ಅಯಶಸ್ವಿಯಾಗುತ್ತಿದೆ

"ಮೊದಲೇ ನಾನು ತೋರಿಸಿಕೊಟ್ಟಂತೆ, ನಿಯಂತ್ರಣಗಳ ಸುಕ್ಷಮ ವ್ಯವಸ್ಥೆಗೆ ಅವಶ್ಯವಾದ ಸ್ಥಿತಿಗತಿಗಳು ಈ ದೇಶದಲ್ಲಿಲ್ಲ. ಅವು ಈ ಕೆಳಗಿನಂತಿವೆ:

"೧. ಸರಕಾರಿ ನೌಕರರು, ಮುಂದಾಳುಗಳು ಎಷ್ಟೇ ಮನಃಪೂರ್ವಕದಿಂದ [illegible] ಅಧಿಕಾರಿ ವರ್ಗಕ್ಕೆ ಅಸ್ಪೃಹಣೀಯವಾದುದು [illegible] ಬರುವದಿಲ್ಲ. [illegible] ನಿಯಂತ್ರಿತ ವಸ್ತುಗಳ [illegible] ಅಭಾವ, [illegible] ಲಂಚಗುಳಿತನ—ಇವೆಲ್ಲ ಸರಕಾರಿ ಆಡಳಿತದೊಡನೆ ಅಭೇದ್ಯವಾಗಿ ಎಣೆಕೊಂಡ ದೋಷಗಳು. ಇವು ನಿಯಂತ್ರಣಗಳನ್ನು ಜಾಳಿಯಾಗಿ [illegible] ಮಾಡಿ [illegible]. (ಇನ್ನೂ ಇದೆ ಮುಂದೆ ನೋಡಿರಿ)

೧೯೪೯ ರಲ್ಲಿ ಜಗತ್ತಿನ ಗ್ರಹಗತಿಯೇನು?

ಸ್ಟಾಲಿನ್ನರಿಗೆ ಅನಾರೋಗ್ಯ— ಟ್ರೂಮನ್ನರಿಗೆ ಅಪವಾದ— ಭಾರತಕ್ಕೆ ಆರ್ಥಿಕ ದುರವಸ್ಥೆ— ರಾಷ್ಟ್ರರಾಷ್ಟ್ರಗಳಲ್ಲಿ ವೈಷಮ್ಯ.. ಆದರೆ ಯುದ್ಧವಿಲ್ಲ

ಹೊಸವರ್ಷ (೧೯೪೯) ಮೂಡಿ ಬಂದಾಗ ಜಗತ್ತಿನಲ್ಲಿ ಬೇರೆ ಯಾವ ಸರಕಿನ ಸಮೃದ್ಧಿ ತೋರದಿದ್ದರೂ ವರ್ಷಭವಿಷ್ಯ, ಜಗತ್ತಿನಭವಿಷ್ಯಗಳು ಹುಲುಸಾಗಿ ಬೆಳೆದು ಈ "ಪಾಮರ" ದೇಶದಲ್ಲಿ ಮಾತ್ರವಲ್ಲ, "ಪ್ರಗತಿಪರ" ಪಾಶ್ಚಿಮಾತ್ಯ ದೇಶಗಳಲ್ಲಿ ಕೂಡ ಎಲ್ಲ ಪುಸ್ತಕದಂಗಡಿಗಳಲ್ಲಿ ಧಾರಾಳವಾಗಿ ಹಂಚಲ್ಪಡುತಿವೆಯೆಂದು "ಅಮೃತಬಜಾರ ಪತ್ರಿಕೆಯ" ಲಂಡನ ಕಾರ್ಯಾಲಯದವರು ಮಾಡಿದ ವರದಿಯಿಂದ ತಿಳಿದುಬರುತ್ತದೆ. ಈ ಭವಿಷ್ಯಗಳ ಜನಪ್ರಿಯತೆಯೆಷ್ಟಿದೆಯೆಂದರೆ, ಇಂಗ್ಲಂಡಿನಲ್ಲಿ ಕಳೆದ ೩೦೦ ವರ್ಷಗಳಿಂದ ಪ್ರಕಟವಾಗುತ್ತಿರುವ "ಫೌಲ್‌ಶಾಮ ಪಂಚಾಂಗ"ದ ೩೦ ಲಕ್ಷ ಪ್ರತಿಗಳು ಮಾರಾಟವಾಗುತಿವೆ, ಆದರೆ ನಮ್ಮೀ ದೈವಜ್ಞರ ದೇಶದಲ್ಲಿ ಭವಿಷ್ಯ ಹೇಳುವವರು ನಿರ್ಭಯವಾಗಿ ತಮ್ಮ ಹೆಸರುಗಳನ್ನು ಪ್ರಕಟಿಸುತ್ತಿದ್ದರೆ ವಿದೇಶಗಳ ದೈವಜ್ಞರು ಗುಪ್ತನಾಮಗಳಿಂದಲೇ ಜಗತ್ತಿನ ಹಣೆಬರಹವನ್ನು ಬರೆಯಲು ಆಶಿಸುತ್ತಾರೆ. ಅವರ ನಿಜನಾಮಧೇಯ ಮತ್ತು ವ್ಯಕ್ತಿತ್ವಗಳು ಅತ್ಯಂತ ಗುಪ್ತವಾಗಿರುತ್ತವೆ.

ತಿಂಗಳೆರಡು ತಿಂಗಳೊಳಗೆ ಈ ಸತ್ಯಾಸತ್ಯ ಭವಿಷ್ಯತ್ ವಾಕ್ಯಗಳು ಮರವೆಯ ಗರ್ಭದಲ್ಲಿ ಅಡಗಿ ಹೋದರೂ ಶ್ರದ್ಧಾಳುಗಳೂ ಅಶ್ರದ್ಧಾನರೂ ಸೇರಿಯೇ ಕೇವಲ ಕುತೂಹಲದ ಪ್ರೇರಣೆಯಿಂದಾದರೂ ಈ ಭವಿಷ್ಯಗಳನ್ನೊಮ್ಮೆ ಓದಲು ಉತ್ಸುಕರಾಗುವರೆಂಬಲ್ಲಿ ಸಂಶಯವಿಲ್ಲ. ನಮ್ಮ ದೇಶಕ್ಕಾದರೂ ಈ ಮಾತು ಹೆಚ್ಚುಕಡಿಮೆ ಪ್ರಮಾಣದಲ್ಲಿ ಅನ್ವಯಿಸುತ್ತದೆನ್ನೋಣ.

ಅಸಂಖ್ಯ ದೈವಜ್ಞಮುಕುಟಾಲಂಕಾರರ ಭವಿಷ್ಯಗಳನ್ನೆಲ್ಲ ಕಲೆಹಾಕಿ ಅವುಗಳಲ್ಲಿ ಬಂದ ಸಹಮತ ಮತ್ತು ಭಿನ್ನಮತಾತ್ಮಕ ವಿಚಾರಗಳನ್ನೆಲ್ಲ ಹೊಂದಿಸಿ ಪ್ರಕಟಿಸಿದರೆ ಅದೊಂದು ಬೋಧಪ್ರದವೇ ಆಗಬಹುದಾದರೂ ಯಾರೂ ಅಂಥ ಪ್ರಯತ್ನವನ್ನು ಮಾಡಿದಂತಿಲ್ಲ. ಸಾಧ್ಯವೂ ಇಲ್ಲವೋ ಏನೋ. ಇಂಥ ವಾಙ್ಮಯದ ಪ್ರಚಂಡ ರಾಶಿಯನ್ನು ಪೃಥಕ್ಕರಿಸುವದರೊಳಗೆ ಪುಣ್ಯಕಾಲ ಸಂಕಲ್ಪದಲ್ಲೇ ದಾಟಿ ಹೋಗಿ ಈ ಸಂಶೋಧನದ ಫಲಿತಾಂಶವನ್ನೋದಲು ಜನರಲ್ಲಿ ಏನೂ ಲವಲವಿಕೆಯಿಲ್ಲದೆ ಹೋಗಬಹುದು!

೧೯೪೯ ರಲ್ಲಿ ಯುದ್ಧವಿಲ್ಲ

೧೯೪೯ರ ಜಗತ್ ಭವಿಷ್ಯಕ್ಕೂ ಇದೇ ಮಾತು ಅನ್ವಯಿಸುತ್ತಿದ್ದರೂ ಒಂದು ಮಾತಿನ ಬಗ್ಗೆ ಮಾತ್ರ ಎಲ್ಲ ಜ್ಯೋತಿಷ್ಯರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆಂದು ಹೇಳಬಹುದು. ಅದನ್ನೋದಿ ಜನ ಸಮಾಧಾನದ ಉಸಿರುಗರೆಯಬಹುದು. ೧೯೪೯ನೆ ಇಸವಿಯಲ್ಲಿ ಯುದ್ಧವಾಗುವ ಸಂಭವವಿಲ್ಲವೆಂಬದೇ ಅಜಗ್ಗೊರಲಿನ ಭವಿಷ್ಯ. ಬದಲಿಗೆ ಶಾಂತಿದೇವಿಯ ಕೈಕಾಲುಗಳು ಇನ್ನಷ್ಟು ಗಟ್ಟಿಯಾಗುವವೆಂಬ ಆಶೆಯನ್ನು ರಾಶಿಚಕ್ರ ತೋರಿಸುತಿದೆಯಂತೆ! ಆದರೆ ಅದಕ್ಕೆ ಯೋಗ್ಯ ಮುಂದಾಳ್ತನ ಮಾತ್ರ ಬೇಕೆಂದು ಫೌಲ್‌ಶಾಮ ಪಂಚಾಂಗದ ಭದ್ರನಾಮ "ಓಲ್ಡ ಮೂರ"ನು ಕರಾರು ಹಾಕಿದ್ದಾನೆ. ಸದ್ಯದ ಮುಂದಾಳ್ತನದಲ್ಲಿರುವ ದೋಷಗಳೇನು, ಹೊಸ ಮುಂದಾಳ್ತನ ಬರಬಹುದಾದ ಮಾರ್ಗವೇನು ಎಂಬದನ್ನು ಆತ ನಮ್ಮ ಸ್ವಂತ ಊಹೆಗೆ ಬಿಟ್ಟಿದ್ದಾನೆ!

ನಿಯಂತ್ರಣಗಳು ಹೋಗುವವು

ಹೀಗೆ ಜಗಚ್ಛಾಂತಿಯ ಭರವಸೆಯಿಂದ ಪುನರಾರೋಪಿತ ಚಿತ್ತಸ್ವಾಸ್ಥ್ಯರಾದ ನೀವು ನಿಮ್ಮ ಸ್ವದೇಶವಾದ ಭಾರತದ ಬಗ್ಗೆ ಈ ನಕ್ಷತ್ರಹೃದಯಪರೀಕ್ಷಕರು ಯಾವ ವಿಧಿಯನ್ನು ಕಂಡಿರುವರೆಂದರಿಯಲು ಆತುರಪಡುವದು ಸಹಜ. ನಮ್ಮ ವಿಷಯದಲ್ಲಿ ದೈವಜ್ಞ "ಓಲ್ಡ ಮೂರ"ನು ತೀರ ಉದಾರ ವಚನಗಳಿಂದ ಭಾರತದ "ನೃಪಶಾಸಗಳು ಹೆಚ್ಚು ಪ್ರಗತಿಪರವಾಗಿ ಮುಂದೊತ್ತುವವು. ಅನೇಕ ಹೊಸ ಸುಧಾರಣೆಗಳು ಮಾಡಲ್ಪಡುವವು" ಎಂದು ಮುಂಗಂಡಿಸಿದ್ದಾನೆಂದು ಕೇಳಲು ನೀವು ಅತ್ಯಂತ ಸಂತುಷ್ಟರಾಗಬಹುದು. "ಓಲ್ಡ ಮೂರ"ನಷ್ಟು ಜನಪ್ರಿಯನಲ್ಲದಿದ್ದರೂ ಅವನಿಗಿಂತ ಧನಪ್ರಿಯನಾದ "ರಾಫೆಲ"ನೆಂಬ ಇನ್ನೊಬ್ಬ ಗ್ರಹಶೀಲಜ್ಞನೂ ದರಿದ್ರ ಭಾರತಕ್ಕೆ ಶಾಂತಿಪುಷ್ಟಿತುಷ್ಟಿಯ ಭರವಸೆ ಕೊಡುತ್ತ "ಪರಿಸ್ಥಿತಿ ಸುಧಾರಿಸಿ ಅನೇಕ ವಾಣಿಜ್ಯ ಸಂಧಿಗಳು ಏರ್ಪಡುವವು," ಎಂದಿಷ್ಟೇ ಅಲ್ಲ "ನಿರರ್ಥಕವಾದ ಅನೇಕ ನಿಯಂತ್ರಣಗಳು ರದ್ದಾಗುವವು ಇಲ್ಲವೆ ರದ್ದಾಗಲನುವಾಗುವವು" ಎಂದು ಸಾರಿದ್ದಾನಾಗಿ ಮತ್ತು ಸಂತತಿನಿಯಂತ್ರಣದಿಂದಾರಂಭಿಸಿ ಎಲ್ಲನಿಯಂತ್ರಣಗಳೂ ನಿರರ್ಥಕವೆಂದು ನಾವೆಲ್ಲರೂ ನಂಬುವೆವಾಗಿ ನಮಗೆಲ್ಲರೂ ಭೋಜನಸ್ವಾತಂತ್ರ್ಯ ಪುನಃ ದೊರೆಯುವದೆಂಬ ವಿಶ್ವಾಸದಿಂದ ನಿದ್ದೆಹೋಗಲು ಯಾವ ಅಡ್ಡಿಯೂ ಇಲ್ಲ.

ಉರನಸನ ಸ್ನೇಹ

ಭಾರತೀಯರಿಗೆ ಅಷ್ಟು ಪರಿಚಿತನಾಗಿರದ ಉರಣ (ಯುರನಸ್) ಗ್ರಹನು ದಿಲ್ಲಿಯ ರಾಶಿಯಲ್ಲಿ ಶುಭೋದಯ ಹೊಂದಲಿರುವ ಸುದ್ದಿಯಿಂದ ನೀವೆಲ್ಲರೂ ಆನಂದತುಂದಿಲರಾಗಬಹುದು. ಅಪರಿಚಿತನಾಗಿದ್ದರೂ ಆತ ನಮ್ಮ ಚಿರಪರಿಚಿತ ಶನಿಗಿಂತ ಹೆಚ್ಚು ಕರುಣಾಳುವಾಗಿ ನಮಗಾಗಿ ಉಪಯುಕ್ತ ಸುಧಾರಣೆಗಳನ್ನೂ ಲಾಭದಾಯಕವಾದ ಒಪ್ಪಂದಗಳನ್ನೂ ಗಂಟುಹಾಕಿಕೊಡಲಿರುವನೆಂದು 'ರಾಫೇಲನು' ಹೇಳುತ್ತಾನೆ. ಏಕೆಂದರೆ, ಪ್ರಮುಖ ಭಾರತೀಯ ಜ್ಯೋತಿಷ್ಯ ಪತ್ರಿಕೆಯಾದ ಬೆಂಗಳೂರಿನ Astrological Magazine* ನ ವಾರ್ಷಿಕ ಸಂಚಿಕೆಯ ಭವಿಷ್ಯ ವಕ್ತೃವು ಚಿರಪರಿಚಿತ ಶನಿಮಹಾರಾಯನು ಈ ವರ್ಷ ನಮಗೆ ಹಣಕಾಸಿನ ಮತ್ತು ತೆರಿಗೆಯ ತೊಂದರೆಗಳನ್ನು ಕೊಡಬೇಕೆಂದು ಗೋಪ್ಯ ಮರಪೇಕ್ಷೆಯನಿಟ್ಟುಕೊಂಡಿರುವ ಅಂಶವನ್ನು ಕಂಡುಹಿಡಿದಿದ್ದಾನೆ. ಆದರೆ ಭಾರತೀಯ ಜ್ಯೋತಿಷ್ಕರ ಕಡೆ ಹೊರಳುವ ಮೊದಲು ವಿದೇಶೀ ಎಲ್ಲಬಲ್ಲವರ ಪರಿದರ್ಶನವನ್ನು ಮುಗಿಸಬೇಕೆಂದು ನೀವಾಶಿಸುವಿರಾಗಿ, ಮೇ ತಿಂಗಳಲ್ಲಿ ಬ್ರಿಟನ್ ಭಾರತಗಳ ಬಾಂಧವ್ಯ ಬಲಗೊಳ್ಳುವ ಒಪ್ಪಂದವಾಗಿ ಉಭಯ ರಾಷ್ಟ್ರಗಳ ನಡುವೆ ಸಂಚಾರ ಸೌಕರ್ಯಗಳು ಹೆಚ್ಚುವ ಆಶೆಯಿದೆಯೆಂದೂ ಜುಲೈಯಲ್ಲಿ ಸಮೃದ್ಧಿ ಸಮಾಧಾನಗಳು ನೆಲೆಗೊಳ್ಳುವವೆಂದೂ ಆಗಸ್ಟಿನಲ್ಲಿ ಉಭಯ ರಾಷ್ಟ್ರಗಳ ವ್ಯಾಪಾರ ಅಭೂತಪೂರ್ವ ಪ್ರಮಾಣಕ್ಕೇರುವದೆಂದೂ ಸೆಪ್ಟಂಬರದಲ್ಲಿ (ಕಾರಣ ಬೇಕಿದ್ದರೆ, ಮಂಗಳಗುರುಗಳ ಜಗಳದ ಪರಿಣಾಮವಾಗಿ, ಎಂದು ತಿಳಿಯಿರಿ) ಭಾರತ-ದಕ್ಷಿಣ ಆಫ್ರಿಕೆಗಳ ನಡುವಣ ಜಗಳವೂ ಬೆಳೆಯುವದೆಂದೂ ನವೆಂಬರದಲ್ಲಿ ಚಂದ್ರಬಲ ಹಿಂದುಸ್ತಾನಕ್ಕೆ (ಮತ್ತು ಪಾಕಿಸ್ತಾನಕ್ಕೆ) ಮಂಗಲಕಾರಿಯಾಗುವದೆಂದೂ ಹೇಳಲಾಗಿದೆ.

ಕಠಿನ ಕಾಲ

ಆದರೆ ಮೇಲೆ ಹೇಳಿದ ಭಾರತೀಯ ಜ್ಯೋತಿಷ್ಕರು ಈ ಬಗೆಯಾಗಿ ಪೊಳ್ಳು ಭರವಸೆಗಳಿಂದ ಭಾರತ ಸರಕಾರವನ್ನು ನಿಶ್ಚಿಂತರಾಗಿರಿಸಲು ಬಯಸುವದಿಲ್ಲ. ಏಕೆಂದರೆ ಬರಲಿರುವ ಗಂಡಾಂತರಗಳನ್ನು ಮುಂಗಂಡು ಅದರ ವಿರುದ್ಧ ಪ್ರತೀಕಾರವನ್ನು ಕೈಕೊಳ್ಳಲು ಸಿದ್ಧರಾಗಿರುವಂತೆ ಮಾಡುವದೇ ಹೋರಾಶಾಸ್ತ್ರದ ಪ್ರಯೋಜನವೆಂದು ಅವರು ನಂಬುತ್ತಾರೆ. ಆದುದರಿಂದ ದಿಲ್ಲಿಯ ಮೇಲೆ ಶನಿ, ರಾಹುಮಂಗಳರ ದೃಷ್ಟಿಯಿರುವದರಿಂದ ಪ್ರಜಾಕ್ಷೋಭೆ, ಗುಪ್ತಪ್ರಚಾರ, ದೌರ್ಜನ್ಯ, ದುಷ್ಕೃತ್ಯ, ಆತ್ಮಹತ್ಯೆಗಳು ಹೆಚ್ಚುವವೆಂಬ ಅಪ್ರಿಯ ಸತ್ಯವನ್ನು ಅವರು ಹೊರಗೆಡಹಿದ್ದಾರೆ. ಯಾವಯಾವ ಗ್ರಹ-ರಾಶಿಗಳು ಏನೇನು ಒಳಸಂಚು ನಡೆಸುವವೆಂದು ಅವರು ವಿವರವಾಗಿ ಹೇಳಿದ್ದರೂ ಸಮ್ಯಕ್ಕಂತೂ ನಮ್ಮ ಕೈಯಳತೆಗೋತ್ರವಲ್ಲ, ಕೂಗಳತೆಗೆ ಕೂಡ ಅದು ಸಿಲುಕುವ ಸಂಭವವಿಲ್ಲವ್ದರಿಂದ ಈ ಯೋಗವಿಯೋಗಗಳ ಗೊಡವೆಗೆ ಹೋಗದೆ ಬರಿ ಅವರು ಹೇಳಿದ ಫಲಗಳ ಸಾರಾಂಶವನ್ನಷ್ಟೆ ಇಲ್ಲಿ ಕೊಟ್ಟರೆ ನೀವು ಅಸಂತುಷ್ಟರಾಗಲಿಕ್ಕಿಲ್ಲವೆಂದು ನಂಬುತ್ತೇವೆ. ಹೆಚ್ಚೇಕೆ, ಸರಕಾರದವರು ಚಂಚಲ ಧೋರಣ ವಹಿಸಿಯಾರು, ಪಾಕಿಸ್ತಾನದೊಡನೆ ಮನಸ್ತಾಪ ಬೆಳೆದೀತು, ಅದು ಭಾರತದ ಗಡಿಯ ಮೇಲೆ ಕೈಮಾಡೀತು. ನೌಕಾನರ್ಥಗಳಾದಾವು, ಅನ್ನವಸ್ತ್ರಗಳು ತುಟ್ಟಿಯಾದಾವು, ಮಂತ್ರಿಮಂಡಲದಲ್ಲಿ ಬದಲಾವಣೆಗಳಾಗಬಹುದು, ಸಂಪುಗಳು ಹೂಡಲ್ಪಡಬಹುದು ಇತ್ಯಾದಿಯಾಗಿ ಹೇಳಲ್ಪಟ್ಟಿವೆ.

*The Astrological Magazine (Bangalore) 1949 Annual Number : Editor Sri B. V. Raman, Price Rs. 3/-

ಎರಡೇ ಹಾದಿ

ಈ ಜ್ಯೋತಿಷ್ಕರು ಒಡನುಡಿದ ಮಾತುಗಳಲ್ಲಿ ಒಂದು ಈಗಾಗಲೆ ಸತ್ಯವಾಗಿದೆಯೆಂದು ಒಪ್ಪಲೇಬೇಕಾಗುವದು. ಕಾಶ್ಮೀರದ ಬಗ್ಗೆ ಭಾರತ ಪಾಕಿಸ್ತಾನಗಳ ನಡುವೆ ಒಂದು ಬಗೆಯ ವ್ಯವಸ್ಥೆ ಆಗುವದೆಂದು ಅವರು ಹೇಳಿದ್ದಾರೆ. ಆದರೆ ಈ ಶಾಂತಿ ಕ್ಷಣಿಕವಾಗಿ ಮತ್ತೆ ಹೆಚ್ಚು ಪ್ರಮಾಣದಲ್ಲಿ ಹೋರಾಟ ಪ್ರಾರಂಭವಾಗುವದೆಂದು ಹೇಳಿ ಮೂಡಿದ ಆಸೆಯನ್ನು ಅವರು ಮೊಳಕೆಯಲ್ಲೇ ಚಿವುಟಿಹಾಕಿದ್ದಾರೆಂದು ಕೇಳಿ ನೀವು ವಿಷಾದಗೊಳ್ಳಬಹುದು. ಪಾಕಿಸ್ತಾನದ ಗೆಳೆಯರು ಒಪ್ಪಂದ ಮುರಿಯುವರಂತೆ.

೧೯೬೫ ರಲ್ಲಿ ಪ್ರಚಂಡ ರಾಷ್ಟ್ರ

ವ್ಯಕ್ತಿ, ಸಂಸ್ಥೆಗಳ ಬಗ್ಗೆ ಹೇಳಬೇಕಾದರೆ ಮುಖ್ಯ ಮಂತ್ರಿ ಜವಾಹರಲಾಲರಿಗೂ ಮೈಸೂರು ಮಹಾರಾಜರಿಗೂ ಅನಿಷ್ಟಯೋಗವಿದ್ದು ಕಾಂಗ್ರೆಸ್ಸಿನೊಳಗೆ ಒಳಜಗಳಗಳು ಹೆಚ್ಚುವವು. ಈ ವರ್ಷದ ಕೊನೆಯಲ್ಲಿ ಶನಿಮಂಗಳಯುತಿಯ ಫಲವಾಗಿ ಸರಕಾರದ ವಿರುದ್ಧ ದ್ರೋಹ, ಕ್ರಾಂತಿ, ಮಹಾಪುರುಷರ ಕೊಲೆಗಳು ಸಂಭವಿಸುವವೆಂದು ಪಾಶ್ಚಾತ್ಯ ಜ್ಯೋತಿಷ್ಯ ಝಡಕೀಲನು ಹೇಳಿದ್ದರೂ ಹಲವು ಕಷ್ಟನಷ್ಟಗಳ ದಿವ್ಯದೊಳಗಿಂದ ಪಾರಾಗಿ ಭಾರತ ದೇಶ ೧೯೬೫ ರ ಹೊತ್ತಿಗೆ ಜಗತ್ತಿನ ಅತಿ ಪ್ರಚಂಡ ರಾಷ್ಟ್ರವಾಗಲಿದೆಯೆಂದು ಬೆಂಗಳೂರಿನ ಈ ಜ್ಯೋತಿಷ್ಕರ ಮತ. ಭಾರತ ಸ್ವಾತಂತ್ರ್ಯದ ಕುಂಡಲಿ ಮೂಲತಃ ಬಲಿಷ್ಠವಾಗಿರುವದೇ ಇದಕ್ಕೆ ಕಾರಣವಂತೆ. ಪ್ರಸಂಗತ್ವೇನ, ಈ ಕುಂಡಲಿಯ ಬಲದ ಬಗ್ಗೆ ನಮ್ಮ ಕರ್ನಾಟಕದ ಕೈಸರ್-ಇ-ಹಿಂದ ಪದಕಧಾರಿಗಳಾದ ಜ್ಯೋತಿರ್ಮಾರ್ತಂಡರೊಬ್ಬರು ಬಹಳ ನಿರಾಶರಾಗಿ ಬಹಳಾದರೆ ಈ ಸ್ವಾತಂತ್ರ್ಯ ೫೦ ವರ್ಷ ಬದುಕೀತೆಂದು ಬಹಳ ದಿನಗಳ ಹಿಂದೆಯೆ ಒಡನುಡಿದುದನ್ನು ನಿಮಗೆ ನೆನಪು ಮಾಡಿ ಕೊಟ್ಟರೆ ಮದುವೆಯ ಮನೆಯಲ್ಲಿ ಸಾವಿನ ಸುದ್ದಿ ಎತ್ತಿದರೆಂದು ನೀವು ನಮ್ಮನ್ನು ಹೀಗಳೆಯಬಾರದೆಂದು ಸವಿನಯ ಪ್ರಾರ್ಥನೆ.

ಪಶ್ಚಿಮ ಕರಾವಳಿಯಲ್ಲಿ ಹವಾಮಾನ ಪ್ರಕ್ಷುಬ್ಧವಾಗಬಹುದೆಂದು ಕೇಳಿ ೧೯೪೮ ರಲ್ಲಿ ಅದೇ ವಿಪತ್ತಿಗೆ ತುತ್ತಾದವರಿಗೆ ನಿದ್ದೆಯಲ್ಲಿ ನಡುಕ ಹುಟ್ಟಬಹುದು. ಬಿಹಾರ ಬಂಗಾಲಗಳಲ್ಲಿ ನೆರೆಹಾವಳಿಯಿಂದ ಅನರ್ಥವಾಗಬಹುದು.

ಜಗತ್ತಿನ ಸ್ಥಿತಿಗತಿಯನ್ನು ವಿಮರ್ಶಿಸುತ್ತ ಮೇಲ್ಕಾಣಿಸಿದ ವಿದ್ವಾಂಸರು ಯುದ್ಧದ ಸಿದ್ಧತೆಗಾಗಿ ಧಾರಾಳ ಹಣ ಸುರಿಸಲ್ಪಡುವದೆಂದೂ ರಾಷ್ಟ್ರರಾಷ್ಟ್ರಗಳಲ್ಲಿ ಪರಸ್ಪರ ವೈಮನಸ್ಯ ಬೆಳೆಯುವದೆಂದೂ ಯುಕ್ತ ರಾಷ್ಟ್ರ ಸಂಘಕ್ಕೆ ಬಾಲಾರಿಷ್ಟ ಯೋಗವಿದೆಯೆಂದೂ ನಿರ್ಧರಿಸಿದ್ದಾರೆ. ರಾಜಸತ್ತೆಗೆ ಇನ್ನಷ್ಟು ಕಂಟಕವಿದ್ದರೂ ಜಗತ್ತಿನಲ್ಲಿ ಕೂಲಿಕಾರರ ರಾಜಕೀಯ ಬಲ ಕುಂದಿ ಸರಕಾರಗಳು ಬಲ ಪಕ್ಷಕ್ಕೆ ಹೊರಳುವವಲ್ಲದೆ ನರನಾರಿಯರಲ್ಲಿ ನಾಸ್ತಿಕ್ಯ ಬೆಳೆಯುವದೆಂದು ಕಂಡುಹಿಡಿಯಲಾಗಿದೆ.

ಪ್ರಮುಖ ರಾಷ್ಟ್ರಗಳ ಗತಿ

ಜಗತ್ತಿನ ಕೆಲ ಪ್ರಮುಖ ರಾಷ್ಟ್ರಗಳ ಹಣೆಬರಹವನ್ನು ತಿಳಿಯಲು ಇಷ್ಟರಲ್ಲೆ ನೀವು ಆತುರಪಡುತಿರಬಹುದಾದುದರಿಂದ ಸಂಕ್ಷೇಪದಲ್ಲಿ ಪೌರಸ್ತ್ಯ ಪಾಶ್ಚಾತ್ಯ ದೈವಜ್ಞರ ಮತಗಳನ್ನು ಇಲ್ಲಿ ಶೇಖರಿಸುವ ಪ್ರಯತ್ನ ಮಾಡುವೆವು.

ಇಂಗ್ಲಂಡಿನಲ್ಲಿ ಆರ್ಥಿಕ ದುರವಸ್ಥೆ ಬೆಳೆದು ಸರಕಾರದ ಪ್ರತಿಷ್ಠೆ ನಾಶಹೊಂದುವದಲ್ಲದೆ ಅದರ ವಸಾಹತುಗಳಲ್ಲಿ ತುಂಬ ತಂಟೆಗಳೆದ್ದು ಸಾಕುಬೇಕಾಗುವದು. ಸಾಲದ್ದಕ್ಕೆ ಇಬ್ಬರು ಪ್ರಮುಖರ ಮರಣದಿಂದ ರಾಷ್ಟ್ರ ದುಃಖಿತವಾಗುವದು. ಸಾಡೇಸಾತಿನ ಕೈಯಲ್ಲಿ ಸಿಕ್ಕಿದ ಚರ್ಚಿಲ್ ಸಾಹೇಬರು ಅಪಾಯಕರ ಅಸ್ವಸ್ಥತೆಗೊಳಗಾಗುವರು. ಇದು ಭಾರತೀಯ ಮತವಾದರೆ ಪಾಶ್ಚಾತ್ಯ ಮತದಂತೆ ಇಂಗ್ಲಂಡಿನಲ್ಲಿ ಹೊಸ ಮಂತ್ರಿಮಂಡಲ ರಚಿತವಾಗಿ ಈಗ ಕೂಡಿಬಿದ್ದ ಕೊಳೆಯನ್ನು ಸ್ವಚ್ಛ ಮಾಡುವದು.

-೧೩ನೆಯ ಪುಟಕ್ಕೆ

ನಮ್ಮ ಲಂಡನ್ನಿನ ಓಲೆ

(ಸ್ವಂತ ಪ್ರತಿನಿಧಿಯಿಂದ)

ತಾ. ೭

ಬಿವರಿಜ್ ಯೋಜನೆ

ಬಿವರಿಜ್ ಯೋಜನೆಯನ್ನೀಗ ಇಂಗ್ಲೆಂಡಿನ ಸೋಶಲಿಸ್ಟ ಸರಕಾರವು ಕಾರ್ಯರೂಪಕ್ಕೆ ಇಳಿಸಿತು. ಇದರಿಂದ ಬ್ರಿಟನ್ನಿನ ಪ್ರತಿಯೊಬ್ಬ ಪ್ರಜೆಗೂ ಸಾಮಾಜಿಕ ಸುರಕ್ಷಿತತೆ ಸಿಕ್ಕಿದಂತಾಯ್ತು. ಈ ಯೋಜನೆಯು ಒಂದು ಕುಟುಂಬದಲ್ಲಿ ಸಾಧಾರಣ ಗೃಹಸ್ಥ, ಗೃಹಿಣಿ, ಮಗ, ಮಗಳು, ಅಜ್ಜಿ ಹೀಗೆ ೫ ಜನರಿರುವರೆಂದು ಕಲ್ಪಿಸಿದೆ. ಗೃಹಸ್ಥನ ವಾರದ ಸರಾಸರಿ ಆದಾಯ ೫ ಪೌಂಡು, ೯ ಶಿಲಿಂಗ್ ಮತ್ತು ೯ ಪೆನ್ಸ್; ಅವನ ತಾಯಿ(ಅಜ್ಜಿ)ಗೆ ವಾರಕ್ಕೆ ೨೬ ಪೆನ್ಸ್ ವಾರ್ಧಕ್ಯವೇತನ ಪಡೆಯುವುದು; ೨ನೆಯ ಮಗುವಿಗೆ ವಾರಕ್ಕೆ ೫ ಪೆನ್ಸ್ ಕುಟುಂಬ ಭತ್ತೆ- ಒಟ್ಟು ಆ ಕುಟುಂಬದ ಆದಾಯ ವಾರಕ್ಕೆ ೭ ಪೌಂಡು ೯ ಶಿಲಿಂಗ್, ೮ ಪೇನ್ಸ್ ಇದು ಅದರ ಖರ್ಚಿಗೆ ಸಾಕಾಗುತ್ತದೆ. ಇದರ ಮೇಲೆ ಕೂಲಿಕಾರರಿಗೆ ರಾಷ್ಟ್ರೀಯ ವಿಮಾಯೋಜನೆಯು ನೆರವಿದೆ. ಅವರು ಕಾಹಿಲೆ ಬಿದ್ದರೆ, ಕೆಲಸ ಕಳೆದುಕೊಂಡರೆ ಅದು ಸಹಾಯಮಾಡುತ್ತದೆ. ಇದಕ್ಕೂ ಮೀರಿ ಅವರ ಪರಿಸ್ಥಿತಿ ಕೆಟ್ಟರೆ ರಾಷ್ಟ್ರೀಯ ಸಹಾಯ ಸಮಿತಿ ಅವರಿಗೆ ಆಸರೆಯಾಗುತ್ತದೆ.

ಚಾತುರ್ವಾರ್ಷಿಕ ಯೋಜನೆ

ಯುರೋಪಿನ ಪಾಶ್ಚಾತ್ಯ ಒಕ್ಕೂಟದವರು ಅಮೇರಿಕಕ್ಕೆ ಕಳಿಸಿದ ಚಾತುರ್ವಾರ್ಷಿಕ ಯೋಜನೆಯಲ್ಲಿ ಯುರೋಪಿನಲ್ಲಿ ೭೫ ಕೋಟಿ ಪೌಂಡುಗಳ ಕೊರತೆ ಉಳಿಯುವುದೆಂದೂ ಆದರೆ ಈ ಯೋಜನೆಯಂತೆ ನಡೆದುಕೊಂಡರೆ ೧೯೫೨ ರ ಹೊತ್ತಿಗೆ ಅದು ತನ್ನ ಕಾಲಮೇಲೆ ತಾನು ನಿಲ್ಲಬಹುದೆಂದೂ ಹೇಳಲಾಗಿದೆ. ಎಲ್ಲ ಸರಿಯಿದ್ದರೆ ಬ್ರಿಟನ್ನೊಂದು ತನ್ನ ಆದಾಯ ವೆಚ್ಚಗಳನ್ನು ಸರಿಪಡಿಸಿಕೊಳ್ಳಬಹುದು. ಈ ವರ್ಷ ಇಂಗ್ಲೆಂಡು ಮಾರ್ಶಲ್ ಯೋಜನೆಯ ಸಹಾಯ ಧನದಲ್ಲಿ ಕೇವಲ ಮುಕ್ಕಾಲು ಭಾಗವನ್ನು ತೆಗೆದುಕೊಳ್ಳುವುದು. ಈ ಮುನ್ನಡೆಗೆ ಹಣಕಾಸಿನ ಮಂತ್ರಿ ಸರ್ ಸ್ಟಾಫರ್ಡರ ಮುತ್ಸದ್ದಿತನವೇ ಕಾರಣ.

ಏಶಿಯದ ಪರಿಷತ್ತು

ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮತ್ತೊಂದು ಮಾರ್ಗವೆಂದರೆ ವಸಾಹತಿನ ಜನರನ್ನು ಪೀಡಿಸುವದು. ಈ ದೃಷ್ಟಿಯಿಂದಲೇ ಡಚ್ಚರು ಇಂಡೋನೇಶಿಯನ್ನರ ಮೇಲೆ ಹರಿಹಾಯ್ದುದು. ಆದರೆ ಏಶಿಯದತ್ತ ಸಹಾನುಭೂತಿಯುಳ್ಳ ಇಲ್ಲಿಯವರು ಪಂಡಿತ ನೆಹರು ಕರೆದ ಏಶಿಯ ಪರಿಷತ್ತು ಐರೋಪ್ಯ ಸಾಮ್ರಾಜ್ಯಷಾದಕ್ಕೆ ಸರಿಯಾದ ಪ್ರತ್ಯಸ್ತ್ರವೆನ್ನುತ್ತಿದ್ದಾರೆ.

ಕಲಹೋಪಸಂಹಾರ

ಕಾಶ್ಮೀರದಲ್ಲಿ ಪಾಕಿಸ್ತಾನ ಹಿಂದುಸ್ತಾನಗಳು ಶಸ್ತ್ರೋಪಸಂಹಾರ ಮಾಡಿದ್ದರ ಬಗ್ಗೆ ಈ ಕಡೆಗೆ ಬಹಳ ಜನರಿಗೆ ಸಂತೋಷವಾಗಿದೆ. ಈ ಯುದ್ಧದ ಮುಕ್ತಾಯ, ಏಶಿಯದ ಪರಿಷತ್ತು, ರಾಷ್ಟ್ರ ಸೇವಾ ಸಂಘದ ದುರಾಗ್ರಹವನ್ನು ತಡೆಗಟ್ಟಿದ್ದು ಈ ಎಲ್ಲ ಸುದ್ದಿಗಳಿಂದ ಕನ್ಸರ್‌ವೇಟಿವ್ ಪತ್ರಿಕೆಗಳು ಮನಸ್ಸಿಲ್ಲದ ಮನಸ್ಸಿನಿಂದಾದರೂ ಪಂಡಿತ ನೆಹರುಗಳು ಏಶಿಯದ ನೇತಾರರೆಂಬುದನ್ನು ಒಪ್ಪಿಕೊಂಡಿವೆ. ಅಲ್ಲದೆ ಬಹಳ ಜನಸಂಖ್ಯೆ, ಉತ್ಪನ್ನಗಳಿರುವ ಭಾರತಕ್ಕೆ ಉಜ್ವಲ ಭವಿತವ್ಯವಿದೆಯೆಂದು ಹೇಳತೊಡಗಿವೆ.

ಚಲ ಪ್ರಪಂಚ

ಇಂಗ್ಲೆಂಡಿನಲ್ಲಿ ಈಗ ಸೀದಾ ಪದ್ಧತಿ, ರಾಜಕಾರಣ ಈ ಎಲ್ಲವೂ ಚಂಚಲವಾಗಿವೆ. ಕೆಲ ಪತ್ರಿಕೆಗಳು ಆಂಗ್ಲೋ-ಈಜಿಪ್ಷನ್ ಒಪ್ಪಂದದನ್ವಯ ಇಸ್ರೇಲಿನೊಡನೆ ಇಂಗ್ಲೆಂಡು ಯುದ್ಧ ಹೂಡಬೇಕಾಗಬಹುದೆಂದು ಸೂಚಿಸಿದ್ದು ಬೆವಿನ್ನರು ಅಂಥ ಇಚ್ಛೆ ಇಂಗ್ಲೆಂಡಿಗಿಲ್ಲ ಎಂದು ಸಾರಿದ್ದರಿಂದ ತೆಪ್ಪಗಾದವು. ಲಂಡನ್ನಿನಲ್ಲಾದ ಅರ್ಧ ದಿನದ ಬಸ್ ಮುಷ್ಕರ ಮಾತ್ರ ಲಂಡನ್ನಿಗರನ್ನು ಅಲ್ಲೋಲ ಕಲ್ಲೋಲ ಮಾಡಿತು. ಆದರೆ ಈಗ ಬಸ್ಸಿನವರು ಮಧ್ಯಸ್ಥಿಕೆಗೆ ಒಪ್ಪಿದ್ದರಿಂದ ಮೊದಲಿನಂತೆಯೇ ಬಸ್ಸುಗಳು ಓಡಾಡುತ್ತಿವೆ; ಜನರು ತೃಪ್ತರಾಗಿದ್ದಾರೆ.

ಪತ್ರಿಕಾಪ್ರಾಚುರ್ಯ

ಇಲ್ಲಿಯ ಪತ್ರಿಕೆಗಳೆಲ್ಲ ಈಗ ಬಹಳ ಸಂತೋಷದಲ್ಲಿವೆ. ಮೊದಲಿನಂತೆ ಅವೀಗ ಕಾಗದಕ್ಕಾಗಿ ಉಪವಾಸ ವನವಾಸಗಳನ್ನು ಅನುಭವಿಸಬೇಕಾಗಿಲ್ಲ. ಅವಕ್ಕೆ ಹೆಚ್ಚಿಗೆ ಕಾಗದಗಳನ್ನು ಪೂರಯಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಬಹುಸಂಖ್ಯ ಪತ್ರಿಕೆಗಳು ಟೋರಿಗಳದ್ದಾಗಿರುವುದರಿಂದ ಅವೆಲ್ಲವೂ ಕೂಲಿಕಾರ ಸರಕಾರದ ಪ್ರತಿಯೊಂದು ಕಾರ್ಯವನ್ನೂ ಅಪಲಪಿಸುತ್ತಿವೆ. ಅವುಗಳ ಪ್ರಧಾನ ಶತ್ರುವೆಂದರೆ ಸರ್ ಸ್ಟಾಫರ್ಡ್ ಕ್ರಿಪ್ಸ್; ಆದರೆ ಅವರೀಗ ಹಣಕಾಸನ್ನು ಸ್ವಲ್ಪ ಕೌಶಲದಿಂದ ವ್ಯವಸ್ಥೆಗೊಳಿಸಿದ್ದರಿಂದ ಅವು ಈಗೀಗ ಆ ಕಾರ್ಯವನ್ನು ಪ್ರಶಂಸಿಸುತ್ತಿವೆ. "ಯುರೋಪಿನಲ್ಲಿ ಧರ್ಮಸಂಗ್ರಾಮ" ಎಂಬ ಪುಸ್ತಕ ಮೊದಲು ಅಮೇರಿಕದಲ್ಲಿ ಹೊರಬಿದ್ದಾಗ ಇಲ್ಲಿಯ ಪತ್ರಿಕೆಗಳು ಬೈದವು. ಈಗ ಅದನ್ನೂ ಅದರ ಗ್ರಂಥಕರ್ತರನ್ನೂ ಅವು ಹೊಗಳುತ್ತಿವೆ. ಇದು ಇಲ್ಲಿಯ ಪತ್ರಿಕೆಗಳ ಕತೆ!

ಟ್ರೂಮನ್ನರ ಧೋರಣದ ಮೇಲೆ ಪ್ರತಿಕ್ರಿಯೆ

ಟ್ರೂಮನ್ನರ ಪೀಠಿಕಾಭಾಷಣವನ್ನು ಇಲ್ಲಿ ಮಧ್ಯಗತಿಯದೆಂದು ಹೇಳಲಾಗುತ್ತಿದೆ. "ಡೇಲಿ ಮೇಲ್" ಪತ್ರಿಕೆಯು ಅದನ್ನು "ಪ್ರೋಗ್ರೆಸಿವ್ ಲಿಬರಲಿಜಂ- ಪ್ರಾಗತಿಕ ಉದಾರವಾದ" ಎಂದು ಕರೆದಿದೆ. ಇನ್ನೊಂದು ಪತ್ರಿಕೆಯು ಇದು ಅಮೇರಿಕದ ಅಧ್ಯಕ್ಷ ಪೀಠದಿಂದ ಮಾಡಿದ ಮೊಟ್ಟಮೊದಲನೆಯ ವಾಮಪಕ್ಷೀಯ ಭಾಷಣ ಎಂದಿದೆ. ಅತಿಗಾಮಿಗಳಾದ ಕನ್ಸರ್‌ವೇಟಿವರು ಅದನ್ನು ಹೇಗೆ ಸ್ವಾಗತಿಸಿದರೆಂಬುದನ್ನು ಹೇಳುವುದೇ ಅನವಶ್ಯಕ.

ವಿಚಿತ್ರ ವಾರ್ತೆ

ಹೊಸ ವರ್ಷಾರಂಭದ ಒಂದೇ ಒಂದು ವಿಚಿತ್ರವಾರ್ತೆ ಇಂತಿದೆ. "ವೀ-ಟು" ಬಾಣಗಳನ್ನು ತಯಾರಿಸಿದ ಜರ್ಮನರ ಮೇಧಾಶಕ್ತಿಯಿಂದು "ಪ್ರೊಜೆಕ್ಟ್ ಪೇಪರ್ ಕ್ಲಿಪ್" ಎಂಬ ಹೊಸ Space Platforms ದಿಗ್ವೇದಿಕೆಗಳನ್ನು ತಯಾರಿಸಿ ಚಂದ್ರರಥತೆ ಅವು ಭೂಮಿಯ ಆಕರ್ಷಣ ಶಕ್ತಿಯ ಹೊರಗೆ ತೂಗುಬೀಳುವಂತೆ ಮಾಡಿ ಅಲ್ಲಿಂದ "ಚುಕ್ಕಾಣಿಯ ನಿರೀಕ್ಷಣೆ" ಮಾಡಲಾಗುವದಂತೆ!

ಪಾಕಿಸ್ತಾನಕ್ಕೆ ಸಂದೇಶ

ಭಾರತದ ಗವರ್ನರ್ ಜನರಲ್ ರಾಜಾಜಿಯವರು ಪಾಕಿಸ್ತಾನಕ್ಕೆ ಕೊಟ್ಟ ಹೊಸ ವರುಷದ ಸಂದೇಶವನ್ನು ಕಾಶ್ಮೀರದ ಯುದ್ಧೋಪಸಂಹಾರದಂತೆಯೇ ಇಲ್ಲಿ ಜಾಗತಿಕ ಶಾಂತಿಯ ದೃಷ್ಟಿಯಿಂದ ಸ್ವಾಗತಿಸಲಾಗಿದೆ. ಕಾಶ್ಮೀರದ ಸುದ್ದಿಯನ್ನು ಬರೆವಾಗ ಪತ್ರಿಕೆಗಳು ಗ. ಜನರಲ್ಲರ ಈ ಸಂದೇಶವನ್ನು ಉದ್ಧರಿಸದ ಸಂದರ್ಭವಿಲ್ಲ. ಅದು ೧೯೪೯ ರ ಹೊಸ ಸೌಹಾರ್ದದ ಗುರುತೆಂದು ತಿಳಿಯಲಾಗಿದೆ. ಈ ವಿಷಯ ಬರೆದಾಗ "ನ್ಯೂಸ್ ಕ್ರಾನಿಕಲ್" ಪತ್ರಿಕೆ ಇದರಿಂದ ದೂರ ಪ್ರಾಚ್ಯದ ಎಲ್ಲೆಡೆಯಲ್ಲೂ ಶಾಂತಿ ಸಮಾಧಾನಗಳು ತಲೆದೋರಬಹುದೆಂದು ಹೇಳಿದೆ.

ಡೀನ್ ಜಿ. ಆಚೆಸನ್

ಅಮೇರಿಕೆಯ ಹೊಸ ವಿದೇಶಮಂತ್ರಿ

೫೬ ವಯಸ್ಸಿನ ಅಮೇರಿಕೆಯ ಹೊಸ ವಿದೇಶಮಂತ್ರಿ ಡೀನ ಆಚಿಸನ್ನರು ವಿದೇಶ ವ್ಯವಹಾರದಲ್ಲಿ ದೀರ್ಘಕಾಲದ ಅನುಭವವುಳ್ಳವರು. ಈಗ ಮಾರ್ಶಲ್ ಯೋಜನೆಯೆಂದು ಪ್ರಸಿದ್ಧವಾಗಿರುವ ಅಮೇರಿಕೆಯ ಯುರೋಪ ಸಹಾಯ ಯೋಜನೆಯ ಕಲ್ಪನೆಯ ಜನ್ಮದಾತರು ಆಚಿಸನ್ನರೆಂದು ಹೇಳಲಾಗಿದೆ.

ಜನೆವರಿ ೨೦,೧೯೪೯ನೆ ದಿನ ಅಧ್ಯಕ್ಷ ಟ್ರೂಮನ್ನರ ದ್ವಿತೀಯ ಪದಾವಧಿಯ ಪ್ರತಿಜ್ಞಾವಿಧಿ ನಡೆಯುವಾಗಲೇ ಹೊಸ ವಿದೇಶಮಂತ್ರಿಗಳೂ ಅಧಿಕಾರ ವಹಿಸುವರು.

ಡೀನ ಆಚಿಸನ್ನರು ಅಮೇರಿಕೆಯ ಸರಕಾರದಲ್ಲಿ ಹಲವು ಬಾರಿ ಹಲವು ಅಧಿಕಾರ ಪದಗಳನ್ನು ಏರಿದವರಿದ್ದಾರೆ. ಅವರ ಸಾರ್ವಜನಿಕ ಜೀವನ ೩೦ ವರ್ಷದ್ದು. ಅವರು ಈ ಮೊದಲು ಏರಿದ ಕೊನೆಯ ಅಧಿಕಾರಪದವೆಂದರೆ ಉಪ. ವಿದೇಶಮಂತ್ರಿಯದು. ೧೯೪೭ ಜೂನ ತಿಂಗಳಲ್ಲಿ ಅದಕ್ಕೆ ರಾಜೀನಾಮೆ ಕೊಟ್ಟು ಅವರು ತಮ್ಮ ಜೀವನವೃತ್ತಿಯಾದ ವಕೀಲಿಯನ್ನು ಪುನಃ ಪ್ರಾರಂಭಿಸಿದ್ದರು. ಈಗ ತಿರುಗಿ ಅವರಿಗೆ ರಾಷ್ಟ್ರದ ಕರೆ ಬಂದಿದೆ.

ಅಮೇರಿಕೆಯ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರೊಬ್ಬರ ಆಪ್ತ ಕಾರ್ಯದರ್ಶಿಯಾಗಿ ಅವರು ಪ್ರಸಿದ್ಧಿಯ ಹಂತದಲ್ಲಿ ಕಾಲಿಟ್ಟರು. ಎರಡು ವರ್ಷಗಳ ನಂತರ ಆ ಕೆಲಸ ಬಿಟ್ಟು ವಾಶಿಂಗಟನ್ನಿನಲ್ಲಿ ವಕೀಲಿಯನ್ನು ಪ್ರಾರಂಭಿಸಿ ೧೯೩೩ರ ವರೆಗೂ ದುಡಿದು ಪ್ರಮುಖ ಕಾಯದೆ ಪಂಡಿತರೆಂದು ಹೆಸರಾದರು. ಆ ಮೇಲೆ ಕೆಲಕಾಲ ಉಪ.-ಅರ್ಥ ಮಂತ್ರಿಯಾಗಿ ಕೆಲಸ ಮಾಡಿ ತಿರುಗಿ ವಕೀಲಿಗೆ ಮರಳಿದರು.

೧೯೪೧ ರಲ್ಲಿ ಸಹಾಯಕ ವಿದೇಶ ಮಂತ್ರಿ ಪದಕ್ಕೆ ನೇಮಿಸಲ್ಪಟ್ಟ ಅವರು ಮಿತ್ರ ರಾಷ್ಟ್ರಗಳಿಗೆ ಸಹಾಯ ನೀಡುವ ಕೆಲಸದ ಮೇಲ್ವಿಚಾರದ ಹೊಣೆ ಹೊತ್ತರು. ಯುಕ್ತರಾಷ್ಟ್ರ ಪರಿಹಾರ ಪುನರ್ನಿವೇಶನ ಆಡಳಿತೆಯ ಸ್ಥಾಪನೆಯಲ್ಲಿ ಸಹಾಯಕರಾಗಿದ್ದುದಲ್ಲದೆ ಅಣುಶಕ್ತಿ ನಿಯಂತ್ರಣ ಕಾರ್ಯದಲ್ಲಿಯೂ ಕೈಕೊಟ್ಟಿದ್ದರು. ೧೯೪೫ ರಲ್ಲಿ ಅವರು ಉಪ ವಿದೇಶ ಮಂತ್ರಿಯಾದರು.

ಡೀನ ಆಚಿಸನ್ನರ ತಂದೆ ಎಪಿಸ್ಕೋಪಲ್ ಪಂಥದ ಧರ್ಮಗುರುಗಳು, ಆಚಿಸನ್ನರು ಹಾರ್ವರ್ಡ ಮತ್ತು ಯೇಲ್ ವಿದ್ಯಾಪೀಠಗಳಲ್ಲಿ ವ್ಯಾಸಂಗ ಮಾಡಿದರು. ಮೊದಲನೆ ಮಹಾಯುದ್ಧದಲ್ಲಿ ನೌಕಾಪಡೆಯಲ್ಲಿ ಕೆಲಸ ಮಾಡಿದರು.

೧೯೧೭ ರಲ್ಲಿ ಅವರು ಚತುರ ಚಿತ್ರಕಾರಳಾದ ಆ್ಯಲಿಸ್ ಸ್ಟಾನ್ಲೆಯೆಂಬವಳನ್ನು ಮದುವೆಯಾದರು. ಅವರೀಗ ಇಬ್ಬರು ಹೆಣ್ಣು ಒಬ್ಬ ಗಂಡು ಮಕ್ಕಳಿದ್ದಾರೆ.

ಹೊಸ ಕಾಂಗ್ರೆಸ ಕಾರ್ಯಕಾರೀ ಸಮಿತಿ



ಹೊಸದಿಲ್ಲಿಯಲ್ಲಿ ಸೇರಿದ ಹೊಸ ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಮೊದಲ ಸಭೆಯ ನಂತರ ತೆಗೆದ ಚಿತ್ರ. ಎಡದಿಂದ ಬಲಕ್ಕೆ: ಶ್ರೀ ಕಾಮರಾಜ ನಾಡರ, ಪ್ರೊ. ಎನ್. ಜಿ. ರಂಗಾ, ಶ್ರೀ ಎಸ್. ಕೆ. ಪಾಟೀಲ, ಶ್ರೀ ಗೋಕುಲಭಾಯಿ ಭಟ್, ಶ್ರೀ ರಾಮ ಸಹಾಯ, ಡಾ. ಪಟ್ಟಾಭಿ ಸೀತಾರಾಮಯ್ಯ (ಅಧ್ಯಕ್ಷ) ಶ್ರೀ ನಿಜಲಿಂಗಪ್ಪ, ಶ್ರೀ ಶಂಕರರಾವದೇವ ಮತ್ತು ಕಲಾವೆಂಕಟರಾವ (ಕಾರ್ಯದರ್ಶಿ)

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೧೪

ಮುಂಬಯಿ ಶೇರ ಪೇಟೆಯಲ್ಲಿ ವಿಶೇಷ ಕೇಳಿಕೆ ವ್ಯವಹಾರವಿಲ್ಲ. ಬೆಲೆಗಳು ಇಳಿಮುಖವಾಗಿಯೇ ಇವೆ. ಇಂದಿನ ಕೊನೆಯ ಬೆಲೆಗಳು ಇಂತಿಪ್ಪವು.

ಮುಂಬಯಿ ಡಾಯಿಂಗ್	[illegible]
ಕೋಹಿನೂರು	[illegible]
ಸ್ವದೇಶಿ	[illegible]
ಗೋಕಾಕ	೨೬೦ ೦ ೦
ಸಿಂಚಿಯ	೨೩೨-೮-೦
ಸಿಂಪ್ಲೆಕ್ಸ	[illegible]
ಬೇಲಾಪುರ ಸಕ್ಕರೆ	೨೩೯-೮-೦
ಸಿಂಧ್ಯ ಸ್ಟೀಮ	೨೬-೨-೦
ಟಾಟಾ ಸ್ಟೀಲ ಡೆಫರ್	೧೬೩೬-೪-೦
ಇಂಡಿಯನ್ ಆಯರ್ನ	೨೫-೦-೦
ಇಂಪೀರಿಯಲ್ ಟೊಬ್ಯಾಕೊ	೧೫೦೧-೦-೦
ಸೆಂಟ್ರಲ ಬ್ಯಾಂಕ್	೫೯-೮-೦
ಬ್ಯಾಂಕ ಆಫ್ ಇಂಡಿಯಾ	೧೫೯-೦-೦

ಚಿನ್ನ ಬೆಳ್ಳಿ

ಚಿನ್ನ	೧೧೩-೯-೦
ಬೆಳ್ಳಿ	೧೭-೯೦-೦
ಸಾರೀನ್	೭೪-೦-೦೦

ಅರಳೆ

ಅರಳೆ ಪೇಟೆ ಯಥಾಸ್ಥಿತಿ ಇಷ್ಟಂತಿದೆ.

ಮೇ	೬೦೭-೮-೦
ಜುಲೈ	೬೧೭-೮-೦
ಸೆಪ್ಟಂಬರ	೬೧೭-೪-೦

ಎಣ್ಣೆಕಾಳು

ಅಗಸಿ ತಯಾರಿ	೨೬-೮-೦
ಅಗಸಿ ವಾಯಿದಾ	೨೬-೧೦-೦
ಅಗಸಿ ಎಣ್ಣೆ	೦೬-೧೦-೦
ಶೇಂಗಾ	೧೬೮-೧೨ ೦

ಹುಬ್ಬಳ್ಳಿ

ತಾ. ೧೪

ಜ. ಹತ್ತಿ ನಗಕ್ಕೆ		[illegible]
ಮುಂ. ಹತ್ತಿ		[illegible]
ಜ. ಅರಳೆ ,,		[illegible]
ಹತ್ತಿಕಾಳು	ರೂ.ಗೆ	೫½ ಪೌಂಡು
ಕುಸುಬಿ	ಚೀಲಕ್ಕೆ	೩೪-೩೮
ಅಗಸಿ	,,	೩೮-೩೯
ಜೋಳ	,,	೪೦ ೪೨
ಜ. ಹೆಸರು	,,	[illegible]
ಕರಿ ಎಳ್ಳು	,,	[illegible]
ಬಿಳಿ ಎಳ್ಳು	,,	೭೩-೭೮
ಡಕಲೆ	,,	೬೨-೬೪
ಎ. ತೊಗರಿ	,,	೩೨ ೩೪
ಹುರಳಿ	,,	೩೪-೩೫
ಕೆಂ. ಅಲಸಂದಿ	,,	[illegible]
ಬಿ. ಅಲಸಂದಿ	,,	[illegible]
ಶೇಂಗಾ (ಹೇರು)		೪೩-೪೪

ಸಾಂಗಲಿ ಪೇಟೆ

ಅರಿಸಿಣ	೧೧೯-೧೦೩
ಮೆಣಸಿನಕಾಯಿ	೧೦೦-೧೭೦
ಶೇಂಗಾ	೧೨೨½
ಬೆಲ್ಲ	೩೦-೪೪

ಶಿವಮೊಗ್ಗೆ

ತಾ. ೯

ದೇಶಾವರ ನಂ. ೧		೩೦-೩೨
,,	೨	೨೮-೩೦
,,	೩	೨೨-೨೬
ರಾಜಾ ಅಲವು		೨೪-೨೫
ತೊರಸಾಲು		೧೮-೨೫
ಬೆಟ್ಟಕೆಂಪಿ		೦೬-೧೭
ಚಿಟ್ಟ		೧೨-೧೪

ಬೆಲೆಗಳು ಆಕರ್ಷಣೀಯವಾಗಿಲ್ಲ.

—೦—

ಆಕಾಶನೌಕೆ

ಅಮೇರಿಕದ ಸರಕಾರೀ ವಿಜ್ಞಾನಿಗಳು ಒಂದು ಆಕಾಶ ನೌಕೆಯನ್ನು ತಯಾರಿಸುವುದರಲ್ಲಿದ್ದಾರೆ. ಅದರ ಮೂಲಕ ಚಂದ್ರಗೋಲಕ್ಕೆ ಹೋಗ ಬಹುದಂತೆ. ಜರ್ಮನ್ ವಿ ೨ ರ್ಯಾಕೆಟ್ಟಿಗೆ ಬಳಸಿದ ದ್ರವ ಇಂಧನವನ್ನು ಇದಕ್ಕೂ ಬಳಸಲಾಗುತ್ತದೆ. ಓಹಿಯೋದ ಪ್ರಯೋಗ ಶಾಲೆಗಳಲ್ಲಿ ಈ ವಾಯುವನ್ನು ಹೆಚ್ಚಾಗಿ ತಯಾರಿಸಲಾಗುತ್ತಿದೆ. ಬ್ರಿಟಿಶ್ ವಿಜ್ಞಾನಿಗಳಾದರೋ ಅಣುಶಕ್ತಿಯಿಂದ ನಡೆವ ರ್ಯಾಕೆಟ್ಟನ್ನು ನಿರ್ಮಿಸಲು ಹವಣಿಸಿದ್ದಾರೆ. ಅದಕ್ಕೂ ಜಲಜನಕವೇ ಬೇಕಂತೆ.

ಕರ್ಮವೀರ

[illegible] ವರ್ಷ [illegible]
ಪುಷ್ಯ ಬಹುಳ ೩ ಸೋಮವಾರ

ಸಾರ್ವತ್ರಿಕ ಶಿಕ್ಷಣ

ಬ್ರಿಟಿಶ ಸರಕಾರದವರು ನೂರೈವತ್ತು ವರುಷಗಳಿಗಿಂತ ಹೆಚ್ಚು ಅವಧಿಯವರೆಗೆ ಹಿಂದುಸ್ತಾನದಲ್ಲಿ ರಾಜ್ಯವನ್ನಾಳಿದರೂ ಇಲ್ಲಿ ಶಿಕ್ಷಣದ ಪ್ರಸಾರ ಮಾಡಲಿಲ್ಲ. ಜನ ಹೆಚ್ಚು ಸುಶಿಕ್ಷಿತರಾದರೆ, ತಮ್ಮ ಹಕ್ಕು ಬಾಧ್ಯತೆಗಳ ಅರಿವು ಅವರಿಗಾಗಿ, ಅವರು ತಮ್ಮನ್ನು ಹೊರದೂಡಬಹುದು, ಸ್ವರಾಜ್ಯವನ್ನು ಪಡೆಯಲಹುದು ಎಂದು ಮುಂತಾದ ಮುಂದಾಲೋಚನೆಯಿಂದಲೆ ಅವರು ಸುಶಿಕ್ಷಿತರ ಪ್ರಮಾಣವನ್ನು ನೂರಕ್ಕೆ ಹತ್ತರಷ್ಟೇ ಇಟ್ಟರೆಂದು ಹೇಳಬಹುದು. ಆದರೀಗ ನಮ್ಮ ರಾಷ್ಟ್ರೀಯ ಸರಕಾರದವರು ಆ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಸಾರ್ವತ್ರಿಕ ಶಿಕ್ಷಣದ ಯೋಜನೆಯನ್ನಿಟ್ಟುಕೊಂಡು ಕಾರ್ಯಪ್ರವೃತ್ತರಾಗಿದ್ದಾರೆ. ಸ್ವತಂತ್ರ ಹಿಂದುಸ್ತಾನವು ಕೈಕೊಳ್ಳಲಿರುವ ಘಟನೆಯನ್ನಯ ಪ್ರೌಢರಿಗೆಲ್ಲ ಮತಾಧಿಕಾರ ದೊರೆವುದಾದ್ದರಿಂದ ಮತಾಧಿಕಾರಿಗಳು ಅಶಿಕ್ಷಿತರುಳಿದರೆ ಆದೆಂತು ಯೋಗ್ಯ ಜನರು ಆಡಳಿತ ಸೂತ್ರವನ್ನು ವಹಿಸಿಕೊಳ್ಳಬಲ್ಲರು?

ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳಾದ ಮೌ. ಅಬುಲ್ ಕಲಂ ಆಜಾದರವರು ಜನೆವರಿ ಎಳನೆಯ ದಿನಾಂಕ ಪ್ರಯಾಗ ಕ್ಷೇತ್ರದಲ್ಲಿ ಈ ಸಂಬಂಧದಲ್ಲಿ ಘೋಷಣೆಯನ್ನು ಮಾಡಿ ರಾಷ್ಟ್ರೀಯ ಶಿಕ್ಷಣದ ಕಾರ್ಯಕ್ರಮವನ್ನು ವಿವರಿಸಿದರು. ಒತ್ತಾಯದ ಮೂಲ ಶಿಕ್ಷಣದ ಕಾರ್ಯಕ್ರಮವನ್ನು ಬರುವ ಹದಿನಾರು ವರುಷಗಳಲ್ಲಿ ಮುಗಿಸಬೇಕೆಂದು ನಿರ್ಧರಿಸಲಾಗಿದೆ. ಐದೈದು ವರುಷಗಳ ಎರಡು ಕೊನೆಯದು ಆರು ವರುಷಗಳ ಹೀಗೆ ಮೂರು ಘಟ್ಟಗಳನ್ನು ಮಾಡಿ ರಾಷ್ಟ್ರವನ್ನೆಲ್ಲ ಸುಶಿಕ್ಷಿತ ಮಾಡಿ ಬಿಡಬೇಕೆಂದು ಮಂತ್ರಿವರ್ಯರು ಯೋಜಿಸಿದ್ದಾರೆ. ಹದಿನಾರು ವರುಷಗಳೆಂದರೆ ಬಹಳ ಅವಧಿಯೆಂದು ಯಾರಿಗಾದರೂ ಎನಿಸಬಹುದು. ಆದರೆ ಹಿಂದುಸ್ತಾನದಂಥ ಪ್ರಚಂಡ ರಾಷ್ಟ್ರದಲ್ಲಿಯ ನೂರಕ್ಕೆ ತೊಂಬತ್ತರಷ್ಟು ಜನರನ್ನು ಸುಶಿಕ್ಷಿತ ಮಾಡುವ ಕೆಲಸ ಒಂದೆರಡು ವರುಷಗಳಲ್ಲಿ ಸಾಧ್ಯವಾಗತಕ್ಕ ಮಾತಲ್ಲೆಂಬುದು ಸುಸ್ಪಷ್ಟ.

ಬರೀ ಮಕ್ಕಳನ್ನು ಸುಶಿಕ್ಷಿತ ಮಾಡದೆ ಪ್ರೌಢರನ್ನೂ ಸುಶಿಕ್ಷಿತ ಮಾಡುವದು ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ಆದರೆ ಪ್ರೌಢರಿಗೆ ಬರಿ ಅಕ್ಷರ ಜ್ಞಾನ ಮಾಡಿ ಕೊಟ್ಟರೆ ತೀರದು. ಅವರಿಗೆ ತಮ್ಮ ಹಕ್ಕು ಬಾಧ್ಯತೆಗಳು ಗೊತ್ತಾಗಿ ರಾಜ್ಯಾಡಳಿತದಲ್ಲಿ ಅವಶ್ಯಕ ಪಾತ್ರವನ್ನು ಅವರು ವಹಿಸುವಂತಾಗಬೇಕು. ಅಂತೆಯೇ ಮಾನ್ಯ ಮಂತ್ರಿಗಳು ಪ್ರೌಢರ ಶಿಕ್ಷಣಕ್ಕೆ 'ಸಾಮಾಜಿಕ ಶಿಕ್ಷಣ' ಎಂದು ಹೆಸರಿಟ್ಟಿರುವರು. ಬರೀ ಅಕ್ಷರ ಜ್ಞಾನವಾದರೆ ನಡೆಯದು; ಜನರ ಮಾನಸಿಕ ಉನ್ನತಿಯೂ ಆಗಬೇಕು ಎಂದು ಮೌಲಾನಾಸಾಹೇಬರು ಹೇಳಿರುವರು. ಮತ್ತು ಪ್ರೌಢರಿಗೆ ಶಿಕ್ಷಣ ಕೊಡುವದಕ್ಕಾಗಿ ದ್ವಾದಶ ವಿಧದ ಕಾರ್ಯಕ್ರಮವನ್ನು ಗೊತ್ತುಪಡಿಸಲಾಗಿದೆ. ಹಳ್ಳಿಯ ಶಾಲೆಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ಮಕ್ಕಳಿಗೆ ಮತ್ತು ಪ್ರೌಢರಿಗೆ ಮನರಂಜನೆ, ಆಟ ಪಾಟ ಮೊದಲಾದವುಗಳ ಮೂಲಕ ಮೂಲ ಶಿಕ್ಷಣವನ್ನು ಕೊಡಲಾಗುವದು. ಪ್ರಾಚೀನ ಭಾರತದಲ್ಲಿ ಬರೀ ಅಕ್ಷರಸ್ಥರಿಗೆ ಸುಶಿಕ್ಷಿತರೆಂದು ಹೇಳುತಿರಲಿಲ್ಲ. ಶಾಲೆಗಳಲ್ಲಿಯಷ್ಟೇ ಶಿಕ್ಷಣವನ್ನು ಕೊಡುತಿರಲಿಲ್ಲ. ಹಳ್ಳಿಯ ಹಾಡು, ಲಾವಣಿ, ಹರಿಕಥೆ, ಪುರಾಣ, ಪ್ರವಚನ ಮೊದಲಾದವುಗಳಿಂದಲೂ ಜನರಿಗೆ ಶಿಕ್ಷಣವನ್ನು ಕೊಡಲಾಗುತಿದ್ದಿತು. ಈಗ ಕೂಡ ಸಹಾಯಾದೀಪ, ಆಕಾಶವಾಣಿ, ಚಲಚಿತ್ರ, ರಾಷ್ಟ್ರೀಯ ಪದ, ನಾಟಕ ಮತ್ತು ಕೈಗಾರಿಕೆಮೂಲಕವೆ ಶಿಕ್ಷಣ ಕೊಡಬೇಕೆಂದು ಗೊತ್ತಾಗಿದೆ.

ಕೇಂದ್ರ ಸರಕಾರದವರು ಇಟ್ಟುಕೊಂಡ ಈ ಕಾರ್ಯಕ್ರಮವು ಯಶಸ್ವಿಯಾಗಬೇಕಾದರೆ ಜನರು ಅದರಂತೆ ಶಿಕ್ಷಣದಂಥ ಪವಿತ್ರ ಕಾರ್ಯಕೈಕೊಂಡ ಶಿಕ್ಷಕರ ಸಹಾಯ ಬೇಕು ಸದ್ಯದ ಮಕ್ಕಳ ಮತ್ತು ಪ್ರೌಢರ ಶಿಕ್ಷಣ ಪ್ರಗತಿಯನ್ನು ನೋಡಿದರೆ ಭವಿಷ್ಯತ್ತು ಕಾರ್ಗತ್ತಲೆಯಿಂದ ತುಂಬಿದೆಂದು ವಿಷಾದಿಸಬೇಕಾಗುವದು. ಶಿಕ್ಷಕರ ಇಂದಿನ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯೂ ಇದಕ್ಕೆ ಕೆಲಮಟ್ಟಿಗೆ ಕಾರಣವಿರಬಹುದು. ಆದುದರಿಂದ ಸರಕಾರದವರು ಶಿಕ್ಷಕರ ಸ್ಥಿತಿಗತಿಗಳನ್ನು ಸುಧಾರಿಸುವದು ಕರ್ತವ್ಯವಾಗಿದೆ. ಶಿಕ್ಷಕರಾದರೂ ತಮ್ಮ ಹೊಣೆಯನ್ನರಿತುಕೊಂಡು ಸ್ವತಂತ್ರ ಹಿಂದುಸ್ತಾನದ ನಾಗರಿಕರನ್ನು ಸುಶಿಕ್ಷಿತ ಮಾಡಿದ ಪುಣ್ಯವನ್ನು ಪಡೆಯುವ ಅಹಮಹಮಿಕೆಯಿಂದ ಕಾರ್ಯತತ್ಪರರಾಗಬೇಕೆಂದು ಬಿನ್ನವಿಸಿ ಸರಕಾರದ ಧ್ಯೇಯವು ಸಾಧ್ಯವಾಗಲಿ ಎಂದು ಹರಸುತ್ತೇವೆ.

ದಿವಂಗತ ಸಯ್ಯದ ಅಬ್ದುಲ್ಲಾ ಬ್ರೆಲ್ವಿ

"ಗುಣಪೂರ್ಣ ಸಭ್ಯ ವೀರ"



ಮೇಲಿನ ತಲೆಬರೆಹದ ಕೆಳಗೆ "ಮುಂಬಯಿ ಕ್ರಾನಿಕಲ್" ಸಂಪಾದಕ ಶ್ರೀ ಏಸ್. ಎ. ಬ್ರೆಲ್ವಿಯವರ ಆಕಸ್ಮಿಕ ಮರಣದ ಬಗ್ಗೆ ಅನುತಾಪವನ್ನು ವ್ಯಕ್ತಗೊಳಿಸುತ್ತ "ಹರಿಜನ" ಸಂಪಾದಕ ಶ್ರೀ ಕ. ಘ. ಮಶ್ರುವಾಲಾ ಅವರು, ಬ್ರೆಲ್ವಿಯವರು "ಸಭ್ಯತೆಯ ಅವತಾರವೇ" ಆಗಿದ್ದರೆಂದು ಬರೆದಿದ್ದಾರೆ. ಅವರು ಪತ್ರಿಕಾ ವೃತ್ತಿಯಲ್ಲಿ ಹೆಸರು ಗಳಿಸಿದರೂ ಅದು ಅವರ ವ್ಯಕ್ತಿತ್ವದ ಒಂದು ಕ್ಷುದ್ರ ಅಂಶವಾಗಿತ್ತು ಮಾತ್ರ. ಅವರು ಪತ್ರಿಕಾ ವೃತ್ತಿಯಲ್ಲದೆ ಬೇರಾವುದನ್ನು ಅವಲಂಬಿಸಿದ್ದರೂ ಅವರೊಡನೆ ಸಂಪರ್ಕ ಬಂದವರೆಲ್ಲರೂ ಅವರನ್ನು ಅದರ ಗೌರವಗಳಿಂದ ಕಾಣುತ್ತಿದ್ದರು. ಶ್ರೀ ವೈಕುಂಠಬಾಯಿ, ಶ್ರೀ ಗಗನವಿಹಾರಿ ಮೆಹತಾ ಮತ್ತು ಸ್ವರ್ಗೀಯ ಮಹಾದೇವಭಾಯಿಯವರ ಜೀವದ ಗೆಳೆಯರಾಗಿದ್ದ ಅವರನ್ನು ಅವರೆಲ್ಲ ತಮ್ಮ ಮನೆಯೊಳಗಿನವರೊಬ್ಬರೆಂದೇ ಬಗೆದಿದ್ದರು, ಧರ್ಮಭೇದ ಅವರನ್ನು ಬೇರ್ಪಡಿಸಲಿಲ್ಲ. "೧೯೩೦ ರಲ್ಲಿ ನನಗೂ ಅವರಿಗೂ ಪ್ರತ್ಯಕ್ಷ ಸಂಬಂಧ ಬಂತು. ಅದು ನಾಸಿಕದ ಕೇಂದ್ರ ಕಾರಾಗೃಹದಲ್ಲಿ ಸಹ-ಬಂದಿಗಳಾಗಿ. ಅವರ ಉದಾತ್ತ ಹೃದಯ, ವಿಶಾಲದೃಷ್ಟಿ, ಜಾತೀಯತೆಯ ಅಭಾವ ಇವೆಲ್ಲವೂ ಆಗಲೇ ನನ್ನ ಗಮನಕ್ಕೆ ಬಂದಿವೆ."

ವಾರದ ಸಿಂಹಾವಲೋಕನ

ಹಿರಿಯ ಪತ್ರಿಕಾಕರ್ತರ ನಿಧನ

ಕಳೆದ ವಾರ ಹಿಂದುಸ್ತಾನದಲ್ಲಿಯ ಹಿರಿಯ ಪತ್ರಿಕಾ ಸಂಪಾದಕರಿಬ್ಬರು ನಿಧನ ಹೊಂದಿದ್ದರಿಂದ ಪತ್ರಿಕಾ ಪ್ರಪಂಚಕ್ಕೆ ತುಂಬಿಬರಲಾರದ ಹಾನಿಯಾಗಿದೆ. ಇಂಡಿಯನ್ ರಿವ್ಯೂ ಪತ್ರಿಕೆಯ ಯಶಸ್ವೀ ಸಂಪಾದಕರಾಗಿದ್ದ ಶ್ರೀ. ನಟೇಶನ್‌ರು ವಯಸ್ಸಿನ ೮೬ನೇ ವರುಷವೃದ್ಧಾಪ್ಯದ ಮೂಲಕ ಪರಂಧಾಮವನ್ನೈದಿದರು. ನಟೇಶನ್‌ರು ಹಿರಿಯ ಪತ್ರಿಕಾಸಂಪಾದಕರಾಗಿರದೆ ಹಿಂದೀ ರಾಷ್ಟ್ರಪುರುಷರ ಜೀವನ ಚರಿತ್ರೆಗಳನ್ನು ಪ್ರಸಿದ್ಧಿಸಿ ಮಹದುಪಕಾರ ಮಾಡಿರುವರು. ಪತ್ರಿಕಾ ಪ್ರಪಂಚಕ್ಕೆ ಇವರು ಸಲ್ಲಿಸಿದ ಸೇವೆಗಾಗಿಯೆ ಮದ್ರಾಸಿನಲ್ಲಿ ಮೊದಲಸಲ ಕೂಡಿದ್ದ ಪತ್ರಿಕಾ ಸಂಪಾದಕರ ೩ನೇ ಸಮ್ಮೇಲನದ ಸ್ವಾಗತಸಮಿತಿಯ ಅಧ್ಯಕ್ಷಸ್ಥಾನವು ಇವರಿಗೆ ದೊರೆತಿದ್ದಿತು. ಇದೇದಿನ ಮುಂಬಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಬ್ರೆಲ್ವಿಯವರೂ ಅಕಾಲದಲ್ಲಿ ಹೃದಯವಿಕಾರದಿಂದ ನಿಧನ ಹೊಂದಿದ್ದು ಅತ್ಯಂತ ವಿಷಾದಕರವಾದುದು. ಮರಣಕಾಲಕ್ಕೆ ಇವರಿಗೆ ಕೇವಲ ೫೭ ವರುಷಗಳಾಗಿದ್ದವು. ಹಾರ್ನಿಮನ್‌ರ ಗರಡಿಯಲ್ಲಿ ತಯಾರಾಗಿದ್ದ ಶ್ರೀ ಬ್ರೆಲ್ವಿಯವರು ಕ್ರಾನಿಕಲ್ ಪತ್ರಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ಸ್ವತಃ ಪತ್ರಿಕೆಯ ಒಡೆಯರಾಗದಿದ್ದ ಶ್ರೀ ಬ್ರೆಲ್ವಿಯವರು ಪತ್ರಿಕೋದ್ಯಮದಲ್ಲಿ ದುಡಿಯುವವರ ಕಷ್ಟನಷ್ಟಗಳನ್ನು ತಿಳಿದು ಅವುಗಳ ನಿವಾರಣೆಗಾಗಿ ಬಹಳ ಮಟ್ಟಿಗೆ ಪ್ರಯತ್ನಿಸಿ ಯಶಸ್ವಿಯಾದವರು ಹಿಂದೀ ಪತ್ರಿಕೆಗಳು ಪರಕೀಯ ಸುದ್ದಿ ಸಂಸ್ಥೆಯನ್ನು ಕೊಂಡುಕೊಂಡು ಹಿಂದುಸ್ತಾನದ ರಾಷ್ಟ್ರೀಯತ್ವಕ್ಕೆ ಪೋಷಕವಾಗುವ ರೀತಿಯಲ್ಲಿ ಅದನ್ನು ಮಾರ್ಪಡಿಸಿಕೊಳ್ಳಲಣಿಯಾದ ಈ ಸಮಯದಲ್ಲಿ ಅಪ್ರೆಸ್ ಟ್ರಸ್ಟಿನ ದಾಯರೆಕ್ಟರರೊಬ್ಬರು ಕಣ್ಮರೆಯಾದುದು ದುರ್ದೈವವೇ ಸರಿ. ಈ ಇಬ್ಬರು ಆದರ್ಶ ಪತ್ರಿಕಾ ಸಂಪಾದಕರಿಗೆ ಪರಮಾತ್ಮನು ಸದ್ಗತಿಯನ್ನೀಯಲಿ.

ಅನುಕರಣೀಯ ಉಪಕ್ರಮ

ಹಿಂದುಸ್ತಾನವಿಂದು ಸ್ವಾತಂತ್ರ್ಯವನ್ನು ಪಡೆದಿದೆ. ಸ್ವಾತಂತ್ರ್ಯದ ಜೊತೆಗೆ ನಮ್ಮ ಸಂಸ್ಕೃತಿಯ ಪುನರುದ್ಧಾರದ ಅವಸರವೂ ಬಂದಿದೆಯೆಂದು ಹೇಳಬಹುದು. ಸಂಸ್ಕೃತವು ಹಿಂದುಸ್ತಾನದ ಪ್ರಾಚೀನ ಭಾಷೆ. ಜಗತ್ತಿಗೇ ಅವಶ್ಯವಾದ ಶಾಸ್ತ್ರಗಳೆಲ್ಲ ಸಂಸ್ಕೃತದಲ್ಲಿಯೇ ಬರೆಯಲ್ಪಟ್ಟಿವೆ. ಒಂದು ಕಾಲಕ್ಕೆ ಸಂಸ್ಕೃತವು ಕೇವಲ ಹಿಂದುಸ್ತಾನದಲ್ಲಿ ಅಷ್ಟೇ ಅಲ್ಲ ದೂರದ ಮಲಯ ಇಂಡೋಚೀನಗಳಲ್ಲಿಯೂ ಪ್ರಚಲಿತ ಭಾಷೆಯಾಗಿದ್ದಿತು. ಆದರಿಂದು ಅದರ ಆ ಮಹತ್ವದ ಸ್ಥಾನವು ಮಾಯವಾಗಿದೆ. ಅದಕ್ಕೆ ಮತ್ತೆ ಆ ಸ್ಥಾನವನ್ನು ಕಲ್ಪಿಸಿಕೊಡಲು ಹಲಕೆಲವು ಪ್ರಯತ್ನಗಳು ಪ್ರಾರಂಭವಾಗಿವೆ. ಕಾಶಿಯಲ್ಲಿದ್ದ ಸರಕಾರೀ ಸಂಸ್ಕೃತ ಕಾಲೇಜಿನ ಪದವೀದಾನ ಸಮಾರಂಭದ ಕಾಲಕ್ಕೆ ಸಂ. ಪ್ರಾಂತದ ಮುಖ್ಯ ಮಂತ್ರಿಗಳಾದ ಗೋವಿಂದವಲ್ಲಭ ಪಂತರು ಸಂಸ್ಕೃತದ ಹಿರಿಮೆಯನ್ನು ಮನಸಾರೆ ಹೊಗಳಿದ್ದಲ್ಲದೆ ಅದರ ಪುನರುದ್ಧಾರಕ್ಕಾಗಿ ಪ್ರಯತ್ನಿಸುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆಯೆಂದೂ ಈ ಸಂಸ್ಕೃತ ಕಾಲೇಜನ್ನೇ ಮೂಲವಾಗಿಟ್ಟುಕೊಂಡು ಸಂಸ್ಕೃತ ವಿಶ್ವವಿದ್ಯಾಲಯವೊಂದನ್ನು ತೆಗೆಯಲು ತಮ್ಮ ಸರಕಾರವು ನಿರ್ಧರಿಸಿದೆಯೆಂದೂ ಸಾರಿದರು. ಇದು ಅತ್ಯಂತ ಸ್ತುತ್ಯವಾದ ಸಂಗತಿಯು. ಸಂಸ್ಕೃತಪಂಡಿತರು ಗೌರವಪೂರ್ವಕ ಜೀವನ ಸಾಗಿಸಲು ಉಪಾಯ ಯೋಜಿಸಬೇಕೆಂದೂ ಮಾನ್ಯಮಂತ್ರಿಗಳು ಹೇಳಿದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಹನ್ನೆರಡು, ಹದಿನಾರು ವರುಷ ಒಂದೇ ಸವನೆ ಅಭ್ಯಾಸಮಾಡಿ ವಿವಿಧ ಶಾಸ್ತ್ರಗಳಲ್ಲಿ ಪಾರಂಗತರಾದ ನಮ್ಮ ಸಂಸ್ಕೃತ ಪಂಡಿತರು ಇಂದು ರೂಪಾಯಿ ಎರಡು ರೂಪಾಯಿ ದೇಶಾವರಕ್ಕಾಗಿ ಅಂಡಲೆಯುವದನ್ನು ನೋಡಿದರೆ ಯಾರಿಗಾದರೂ ಮರುಕುಂಟಾಗದಿರದು. ಅದುದರಿಂದ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯ ಜೊತೆಯಲ್ಲಿಯೇ ನಮ್ಮ ಮುಖ್ಯಮಂತ್ರಿಗಳು ಸಂಸ್ಕೃತ ಪಂಡಿತರ ಉದರನಿರ್ವಾಹದ ಸಾಧನವನ್ನೂ ಕಲ್ಪಿಸಿಕೊಡುವದು ಅವಶ್ಯವಾಗಿದೆ. ಪಂಡಿತ ಪಂತರ ಮೇಲ್ಪಂಕ್ತಿಯನ್ನು ಉಳಿದ ಪ್ರಾಂತದವರೂ ಅದೇಕೆ ಹಿಂದುಸ್ತಾನ ಸರಕಾರದ ಶಿಕ್ಷಣ ಶಾಖೆಯವರು ಕೂಡ ಇಟ್ಟುಕೊಂಡು ಹಿಂದುಸ್ತಾನದ ಸಂಸ್ಕೃತಿ, ಭಾಷೆಗಳಿಗೆ ಉಗಮಸ್ಥಾನದಂತಿದ್ದ ಸಂಸ್ಕೃತದ ಪುನರುಜ್ಜೀವನಕ್ಕಾಗಿ ಪ್ರಯತ್ನಿಸುವದು ಅತ್ಯವಶ್ಯವೆಂದು ನಾವು ಸಾರಿಹೇಳುತ್ತೇವೆ.

ನೀತಿಭ್ರಷ್ಟತೆಯ ನಿವಾರಣೆ

ಕಳೆದ ಮಹಾಯುದ್ಧದಿಂದಾದ ಹಾನಿಗಳಲ್ಲಿ ಜನತೆಯ, ಹಿಂದುಸ್ತಾನದಲ್ಲಿಯ ಬಹುಸಂಖ್ಯ ಜನತೆಯ ನೀತಿಯು ಭ್ರಷ್ಟವಾದುದು ಮಹತ್ವದ ಹಾನಿಯೆಂದು ಹೇಳಬಹುದಾಗಿದೆ. ಆಗ ಪ್ರಾರಂಭವಾದ ಕಳ್ಳಪೇಟೆ, ಲಂಚಗುಳಿತನ, ಮರಾಮತಿ, ಅಫರಾತಫರಾ ಮೊದಲಾದ ದುರ್ಗುಣಗಳು ಇಂದಿಗೂ ಹಿಂದುಸ್ತಾನದಲ್ಲಿ ತಾಂಡವವಾಡುತಿವೆ. ಹಿಂದುಸ್ತಾನದಿಂದ ಕಳೆದ ವರುಷವೇ ಬೇರೆಯಾಗಿ ಹೋದ ಪಾಕಿಸ್ತಾನವೂ ಇದಕ್ಕೇನು ಹೊರತಾಗಿರುವದಿಲ್ಲ. ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಲಿಯಾಕತ ಅಲ್ಲಿಖಾನರು ಪಾರ್ ಘಟನಾ ಸಮಿತಿಯಲ್ಲಿ ಈ ಸಂಬಂಧದಲ್ಲ ಒಂದು ಮಸೂದೆಯನ್ನು ಮಂಡಿಸಿರುವರು. ಜನತೆಯಲ್ಲಿ ಅಧಿಕಾರಿಗಳಲ್ಲಿ ಮನೆಮಾಡಿದ ಲಂಚಗುಳಿತನ, ಅಧಿಕಾರ ಲಾಲಸೆ, ಮರಾಮತಿ; ಸಾರ್ವಜನಿಕ ಹಣದ ಅಪಹಾರ ಮೊದಲಾದ ದುಷ್ಪ್ರವೃತ್ತಿಗಳನ್ನು ಹೋಗಲಾಡಿಸಿ ಸಾರ್ವಜನಿಕ ಜೀವನವನ್ನು ನಿಶುದ್ಧಗೊಳಿಸಲು ಯತ್ನಿಸುವದೇ ಈ ಮಸೂದೆಯ ಮುಖ್ಯಾಶಯವಾಗಿದೆ. ಇಂಥ ಸಮಾಜಘಾತಕರನ್ನು ದೇಶದಿಂದ ಹೊರದೂಡುವದೆ ವಿಹಿತವಾಗಿದ್ದರೂ ಈ ಮಸೂದೆಯಲ್ಲಿ ಕೇವಲ ಹತ್ತು ವರುಷ ಅವರ ಮತಾಧಿಕಾರವನ್ನು ಕಸಿದುಕೊಳ್ಳಲಾಗಿದೆ ಎಂದು ಲಿಯಾಕತರು ಮಸೂದೆಯ ಮೇಲೆ ಮಾತಾಡುವಾಗ ಹೇಳಿದರು. ನಿಜವಾಗಿ ವಿಚಾರ ಮಾಡಿದರೆ ಆ ಬಗೆಯ ತೀಕ್ಷ್ಣವಾದ ಉಪಾಯಗಳನ್ನು ಕೈಕೊಳ್ಳದೆ ಇಂಥ ದುಷ್ಪ್ರವೃತ್ತಿಗಳು ನಿರ್ಮೂಲವಾಗಲಾರವೆಂಬುದು ಸುಸ್ಪಷ್ಟವಾಗಿದೆ.

ಕಾಂಗ್ರೆಸ್ಸಿಗರಿಗೆ ಆದೇಶ

ಹೊಸದಿಲ್ಲಿಯಲ್ಲಿ ಕಳೆದವಾರ ಕೂಡಿದ ಕಾಂಗ್ರೆಸ ಕಾರ್ಯಸಮಿತಿಯವರು ಕಾಂಗ್ರೆಸ್ಸಿಗರಿಗೆ ಮಹತ್ವದ ಆದೇಶ ಕೊಟ್ಟಿರುವರು. ಅಧಿಕಾರಲಾಲಸೆ, ಸ್ವಾರ್ಥ, ಧನದಾಸೆ, ಕಳ್ಳಪೇಟೆಯ ಮೋಹ ಮೊದಲಾದವುಗಳು ಕಾಂಗ್ರೆಸ್ಸಿಗರಲ್ಲಿ ಮನೆ ಮಾಡಿದರೆ ಕಾಂಗ್ರೆಸ್ಸಿನ ಧವಳ ಕೀರ್ತಿಗೆ ಕಲಂಕ ಹತ್ತುವದಿಷ್ಟೇ ಅಲ್ಲ. ನೂರಾರು ವರುಷಗಳ ಪರಿಶ್ರಮದಿಂದ ಪಡೆದ ಸ್ವರಾಜ್ಯವು ಸುರಾಜ್ಯವಾಗಿ ಜನತೆಯ ಮನ್ನಣೆಗೆ ಪಾತ್ರವಾಗಲಾರದು. ಕಾಂಗ್ರೆಸ್ಸಿಗರು ಮಿತವ್ಯಯದಿಂದ ಜೀವನ ಸಾಗಿಸಿ, ಉತ್ಪಾದನೆಯನ್ನು ಹೆಚ್ಚಿಸಿ ಅದರ ಯೋಗ್ಯ ವಿತರಣವಾಗುವಂತೆ ನೋಡಿಕೊಳ್ಳಬೇಕೆಂದು ಜಯಪುರ ಕಾಂಗ್ರೆಸ್ಸಿನ ಗೊತ್ತುವಳಿಯಿದೆ. ಇದು ಸಾಧ್ಯವಾಗಬೇಕಾದರೆ ಏನು ಮಾಡಬೇಕೆಂದು ಕಾರ್ಯಸಮಿತಿಯು ಹಲವು ಸೂಚನೆಗಳನ್ನು ಮಾಡಿದೆ. ಇಂದು ಕಾಂಗ್ರೆಸ್ಸಿನಲ್ಲಿ ಗುಂಪು ಪಂಗಡಗಳಾಗಿರುವುದರಿಂದ ಜನತೆಯ ಮೇಲೆ ಮೊದಲಿದ್ದ ಪ್ರಭಾವವು ಕಡಿಮೆಯಾಗುತ್ತಿದೆ. ಅಧಿಕಾರದ ದುರಾಸೆಗೆ ಅನೇಕ ಕಾಂಗ್ರೆಸ್ಸಿಗರು ಬಿದ್ದುದರಿಂದ ನ್ಯಾಯಾನ್ಯಾಯದತ್ತ ಅವರು ಗಮನಿಸದಂತಹ ಪರಿಸ್ಥಿತಿಯು ಪ್ರಾಪ್ತವಾಗಿದೆ. ಅಲ್ಲದೆ ಮಂತ್ರಿಗಳು ಮತ್ತು ಕಾಂಗ್ರೆಸ್ ವರಿಷ್ಠರು ಸಕಾಲದಲ್ಲಿಯೆ ಯೋಗ್ಯ ಕ್ರಮ ತೆಗೆದುಕೊಂಡು ಅನ್ಯಾಯದ ಪರಿಮಾರ್ಜನೆ ಮಾಡುವದಿಲ್ಲಾದ್ದರಿಂದ ಈ ಪಕ್ಷ ಪಂಗಡಗಳ ಕುಣಿದಾಟ ಹೆಚ್ಚುತ್ತಿದೆ. ಕಾಂಗ್ರೆಸ್ಸ ಕಾರ್ಯ ಸಮಿತಿಯವರು ಸಾಮಾನ್ಯ ಕಾಂಗ್ರೆಸಿಗರಿಗೆ ಆದೇಶ ಕೊಡುವಾಗ ಈ ವಿಷಯವನ್ನು ವಿಚಾರಿಸುವದು ಅವಶ್ಯವೆಂದು ನಮ್ಮ ಅಭಿಪ್ರಾಯ. ಕಾಂಗ್ರೆಸ್ಸಿನಲ್ಲಿ ಉಂಟಾದ ಶೈಥಿಲ್ಯವನ್ನು ಹೋಗಲಾಡಿಸಿ ಕಾಂಗ್ರೆಸ್ಸಿಗರೆಲ್ಲ ಕಾರ್ಯಕ್ಷಮರಾಗುವಂತೆ ಮಾಡಬೇಕಾದರೆ ಕಾಂಗ್ರೆಸ್ ವರಿಷ್ಠರೂ ಅಧಿಕಾರಸೂತ್ರ ವಹಿಸಿದ ಕಾಂಗ್ರೆಸ ಹಿರಿಯರೂ ಇನ್ನಷ್ಟು ದಕ್ಷತೆಯಿಂದ ಕಾಂಗ್ರೆಸ್ಸಿಗರಲ್ಲಿಯ ಅಧಿಕಾರಲಾಲಸೆ; ಸ್ವಾರ್ಥ ಮೊದಲಾದವುಗಳು ಕಡಿಮೆಯಾಗುವಂತೆ ನೋಡಿಕೊಳ್ಳಬೇಕು.

ಜಾತೀಯ ಭಾವನೆ

ಸರಕಾರವು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಒಂದು ಜಾತೀಯ ಸಂಸ್ಥೆಯೆಂದು ಬಹಿಷ್ಕರಿಸಿ ಸಾವಿರಾರು ಜನರನ್ನು ಜೇಲಿಗೆ ಕಳಿಸಿತು. ಇದರಿಂದ ತೃಪ್ತಿಪಟ್ಟುಕೊಂಡಿರುವ ಸರಕಾರಕ್ಕೂ ಸಮಾಜಸೇವಕರಿಗೂ ನಾನು ಎಚ್ಚರಿಕೆ ಕೊಡುತ್ತೇನೆ. ಕಾಂಗ್ರೆಸ್ಸಿಗೆ ಸ್ವಾನುಭವದಿಂದ ತಿಳಿದಿರಲೇಬೇಕಾಗಿರುವಂತೆ ಬಹಿಷ್ಕಾರ ಮತ್ತು ಬಹುಸಂಖ್ಯ ಪ್ರಜಾಬಂಧನಗಳು ಬಹಿಷ್ಕೃತ ಚಟುವಟಿಕೆಗಳು ಗುಪ್ತವಾಗಿ ನಡೆಯುವಂತೆ ಎಸಗುವುವು. ಅಲ್ಲದೆ, ಸಾವಿರಗಟ್ಟಲೆ ಸ್ತ್ರೀಪುರುಷರನ್ನು (ಅವರಲ್ಲಿ ಬಹಳ ಜನ ಬರೀ ಹುಡುಗ ಹುಡುಗಿಯರು) ಜೇಲಿಗೆ ಕಳಿಸುವುದು ಮತ್ತು ಅವರ ಮೇಲೆ ಲಾಠಿ ಪ್ರಹಾರ ಮುಂತಾದವನ್ನು ಮಾಡುವುದರಿಂದ ಮೂಲಕಾರಣ ಜನರಿಗೆ ಮರೆತು ಹೋಗಿ ಅವರು ಸ್ಪಷ್ಟ ಪರಿಣಾಮಗಳಿನಿಸುವ ಅಪರಾಧಿಗಳ ಮತ್ತು ಅವರ ಕುಟುಂಬಗಳಿಗಾಗುವ ಕಷ್ಟನಷ್ಟ, ನೋವು ನುರಿಗಳನ್ನು ಮಾತ್ರ ಕಾಣುವಂತಾಗುವದು. ತಿಳಿಯದೆಯೇ ಅವರು ಶಾಸನಬದ್ಧ ರಾಜ್ಯಭಾರದ ಹೊಣೆಹೊತ್ತವರನ್ನು ಆಗದವರೆಂದೂ ಅವರ ಶಾಸನಕ್ಕೆ ಬಲಿಯಾದವರನ್ನು ಗೆಳೆಯರೆಂದೂ ತಿಳಿಯುವರು. ಹಿಂದೆ ಇದರಿಂದ ಕಾಂಗ್ರೆಸ್ಸಿಗೆ ಲಾಭವಾಯಿತು ಮತ್ತು ಇಂದು ಅದೇ ಪ್ರಕಾರ ರಾ. ಸ್ವ. ಸೇ. ಸಂಘ ಮತ್ತು ಇತರ ಜಾತೀಯ ಸಂಸ್ಥೆಗಳಿಗೂ ಲಾಭವಾಗಬಹುದು. ದಮನವು ಹಿಂಸಾಧೃತವಾದ ಇತರ ಕ್ರಮಗಳಂತೆ ನ್ಯೂಟನ್ನನ ತೃತೀಯ ನಿಸರ್ಗ ನಿಯಮವನ್ನು ಅನುಸರಿಸುತ್ತದೆ. ಒಂದು ಅವಯವವನ್ನು ನೀವು ಎಷ್ಟೆಷ್ಟು ಗಟ್ಟಿಯಾಗಿ ನೆಲಕ್ಕೆ ಬಡಿಯುತ್ತೀರೋ ಅದು ಅಷ್ಟಷ್ಟು ಹೆಚ್ಚು ಗಟ್ಟಿಯಾಗಿ ಬಂದು ನಿಮಗೆ ಗಾಯಗೊಳಿಸುತ್ತದೆ. ಸದ್ಯದ ಪ್ರಕರಣದಲ್ಲಿ ನಾವು ತೊಡೆದು ಹಾಕಬೇಕೆಂದಿರುವ ಜಾತೀಯ ಮನೋಭಾವವೇ ವೃದ್ಧಿಹೊಂದಿ ನಮಗೆ ಹಾನಿಯನ್ನು ಒದವಿಸಬಹುದಾಗಿದೆ.

ಭಾರತದಲ್ಲಿ ಹೀಗಾಗುವ ಸಂಭವ ಬಹಳ ಹೆಚ್ಚು. ನಿರಾಶ್ರಿತರೆಲ್ಲ ಇನ್ನೂ ಕ್ರುದ್ಧರೂ ಜಾತೀಯ ಮನೋಭಾವವುಳ್ಳವರೂ ಆಗಿದ್ದಾರೆ. ಹಿಂದುಮಹಾಸಭೆಯಂತೂ ನಿರ್ದಿಷ್ಟವಾಗಿ ಹಾಗೆಯೇ ಇದೆ. ಶೀಖರಲ್ಲಿ ಬಹು ಜನರು ಅಂಥವರಿದ್ದಾರೆ: ಪ್ರಜ್ವಲ ಜಾತೀಯ ಭಾವನೆಯುಳ್ಳ ಕೆಲವರಾದರೂ ಉಪಾಧ್ಯಾಯರಿಲ್ಲದ ಶಾಲೆಯಿಲ್ಲ. ಈಯೆಲ್ಲಕ್ಕೂ ಕಿರೀಟಪ್ರಾಯವಾಗಿ ಕಾಂಗ್ರೆಸ್ ಹಿಂದು ಕೂಡ ಪ್ರಬಲವಾದ ಜಾತೀಯ ಪೂರ್ವಗ್ರಹದಿಂದ ಸಂಪೂರ್ಣ ಮುಕ್ತನಿದ್ದಾನೆಂದು ಹೇಳಬರದು. ಹಿಂದು-ಮುಸಲ್ಮಾನ ಪ್ರಶ್ನೆಗಳ ವಿಷಯದಲ್ಲಿ ಹಿಂದುಮಹಾಸಭೆ ಮತ್ತು ರಾ. ಸ್ವ. ಸೇ. ಸಂಘಗಳಂತೆಯೇ ಭಾವಿಸುವ ಕಾಂಗ್ರೆಸ್ ಹಿಂದುಗಳಿಗೇನೂ ಕಡಿಮೆಯಿಲ್ಲ. ಮುಸಲ್ಮಾನರ ಹಿತವನ್ನು ಗಾಂಧಿಯವರು ಎತ್ತಿ ಹಿಡಿದದ್ದು 'ಅನವಶ್ಯಕವೂ ದುರ್ಬಲವೂ ಆದ ಪ್ರಸಾದನಧೋರಣ'ವೆಂದು ತಿಳಿಯುತ್ತಾರೆ; ಮತ್ತು ಅವರು ಹಿಂದಿ–ಹಿಂದುಸ್ತಾನಿ ಭಾಷೆ ಮತ್ತು ಲಿಪಿಗಳ ವಾದವಿವಾದಗಳಲ್ಲಿ ಈ ಭಾವನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾರೆ. ಜಾತೀಯತೆಯ ವಿಷಯದಲ್ಲಿ ಅನೇಕ ಜನ ಕಾಂಗ್ರೆಸ್ಸಿಗರಿಗಿಂತ ಸೋಶಲಿಸ್ಟರೇ ಬಹುಶಃ ಹೆಚ್ಚು ಬಲ್ಲವರೆಂದು ಹೇಳಬಹುದು. ಆದರೆ ಆ ಎರಡು ಪಕ್ಷದವರೂ ಒಟ್ಟಿಗೆ ಕೆಲಸ ಮಾಡಬೇಕಾಗಿರುವ ಈ ಕಾಲದಲ್ಲಿ ಅಧಿಕಾರಸ್ಪರ್ಧೆ ಅವೆರಡನ್ನು ಎದುರುಬದರಾಗಿ ನಿಲ್ಲಿಸಿದೆ. ಇದರ ಫಲವಾಗಿ ಜಾತೀಯತಾಪೂರ್ವಗ್ರಹವಿಲ್ಲದ ಕಾಂಗ್ರೆಸ್ಸಿಗರಿಗೆ ಸ್ವಂತ ಸಂಸ್ಥೆಯಲ್ಲಿಯೇ ಕೆಲವುಟ್ಟಿಗೆ ಶ್ರಮಸಾಧ್ಯವಾದ ಕಾರ್ಯವನ್ನು ಮಾಡಬೇಕಾಗಿ ಬಂದಿದೆ. ಕಾಂಗ್ರೆಸ್ಸಿನಲ್ಲಿ ಉಗ್ರ ಪರೀಕ್ಷಣ ನಡೆದಲ್ಲಿ ಜಾತೀಯ ಭಾವನೆಯಿಲ್ಲದ ಕಾಂಗ್ರೆಸ್ಸಿಗರು ಅಲ್ಪಸಂಖ್ಯರೆಂಬುದು ಕಂಡು ಬಂದರೆ ನನಗೇನೂ ಆಶ್ಚರ್ಯವೆನಿಸದು.

ರಾಷ್ಟ್ರದ ಬುದ್ಧಿಭಾವನೆಗಳ ಶುದ್ಧೀಕರಣ ಮಾಡುವ ಮುಂತಾದ ಈ ಕೆಲಸಕ್ಕೆ ಬಲವಾದ ರಚನಾತ್ಮಕ ಪ್ರಯತ್ನ ಅಗತ್ಯ; ಅಲ್ಲದೆ, ರಾಜಕೀಯ ಪಕ್ಷಗಳನ್ನು- ಅದರಲ್ಲೂ ವಿಶೇಷತಃ ಕಾಂಗ್ರೆಸ್ ಮತ್ತು ಸೋಶಲಿಸ್ಟ ಪಕ್ಷಗಳನ್ನು ಸಂಘಟಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮತ್ತು ದೇಶಭಕ್ತಿಭರವಾದ ಉಪಕ್ರಮ ಬೇಕು. ಜಾತೀಯ ಸಂಘಟನೆಗಳನ್ನು ಬರೀ ಶಾಸನಗದಾದಂಡದಿಂದ ದಮನ ಮಾಡುವುದರಿಂದ ಬಹಳ ಲಾಭವಾಗದು. ಏಕೆಂದರೆ, ಸ್ವತಃ ಕಾಂಗ್ರೆಸ್ಸೇ ಜಾತೀಯ ಭಾವನೆಯನ್ನು ಬೆಳೆಸಿಕೊಂಡು ಬಿಟ್ಟಿತೆಂದರೆ ಹಿಂದು ಮಹಾಸಭೆ ಮತ್ತು ರಾ. ಸ್ವ. ಸೇ. ಸಂಘಗಳು ತಮ್ಮ ಕಾರ್ಯವನ್ನು ನಡೆಸಲು ಅಕ್ಷಮವೆನಿಸಿದರೂ ಅದರಿಂದ ಯಾವ ಲಾಭವೂ ಸಿಗದು.

ಇದರಲ್ಲಿ ಮುಸಲ್ಮಾನರು, ಕ್ರೈಸ್ತರು, ಪಾರಸಿಕರು, ಶೀಖರು ಮತ್ತು ಇತರ ಹಿಂದು ಜಾತಿಯವರು ಕೂಡ ಮಾಡಬೇಕಾದ ಒಂದು ಕರ್ತವ್ಯವಿದೆ. ಅವರು ಸರ್ವಸಾಧಾರಣವಾದ ಸಹವಾಸವನ್ನು ಬೆಳೆಸುವುದರಲ್ಲಿ ಸಹಕರಿಸಬೇಕು. ರಾಷ್ಟ್ರದಲ್ಲಿ ಜಾತ್ಯತೀತ ಭಾವನೆಯನ್ನು ರೂಢಿಗೊಳಿಸಲು ಕಾಂಗ್ರೆಸ್, ಸೋಶಲಿಸ್ಟ ಮತ್ತು ರಚನಾತ್ಮಕ ಕಾರ್ಯಕರ್ತರು ಅಥವಾ ಯಾರೇ ಆಗಲಿ ಕಡೆಯ ಪಕ್ಷ ತಾವು ಮಾಡಲೇಬೇಕಾದ ಕೆಲಸದಲ್ಲಾದರೂ ಒಟ್ಟಾಗಿ ಕೆಲಸ ಮಾಡಬಹುದು. ಯಾವ ರಾಷ್ಟ್ರೀಯನೇ ಆಗಲಿ, ಇದು ಸುಲಭ ಮತ್ತು ರಾ. ಸ್ವ. ಸೇ. ಸಂಘ ಅಥವಾ ಉದಾಹರಣೆಗಾಗಿ ಹಿಂದು ಮಹಾಸಭೆ, ಮುಸ್ಲಿಂಲೀಗ್, ಮುಂತಾದವುಗಳನ್ನು ಜಯಪ್ರದವಾಗಿ ಬಹುಕಾಲ ದಮನ ಮಾಡಿಬಿಟ್ಟರೆ ಎಲ್ಲ ಸರಿಯಾಗುತ್ತದೆ ಎಂದು ತಿಳಿಯದಿರಲಿ. ಯಾವುದಕ್ಕಾಗಿ ಅನೇಕ ಸಲ ತಮ್ಮ ಜೀವನವನ್ನು ಬಲಿಗೊಡಲು ಗಾಂಧಿಯವರನ್ನು ಒತ್ತಾಯಿಸಿತೋ ಮತ್ತು ಕಟ್ಟಕಡೆಯಲ್ಲಿ ಅವರನ್ನು ಬುದ್ಧಿಪೂರ್ವಕವಾದ ಕೊಲೆಗೆ ಗುರಿಮಾಡಿತೋ ಆ ಹಿತಸಾಧನೆಯು ಲಘುವಲ್ಲವೆಂಬುದನ್ನು ನಾವು ನೆನಪಿಸಲ್ಲಿಡೋಣ. ಆ ಕೊಲೆಯು ದುಷ್ಟನೊಬ್ಬನ ಕೃತ್ಯವೆಂದು ಯಾರೂ ಸಮಾಧಾನ ಪಟ್ಟುಕೊಂಡು ಕುಳಿತುಕೊಳ್ಳದಿರಲಿ. ಎಲ್ಲ ಬಗೆಯ ರಾಜಕೀಯ ವರ್ಗಗಳ ಹಿಂದುಗಳಲ್ಲಿಯ ದೊಡ್ಡ ವಿಭಾಗದವರೂ ಬೆಳೆಸಿಕೊಂಡು ಬಂದ ಈ ಬುದ್ಧಿಗೆ ಅವನೊಬ್ಬ ಕೇವಲ ಸಾಧನ, ಮಾನವಯಂತ್ರ ಎನಿಸಿದನು.

ಮುಂಬಯಿ
೫-೧-೪೯ ಕಿ. ಘ. ಮಶ್ರುವಾಲಾ

ಭ್ರಷ್ಟಾಚಾರದ ತಾಂಡವ

ಬಿಹಾರದಲ್ಲಿಯ ಗ್ರಾಮೋದ್ಯೋಗ ಸಂಗ್ರಹಾಲಯದ ಸಂಘಟಕರೊಬ್ಬರು ಹೀಗೆ ಬರೆಯುತ್ತಾರೆ:

"ಕೆಳಗೆ ಬರೆದ ಅಡಚಣಿಗಳಿಂದ ಪಾರಾಗಲು ದಯವಿಟ್ಟು ನನಗೆ ದಾರಿದೋರಿರಿ.

"ಗಾಂಧೀಜಿಯ ಪ್ರಯತ್ನದಿಂದ ಉಪ್ಪಿನ ಮೇಲಿನ ಕರ ತೆಗೆದುಹಾಕಲಾಗಿದೆ. ಆದರೆ ಉಪ್ಪಿನ ಸಂಗ್ರಹಕ್ಕಾಗಿ ೨೦ ರೂಪಾಯಿಗಳ ಲಾಯಸೆನ್ಸ ಫೀ ಕೊಡಬೇಕಾಗುತ್ತದೆ. ಆದರೆ ಈ ಫೀಯನ್ನು ಕೊಡಬೇಕಾದರೆ, ಮೊದಲು ನರೋಗನಿಗೆ ೨ ರೂಪಾಯಿ ಮತ್ತು ಟ್ರೇಜರಿ ಕಚೇರಿಯ ಚಪ್ರಾಸಿಗೆ ೧ ರೂಪಾಯಿ ಕೊಡಬೇಕಾಗುತ್ತದೆ. ಅನಂತರ ಕ್ರಮಬದ್ಧ ಪಾವತಿಯೊಡನೆ ಅರ್ಜಿಯನ್ನು ಕೊಡಬೇಕಾದರೆ ಶಿರಸ್ತೇದಾರನಿಗೆ ೫ ರಿಂದ ೭ ರೂಪಾಯಿ ಕೊಡಬೇಕಾಗುತ್ತದೆ. ಮೊದಲು ಇದು ೨ ರಿಂದ ೪ ರೂ. ವರೆಗಿದ್ದಿತು. ಆದರೆ ಈಗ ದರಗಳೆಲ್ಲ ಏರಿದ್ದರಿಂದ ಶಿರಸ್ತೇದಾರನೂ ತನ್ನ ಫೀಯನ್ನು ಇಮ್ಮಡಿಸಿದ್ದಾನೆ! ಈ ಫೀ ಕೊಡುವದನ್ನು ತಪ್ಪಿಸುವ ಬೇರೆ ಮಾರ್ಗಗಳಾವುವೂ ಇರುವದಿಲ್ಲ. ಏಕೆಂದರೆ ಅರ್ಜಿಯ ವಿಚಾರವಾಗಬೇಕಾದರೆ ತಿಂಗಳಗಟ್ಟಲೆ ಕಚೇರಿಗೆ ಎಡತಾಕಬೇಕಾಗುತ್ತದೆ. ಶಿರಸ್ತೇದಾರನಿಗೆ ಯಾವಾಗಲೂ ಬಹಳ ಕೆಲಸ ಇರುತ್ತದೆ.

"ಚಿಮಣಿಎಣ್ಣೆ, ಬಟ್ಟೆ, ಸಕ್ಕರೆ ಮೊದಲಾದವುಗಳ ಸಂಬಂಧದಲ್ಲಿಯೂ ಇದೇ ಹಾಡು. ಒಳ್ಳೆ ನಯವಾದ ಬಟ್ಟೆ ಕಳ್ಳಪೇಟಿಗೆ ಸಾಗಿಸಲ್ಪಟ್ಟಿದ್ದು ಕಳ್ಳಪೇಟೆಯ ದರಕ್ಕೇ ಮಾರಲ್ಪಡುತ್ತವೆ. ಚಿಮಣಿಎಣ್ಣೆಗೆ ಬಾಟ್ಲಿಗೆ (?) ೧೬–೧೨ ಆಣೆ ಕೊಡಬೇಕಾಗುತ್ತದೆ. ಉಪ್ಪಿನ ಧಾರಣೆ ೩ ಪೈ ಇದ್ದರೂ ೧೮ ಪೈಗೆ ಮಾರಲಾಗುತ್ತಿದೆ.

"ನಿಯಂತ್ರಣ ನಿಯಮಗಳಿಗನುಸಾರವಾಗಿ ನನ್ನ ಅಂಗಡಿಯಲ್ಲಿ ಚಿಮಣಿಎಣ್ಣೆ ಮತ್ತು ಉಪ್ಪು ಮಾರಲಿಕ್ಕೆ ಇಡಬೇಕೆಂದು ನನ್ನ ಬಯಕೆ. ಆದರೆ ಅದಕ್ಕಾಗಿ ಕೊಡಬೇಕಾದ ಲಾಯಸೆನ್ಸ ಫೀಯುಷ್ಟು ಹಣ ಕೂಡ ನನ್ನಲ್ಲಿ ಇಲ್ಲ, ಉಳಿದ ಮಾಮೂಲಿಯನ್ನು ಕೊಡುವ ಮಾತಂತೂ ದೂರವೇ ಉಳಿಯಿತು."

ಈ ಲೇಖಕನು ಚಂಪಾರಣ್ಯದ ಒಂದು ಸಣ್ಣ ಹಳ್ಳಿಯವನು. ಆದರೆ ಅವನು ಬರೆದ ನೀತಿಭ್ರಷ್ಟತೆ, ಲಂಚಗುಳಿತನ ಇಡಿ ಹಿಂದುಸ್ಥಾನದಲ್ಲಿ ತಾಂಡವವಾಡುತ್ತಿದೆ. ಹೊಸದಿಲ್ಲಿ ಮುಂಬಯಿ ಕಲಕತ್ತೆಗಳೇನು ಇವಕ್ಕೆ ಹೊರತಾಗಿಲ್ಲ. ನನ್ನ ವಕೀಲಿಯ ಪ್ರಾರಂಭದ ದಿನದಲ್ಲಿಯ ಒಂದು ಸಂದರ್ಭ ಇದೀಗ ನನ್ನ ಸ್ಮರಣೆಯಲ್ಲಿ ಬರುತ್ತದೆ. ಜಜ್ಜ ಕೋರ್ಟಿನಲ್ಲಿ ಮಹತ್ವದ ಡಿಕ್ರಿಯ ಅಮಲುಬಜಾವಣಿಯಾಗಬೇಕಾಗಿದ್ದಿತು. ಅದಕ್ಕಾಗಿ ನಾನು ಅರ್ಜಿಯನ್ನು ಹಾಕಿದ್ದೆ. ಆದರೆ ಜಜ್ಜ ಕೋರ್ಟಿನ ಕಾರಕೂನನಿಗೆ ಸಲ್ಲಬೇಕಾದ ಮಾಮೂಲಿಯನ್ನು ನಾನು ಕೊಡದ್ದರಿಂದ ತಿಂಗಳಗಟ್ಟಲೆ ಅದರ ಅಮಲುಬಜಾವಣೆ ಹಾಗೆಯೇ ಮುಂದೆ ಬೀಳುತ್ತ ನಡೆಯಿತು. ಜಜ್ಜ ಸಾಹೇಬರನ್ನು ಕಂಡರೂ ಪ್ರಯೋಜನವಾಗಲಿಲ್ಲ. ಕೊನೆಯಲ್ಲಿ ನಾನು ಸೋಲನ್ನು ಒಪ್ಪಿಕೊಂಡು ಆ ಕಾರಕೂನನನ್ನು ಸಮಾಧಾನಪಡಿಸಬೇಕಾಯಿತು. ಆಗ ನನ್ನ ಕಣ್ಣಲ್ಲಿ ನೀರು ಹರಿಯುತ್ತಿದ್ದಿತು. ಅಂದಿನಿಂದ ಇಂಥ ವಿಷಯಗಳನ್ನೆಲ್ಲ ನಾನು ನನ್ನ ಕಾರಕೂನ, ಪಕ್ಷಕಾರ ಮತ್ತು ಸಂಬಂಧಿಸಿದ ಇತರ ಜನರಿಗೆ ಬಿಟ್ಟು ಗೊಡವೆ ಹತ್ತಿದೆ.

ಆದರೆ ಇದಕ್ಕೆ ಉಪಾಯವೇನು? ಕೆಳವರ್ಗದ ನವಕರರ ಮೇಲೆ ಹೆಚ್ಚು ಲಕ್ಷ್ಯವಿಡಬೇಕೆಂದು ಈ ಲೇಖಕನು ಸೂಚಿಸುತ್ತಾನೆ. ಆದರೆ ಅದು ನಿರರ್ಥಕವಾಗುವದೆಂದು ನನ್ನ ಅಭಿಪ್ರಾಯ. ಈ ಗುಪ್ತಾಧಿಕಾರಿಗಳು ಬೇರೆ ಶಾಖೆಗಳಲ್ಲಿರುವ ಅಧಿಕಾರಿ ಬಾಂಧವರಿಗಿಂತ ಹೆಚ್ಚಿಗೆ ಪ್ರಾಮಾಣಿಕ ಇರಲಾರರು. ಜನರೇ ಇಂಥ ಸಂದರ್ಭಗಳಲ್ಲಿ ಮುಂದಾಗಿ ಲಂಚಗುಳಿತನವನ್ನು ನಿಲ್ಲಿಸಲು ಸಂಘಟಿತ ಪ್ರಯತ್ನಗಳನ್ನು ಮಾಡತಕ್ಕದ್ದು. ದೊಡ್ಡ ಬೆಲೆಯ ಲಂಚವನ್ನು ಕೊಡತಕ್ಕದ್ದಲ್ಲ ಎಂಬುದಾಗಿ ಅವರು ಪ್ರತಿಜ್ಞೆ ತೆಗೆದುಕೊಳ್ಳತಕ್ಕದ್ದು. ಎಂಥ ಪ್ರಸಂಗಗಳಲ್ಲಿಯೂ ಲಂಚ ಕೊಡತಕ್ಕದ್ದಲ್ಲ ಎಂದು ಅವರು ಪಟ್ಟುಕೊಳ್ಳಬೇಕು. ಅಧಿಕಾರಿಗೆ ಒಂದು ಪೈ ಕೂಡ ಕೊಡತಕ್ಕದ್ದಲ್ಲ ಎಂಬುದಾಗಿ ಜನತೆಯ ಮನವೊಲಿಸಲು ಸ್ವಯಂಸೇವಕರ ಸರ್ಪಗಾವಲನ್ನು ಇಡತಕ್ಕದ್ದು. ಇದರಲ್ಲಿ ಯಾವ ಯಾವ ಬಗೆಯ ಅಡ್ಡಿ ಅಡಚಣಿಗಳು ಬರುತಿವೆ ಎಂಬುದನ್ನು ತಮಗೆ ತಿಳಿಸಬೇಕೆಂದೂ ಸ್ವಯಂಸೇವಕರು ಜನತೆಗೆ ಹೇಳಬೇಕು. ಯಾವದೇ ಸರಕಾರಿ ಅಧಿಕಾರಿಗೆ ಇನಾಮು ಕೊಡತಕ್ಕದ್ದಲ್ಲ ಎಂಬುದಾಗಿ ಅಲ್ಲಲ್ಲಿ ಫಲಿಗೆಗಳನ್ನು ಹಾಕಿ. ಸರಕಾರದವರು ಈ ವಿಷಯದಲ್ಲಿ ಸಹಾಯ ಮಾಡಬಲ್ಲರು. ಕಚೇರಿಯ ಪ್ರವೇಶದ್ವಾರದಲ್ಲಿಯೇ ಸುದ್ದಿ ಮತ್ತು ದೂರುಗಳ ವಿಚಾರಣಾಕಚೇರಿಯೊಂದು ಇರತಕ್ಕದ್ದು; ಇಂಥದೊಂದು ಕೆಲಸಕ್ಕಾಗಿ ಇಂಥ ಅಧಿಕಾರಿಯ ಕಡೆಗೆ ಹೋಗಿರೆಂದು ಸಾರ್ವಜನಿಕರಿಗೆ ಮಾರ್ಗದರ್ಶನ ಮಾಡಲು ಮತ್ತು ದೂರುಗಳ ಬಗ್ಗೆ ಇಲ್ಲವೆ ಛಲನೆಯ ಬಗ್ಗೆ ಕೂಡಲೆ ವಿಚಾರಣೆ ನಡೆಸಲು ಉಚ್ಚಾಧಿಕಾರಿಯೊಬ್ಬನು ಆ ಕಚೇರಿಯಲ್ಲಿ ಇರತಕ್ಕದ್ದು. ಈ ಪದ್ಧತಿಯು ಯಶಸ್ವಿಯಾಗಲಿಕ್ಕಿಲ್ಲ. ಏಕೆಂದರೆ ಜನತೆಯ ನೀತಿಮತ್ತೆಯನ್ನು ಹೆಚ್ಚಾಗಿ ನಾಗರಿಕ ಕರ್ತವ್ಯ ಭಾವನೆಯನ್ನು ಅವರಲ್ಲಿ ಜಾಗೃತ ಗೊಳಿಸುವದೇ ಅತ್ಯವಶ್ಯವಾದ ಉಪಾಯವು. ನೀತಿಯು ಕೆಳಪದಿಯಲ್ಲಿ ನಡೆದ ಅಡಳಿತಕ್ಕಿಂತ ಬೇರೆ ಯಾವದೇ ಬಗೆಯ ಆಡಳಿತವೂ ಅಷ್ಟೊಂದು ಪರಿಣಾಮಕಾರಿಯಾಗದು.

ಮುಂಬಯಿ ಕಿ. ಘ. ಮಶ್ರುವಾಲಾ
೨೫-೧೨-೪೮

ಅನವಶ್ಯಕವಾದುದನ್ನೆಲ್ಲ ತೊರೆಯಬೇಕು

ಸ್ವಾತಂತ್ರ್ಯ ಸಂಗ್ರಾಮದ ೩೦ ವರ್ಷಗಳ ಕಾಲದುದ್ದಕ್ಕೂ ನಮ್ಮ ನೇತಾರರಾದ ಮಹಾತ್ಮಾ ಗಾಂಧಿಯವರು ಮೂರು ಮಹತ್ವದ ಮಾತುಗಳ ಬಗ್ಗೆ ಅತ್ಯಂತ ನಿಷ್ಠೆಯಿಂದ ಮತ್ತೆ ಮತ್ತೆ ಬೋಧಿಸುತ್ತಿದ್ದರು. ಸತ್ಯ, ಅಹಿಂಸೆ, ಅನಾಡಂಬರ ಜೀವನ ಇವೇ ಅವು. ನಮ್ಮ ಉಡುಪಿನಲ್ಲಿಯೂ ಇನ್ನುಳಿದ ಕೆಲವು ನೀಗರೆಯ ಮಾತುಗಳಲ್ಲಿಯೂ ಈ ಅನಾಡಂಬರತೆಯನ್ನು ನಾವು ಕೆಲಕಾಲ ಅಳವಡಿಸಿಯೂ ತೋರಿಸಿದೆವು. ಆದರೆ ಸರ್ವಸಾಮಾನ್ಯವಾಗಿ ಮಹಾತ್ಮರು ಈ ಬಗ್ಗೆ ಆಡಿದ್ದರ ಮತ್ತು ಬರೆದಿದ್ದರ ಬಗ್ಗೆ ತೋರಿಕೆಯ ನಿಷ್ಠೆಯನ್ನೂ ಜೊಳ್ಳು ಸಹಾನುಭೂತಿಯನ್ನೂ ಮಾತ್ರ ವ್ಯಕ್ತಪಡಿಸಿದೆವೆನ್ನಬೇಕು. ಇದರ ಫಲವಾಗಿ ಪೀಡಾಗ್ರಸ್ತ ಲೋಕಕ್ಕೆ ನಾವು ಹೊಸ ಸಂದೇಶದ ದಾರಿ ತೋರುವ ದೀವಟಿಗರಾಗದೆ, ಆಡಂಬರದ ಬೂಟಾಟಿಕೆಗೆ ಮನಸೋತು ವಿಲಾಸಮಗ್ನರಾಗಿ ಹೋಗಿದ್ದೇವೆ.

ರಾಮರಾಜ್ಯದ ನಮ್ಮ ಸವಿಗನಸೇನು ಭಾರತದ ಇಂದಿನ ಇರವಿನ ಪರಿಯೇನು? ಜೀವನಾವಶ್ಯಕ ಪದಾರ್ಥಗಳೇ ಭಾರತದಲ್ಲಿ ದುರ್ಮಿಳವಾಗಿ ಹೋಗಿವೆಂದು ದೇಶದಾದ್ಯಂತ ಡಂಗುರ ಸಾರಲಾಗುತ್ತಿದೆ. ನಾವು ಬದುಕಲು ಅನ್ನಕ್ಕಾಗಿ ಹೊರ ನಾಡಿನ ಬಾಗಿಲಿಗೆ ಬಿಕ್ಕೆ ಬೇಡಬೇಕು! ಭಾರತವು ತನ್ನ ಮಾನರಕ್ಷಣೆಗಾಗಿಯೂ ಪರರ ವಸ್ತ್ರಕ್ಕೆ ಕೈಚಾಚಬೇಕು! ಇಷ್ಟರಲ್ಲಿ ಇನ್ನೊಂದು ಜಾಗತಿಕ ಮಹಾಯುದ್ಧವೇನಾದರೂ ಆಗಿಬಿಟ್ಟರೆ ಈ ನಮ್ಮ ಅಧೋಗತಿಗೆ ಮಿತಿಮೇರೆಗಳೇ ಇಲ್ಲದಾಗುವವು. ನಾವು ಸ್ವಾತಂತ್ರ್ಯವನ್ನೇನೋ ಪಡೆದೆವು. ಆದರೇನು? ಜೀವನಾವಶ್ಯಕ ವಸ್ತುಗಳಾದ ಅನ್ನ ವಸ್ತ್ರಾದಿಗಳನ್ನು ಒದಗಿಸಿಕೊಳ್ಳುವ ತ್ರಾಣವಿಲ್ಲದಾಗಿ ಪರಾವಲಂಬಿಗಳಾಗಿರುವ ನಾಚಿಗೆಗೇಡು ಪರಿಸ್ಥಿತಿಯ ಬಗ್ಗೆ ಗಂಭೀರವಾಗಿ ಆಲೋಚಿಸಿದರೆ ಇದಕ್ಕೆ ಅನೇಕ ಕಾರಣಗಳುಂಟೆಂದು ತಟ್ಟನೆ ಹೊಳೆಯುವದು. ಎಲ್ಲಕ್ಕೂ ದೊಟ್ಟ ಮೊದಲು ಒಡೆದು ಕಾಣುವದು ಅತಿಪ್ರಸರಣ. ಉತ್ಪಾದನ ತಗ್ಗಿ, ಬಳಕೆ ಮಾತ್ರ ಎಲ್ಲೆ ಮೀರಿ ಹೆಚ್ಚಿದ್ದರಿಂದಲೇ ಬೆಲೆಗಳು ಸಿಕ್ಕಾಬಟ್ಟೆ ಏರಿ ಈ ಅತಿಪ್ರಸರಣದ ಅವತಾರವಾಯಿತು. ಇದನ್ನು ಇರವ ಎಲ್ಲರೂ ಬಲ್ಲರು. ಅತಿಪ್ರಸರಣವೆಂದರೇನು? ಮಿತಿ ಮೀರಿದ ಚಲಾವಣೆ. ಹಣವು ಎಲ್ಲರಲ್ಲಿಯೂ ಸಮಾನವಾಗಿ ಹಂಚಿಹೋಗಿಲ್ಲ. ಅದು ಕೆಲವರಲ್ಲಿ ಮಾತ್ರ ಬಿಟ್ಟುಗೂಡಿ ಹೋಗಿದೆ. ಎಂದೇ ಹೆಚ್ಚು ಹಣವಿದ್ದವರು ತಮಗೆ ಬೇಕೆನಿಸಿದ್ದನ್ನೆಲ್ಲ ಬೇಡಿದ ಬೆಲೆ ಕೊಟ್ಟು ಕೊಳ್ಳುತ್ತ ಹೋಗಿದ್ದಾರೆ. ಮುಂಬಯಿ ಮತ್ತು ಇನ್ನಿತರ ಕಡೆಗಳಲ್ಲಿ ಈ ಬಗೆಯ ಜನರನ್ನೇ ಕಾಣಬಹುದಾಗಿದೆ. ಅವರಲ್ಲಿ ಇಂದಿಗೂ ಬೇಕಾದಷ್ಟು ವರ್ಷ ಸಾಲುವಷ್ಟು ಅನ್ನ ವಸ್ತ್ರದ ಸಂಗ್ರಹವಿದೆ. ಹೀಗಿದ್ದರೂ ಇನ್ನು ಕೆಲ ದಿನಗಳಲ್ಲಿ ಬೆಲೆಗಳು ಇನ್ನಷ್ಟು ಏರಬಹುದೆಂದೇನಾದರೂ ಅವರ ಕಿವಿಗೆ ಬಿದ್ದರೆ ಸಾಕು; ಮತ್ತಷ್ಟು ವಸ್ತುಗಳನ್ನು ಅವರು ಕೊಂಡು ಕೂಡಿಡಲು ಹಿಂಜರಿವುದಿಲ್ಲ. ಇಂಥವರು ಕಳ್ಳ ಸಂತೆಗಾರರನ್ನೂ ಲಾಭಬಡಕರನ್ನೂ ಪರಿಪುಷ್ಟಗೊಳಿಸುತ್ತಾರೆ. ತದ್ವಿರುದ್ಧವಾಗಿ ಇನ್ನೊಂದು ಜನರ ಪಂಗಡವಿದೆ. ಅವರ ಬಳಿ ಈಗಿದ್ದ ಬೆಲೆ ಕೊಟ್ಟು ದಿನದ ಕೂಳನ್ನು ಕೂಡ ಕೊಳ್ಳಲಾಗದಷ್ಟು ಅಲ್ಪಧನ ಅವರ ಕೈಯಲ್ಲಿ. ವಸ್ತುಗಳ ಉತ್ಪಾದನೆ ತಗ್ಗಿರಬಹುದು; ಮೊದಲಿಗಿಂತ ವಸ್ತುಗಳ ಬೇಡಿಕೆಯೂ ಬೆಳೆದಿರಬಹುದು. ಆದರೆ ಈ ಹುಟ್ಟುವಳಿ ಮತ್ತು ಬೇಡಿಕೆಗಳು ನಾವು ತಿಳಿದುಕೊಂಡಿರುವಷ್ಟೇನು ತಾಳತಪ್ಪಿನಿಂತಿಲ್ಲ. ಇದ್ದ ವಸ್ತುಗಳು ಜನರಿಗೆ ಸಾಕಷ್ಟಿಲ್ಲವೆಂದು ಆಭಾಸ ಹುಟ್ಟಿಸಲು ಕಾರಣರು ಬೊಕ್ಕಸದಲ್ಲಿ ಸಿಕ್ಕಾಬಟ್ಟೆ ಹೆಚ್ಚಿನ ಹಣವಿದ್ದ ಜನರೇ. ಈಗ ಇದರಲ್ಲಿ ಯಾವ ಸಂದೇಹವೂ ಉಳಿದಿಲ್ಲ.

ಇಂತಹರಲ್ಲಿ ಸರಕಾರದ ಹೆಸರನ್ನೇ ನೊದಲಿಗೆ ಎತ್ತಿಕೊಳ್ಳಬೇಕಾಗುವದು. ಯುದ್ಧಕಾಲದಲ್ಲಿ ಸಿಕ್ಕಂತೆ ಕಾಗದದ ಹಣ ಮುದ್ರಿಸಿ ಅಪರಿಮಿತ ಬೆಲೆಗೊಟ್ಟು ಅಪಾರ ಯುದ್ಧ ಸಾಮಗ್ರಿಗಳನ್ನು ಶೇಖರಿಸಿದರು. ಇದರ ಫಲವೇನಾಯ್ತು? ಸಂಗ್ರಹದ ಎಷ್ಟೋ ಭಾಗ ನಷ್ಟವಾಯ್ತು: ಇನ್ನೆಷ್ಟನ್ನೋ ಸರಕಾರವು ಮಾರಿದವರಿಗೇ ತೀರ ಕಡಿಮೆ ಬೆಲೆಗೆ ಮರಳಿ ಕೊಟ್ಟುಬಿಟ್ಟಿತು. ಈಗ ಕೂಡ ತುಸು ಹೆಚ್ಚು ಕಡಿಮೆ ಇದೇ ಕ್ರಮ ಸಾಗಿದ್ದರೂ ಸಾಗಿರಬಹುದು. ಸರಕಾರವು ನಾಣ್ಯ ಮುದ್ರಣದಲ್ಲಿ ಕೈ ಬಿಗಿ ಹಿಡಿವ ಲಕ್ಷಣ ಇನ್ನೂ ಕಾಣುತ್ತಿಲ್ಲ. ಪದಗೆಟ್ಟ ಹಣಕಾಸಿನ ಈ ದುರವಸ್ಥೆಯನ್ನು ಸರಕಾರವು ಮಾತ್ರ ನಿವಾರಿಸಬಲ್ಲದು. ಎಂದ ಮೇಲೆ ಸರಕಾರವು ಇದರ ಹೊಣೆ ಹೊರದಿದ್ದರೆ ಹೇಗೆ? ತಕ್ಕ ಪಂಚಿಕೆ ಮಾಡಿ ಹಳ್ಳವಾಗಿ ಹರಿದು ಹೊರಟ ಈ ನೋಟುಗಳನ್ನೆಲ್ಲ ಹೀರಿಕೊಳ್ಳಲೇಬೇಕು. ಇದಾಗದಿದ್ದರೆ ಬಂದು ಕಡೆಗೆ ಅತಿ ಶೋಷಣ ಇನ್ನೊಂದು ಕಡೆಗೆ ಉಪವಾಸ ಇವು ಕಟ್ಟಿಟ್ಟದ್ದೇ.

—೨೦ ನೆಯ ಪುಟಕ್ಕೆ

ಅ. ಭಾ. ಕಾಂ. ಕಾರ್ಯಸಮಿತಿಯ ಸಭೆ

ಅ. ಭಾ. ಕಾಂಗ್ರೆಸ ಕಾರ್ಯಸಮಿತಿಯು ಕಳೆದವಾರ ದಿಲ್ಲಿಯಲ್ಲಿ ತಾ. ೬, ೭, ೮ ಎರಡು ದಿನ ಕೂಡಿ ಕೆಲವು ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಿತು. ೫೦ ರ ಕುರಿತು ಕಾಂಗ್ರೆಸ [illegible] ಕಾರ್ಯವನ್ನು ಮಾಡುವ ಗೊತ್ತುವಳಿ ಸ್ವೀಕರಿಸಲ್ಪಟ್ಟಿದೆ ಕೆಳಗಿನ ಪಾರ್ಲಮೆಂಟರಿ ಬೋರ್ಡನ್ನು ರಚಿಸಿತು. (೧) ಡಾ. ಪಟ್ಟಾಭಿ ಸೀತಾರಾಮಯ್ಯ, (ಅಧ್ಯಕ್ಷರು) (೨) ಸರದಾರ ಪಟೇಲ (೩) ಮೌ. ಆಝಾದ (೪) ಶ್ರೀ. ನಿಜಲಿಂಗಪ್ಪ (೫) ಡಾ. ರಾಜೇಂದ್ರ ಪ್ರಸಾದ (೬) ಶ್ರೀ ಕಳಾ ವೆಂಕಟರಾವ (ಕಾರ್ಯದರ್ಶಿ) ಜಾನೇವರಿ ೨೬ ನೆಯ ದಿನವನ್ನು ಸರ್ವೋದಯ ದಿನವೆಂದು ಆಚರಿಸಲು ಸಮಿತಿಯು ನಿರ್ಧರಿಸಿತು.

ಎಲ್ಲ ಪ್ರಾಂತಗಳಲ್ಲಿ ಜಮೀನದಾರಿ ನಿರ್ಮೂಲನವನ್ನು ಕಾರ್ಯಕಾರಿ ಮಾಡತಕ್ಕದ್ದೆಂದೂ ಜಾನೆವರಿ ೩೦ ನೆಯ ದಿನವನ್ನು ಸ್ಮರಣದಿನವೆಂದು ಆಚರಿಸಬೇಕೆಂದೂ ನಿರ್ಧರಿಸಲಾಯಿತು. ಎಪ್ರಿಲ ೨೩-೨೪ಕ್ಕೆ ಸೇರುವ ಅ. ಭಾ. ಕಾ. ಸ. ಸಭೆಯನ್ನು ಗುಂತಕಲ್ಲನಲ್ಲಿ ಕೂಡಿಸಬೇಕೆಂದು ಗೊತ್ತಾಯಿತು.

ತಾ. ೧೦ ರಂದು ಆರ್ಥಿಕ ಕಾರ್ಯಕ್ರಮದ ಗೊತ್ತುವಳಿಯು ಸ್ವೀಕೃತವಾಯಿತು. ಅದರ ಅಭಿಪ್ರಾಯ ಹೀಗೆ: ಜಯಪುರ ಕಾಂಗ್ರೆಸ ಅಧಿವೇಶನದಲ್ಲಿ ನಿರ್ಧರಿಸಿದ ಕಾರ್ಯಕ್ರಮದಂತೆಯೆ ಜನತೆಯು ಮಿತವ್ಯಯದ ಜೀವನವನ್ನು ಸಾಗಿಸಬೇಕು. ಉತ್ಪತ್ತಿಯು ಹೆಚ್ಚಬೇಕು; ನ್ಯಾಯ್ಯವಾದ ವಿತರಣೆಯಾಗಬೇಕು. ಇದಕ್ಕೆಲ್ಲ ಜನತೆಯ ಪ್ರಾಮಾಣಿಕ ಸದ್ವರ್ತನೆಯು ಬಹಳ ಅವಶ್ಯ. ಭಾಷಣ ಪ್ರಕಟನೆಗಳ ಮೂಲಕ ಪ್ರಚಾರ ಕೈಕೊಂಡು ಜನತೆಯ ನಡೆವಳಿಯು ನೀತಿಯುತವಾಗುವಂತೆ ಪ್ರಯತ್ನಿಸಬೇಕು. ಕಾಂಗ್ರೆಸ ಕಾರ್ಯಕರ್ತರು, ಕಾಂಗ್ರೆಸ ಕಾರ್ಯಸಮಿತಿಯು ಈ ಬಗ್ಗೆ ರಚಿಸಿದ ಯೋಜನೆಯಂತೆ ಕೆಲಸ ಮಾಡಬೇಕು. ಸೀದಾ ಕಾರ್ಡಿನಲ್ಲಿ ದೊರೆತಷ್ಟರಲ್ಲಿಯೇ ಜೀವನ ಸಾಗಿಸಬೇಕಲ್ಲದೆ ಸಾಮಗ್ರಿ ಸಾಲದೆಂದು ಕಳ್ಳ ಪೇಟೆಗೆ ಹೋಗಕೂಡದು. ಲಂಚಬಡಕರ ಮತ್ತು ಕಳ್ಳಸಂತೆಗಾರರ ವಿರುದ್ಧ ದೊಡ್ಡ ಆಂದೋಲನ ಪ್ರಾರಂಭಿಸಬೇಕು. ಈ ಬಗ್ಗೆ ಪ್ರತಿಯೊಬ್ಬ ಕಾಂಗ್ರೆಸಿಗನೂ ಪ್ರತಿಜ್ಞಾ ಬದ್ಧನಾಗಿ ಅದರಂತೆ ವರ್ತಿಸಬೇಕು.

ಸ್ಥಳೀಯ ಪರಿಸ್ಥಿತಿಗಳಿಗನುಸರಿಸಿ ಗ್ರಾಮೋದ್ಯೋಗಗಳನ್ನು ಸಂಘಟಿಸಿ ಉತ್ಪತ್ತಿಯನ್ನು ಹೆಚ್ಚಿಸಬೇಕು. ಮನೆಯ ಹಿತ್ತಲು ಮೊದಲುಮಾಡಿ ಶಕ್ಯವಿದ್ದ ನೆಲವಲ್ಲೆಲ್ಲ ಕಾಯಿಪಲ್ಯ ಆಹಾರ ಧಾನ್ಯ ಬೆಳೆಯಲು ಎಲ್ಲರೂ ಯತ್ನಿಸಬೇಕು. ಪ್ರತಿದಿನ ಅರ್ಧ ತಾಸಾದರೂ ಕೈನೂಲು ತೆಗೆಯಲು ಹಳ್ಳಿಗರಿಗೆ ಉತ್ತೇಜನ ಕೊಡಬೇಕು. ಒಕ್ಕಲಿಗರಿಗೆ ಬೀಜ, ಗೊಬ್ಬರ, ಉಳಿದ ಉಪಕರಣಗಳನ್ನು ಪ್ರಾಮಾಣಿಕತನದಿಂದ ಹಂಚಲು ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ತೆರೆಯಬೇಕು. ನೀರಾವರಿ ಯೋಜನೆ, ಭೂಮಿಯ ಮಣ್ಣು ಕೊಚ್ಚಿ ಹೋಗದಂತೆ ಯೋಜನೆ ಇವೇ ಮೊದಲಾದವನ್ನು ಹೂಡಬೇಕು.

ಸರಕಾರದವರು ಜಾರಿಯಲ್ಲಿ ತಂದ ಅಲ್ಪ [illegible] ಯೋಜನೆಗಳನ್ನು ಜಾರಿಯಲ್ಲಿ ತರಬೇಕು. ಕಳ್ಳಪೇಟೆಯನ್ನು ಹತ್ತಿಕ್ಕಲು ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಬಳಕೆಗಾರರ (ಕಂಜೂಮರ್ಸ) ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು.

ಕೂಲಿಕಾರರ ಬಗ್ಗೆ ಇನ್ನೊಂದು ಮಹತ್ವದ ಗೊತ್ತುವಳಿ ಅಂಗೀಕೃತವಾಯಿತು. ಅದರ ಅಭಿಪ್ರಾಯ ಹೀಗೆ.

ಸರಕಾರದವರು ಕೂಲಿಕಾರರ ಅದರಲ್ಲಿಯೂ ಒಕ್ಕಲತನದ ಕೂಲಿಕಾರರ ಸ್ಥಿತಿಗತಿ ಸುಧಾರಿಸುವ ಬಗ್ಗೆ ಕೂಡಲೆ ಯೋಗ್ಯ ಕಾರ್ಯಕ್ರಮ ಕೈಕೊಳ್ಳಬೇಕು.

ಇನ್ನು ಕಾಂಗ್ರೆಸ್ಸಿಗರು ಕೂಲಿಕಾರರ ಬಗ್ಗೆ ಹೆಚ್ಚು ಲಕ್ಷ್ಯ ಪೂರೈಸಿ ಅವರಿಗಾಗಿ ದುಡಿಯಬೇಕು. ರಾಜಕೀಯ ಅಪಪ್ರಚಾರಕ್ಕೆ ಕೂಲಿಕಾರರು ಬಲಿಬೀಳದಂತೆ ನೋಡಬೇಕು. ಕೂಲಿಕಾರರ ಸಂಘಟನೆಯನ್ನು ಕಾಂಗ್ರೆಸಿಗರು ಹಿಂದುಸ್ಥಾನ ಮಜದೂರ ಸೇವಕ ಸಂಘದ ಮುಖಾಂತರವೇ ಮಾಡಬೇಕು ಇತ್ಯಾದಿ.

[illegible]ಯವರ ನಿಧನಕ್ಕಾಗಿ ದುಃಖಸೂಚಕ ಗೊತ್ತುವಳಿಯೂ ಒಂದು ಸ್ವೀಕೃತವಾಯಿತು.

ಗವರ್ನರ ಜನರಲ್ ಮತ್ತು ರಾಯಭಾರಿಗಳು

[“ಹರಿಜನ”ದಲ್ಲಿ ಡಿಸೆಂಬರ ೧೯, ೧೯೪೮ (ಕರ್ಮವೀರ ಡಿಸೆಂ. ೩೦) ದಿನ ಪ್ರಕಟವಾದ “ಅಧಿಕಾರಿಗಳನ್ನು ಕುರಿತು ಪ್ರಶ್ನೆಗಳು” ಎಂಬ ಲೇಖಕ್ಕೆ ನಮ್ಮ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಅವರ ಪರವಾಗಿ ಬಂದ ಈ ಕೆಳಗಿನ ಉತ್ತರವನ್ನು ವಾಚಕರು ಸ್ವಾಗತಿಸದಿರರು. ನಮ್ಮ ರಾಯಭಾರಿಗಳಿಗಾಗಿ ಭಾರತ ಸರಕಾರದವರು ಅಸಂಖ್ಯ ಹಣವನ್ನು ವ್ಯರ್ಥವಾಗಿ ದುಂದು ಮಾಡುತಿರುವರೆಂಬ ಭಾವನೆಯನ್ನು ಇದು ಹೋಗಲಾಡಿಸಿ, ಜನರು ಸಮಾಧಾನ ಹೊಂದುವಂತೆ ಮಾಡುವದೆಂದು ನಂಬಲಾಗಿದೆ. ಗವರ್ನರ ಜನರಲ್ಲರ ನಿಜವಾದ ಆಯವಾದರೂ ಅನುಮಾನಿಸಿದುದಕ್ಕಿಂತ ಎಷ್ಟೋ ಕಡಿಮೆ ಇದೆಯಲ್ಲದೆ ಈಗ ಮತ್ತೆ ತಿಂಗಳಾ ೧೭೦೦ ರೂಪಾಯಿಯಷ್ಟು ಇಳಿಸಲ್ಪಟ್ಟಿದೆ. ಸರಕಾರಿ ಸಮಾರಂಭಗಳಲ್ಲಿ ಮದ್ಯದ ಉಪಯೋಗವನ್ನು ನಿಷೇಧಿಸಲಾಗುವದು. ಗವರ್ನರ ಜನರಲ್ಲರ ಸಂಬಳ ಅನೇಕ ದೊಡ್ಡ ದೊಡ್ಡ ಅಪ್ರಸ್ತುತ ಕಡಿತಗಳಿಗೆ ಗುರಿಯಾಗುತ್ತದೆಯೆಂದು ನನಗೆ ಬೇರೊಂದು ಅಧಿಕೃತ ಮೂಲದಿಂದ ತಿಳಿದುಬಂದಿದೆ. ಉದಾಹರಣೆಗಾಗಿ ಮಾನ್ಯ ಗವರ್ನರ ಜನರಲ್ಲರು ಒಬ್ಬ ಅತಿಥಿಯನ್ನು ಆಮಂತ್ರಿಸಿದರೆ ಆ ಅತಿಥಿಯ ಊಟವಸತಿಗಳ ವೆಚ್ಚವೆಂದು ನಿರ್ದಿಷ್ಟ ಮೊತ್ತವನ್ನು ಅವರ ಸಂಬಳದಿಂದ ಮುರಿದುಕೊಳ್ಳಲಾಗುವದು. ಅವರಿಗೆ ದೊರೆಯುವ ಭತ್ತೆಗಳೆಲ್ಲವೂ ಮುಂಗಡಪತ್ರದಲ್ಲಿ ಕಾಣಿಸಿದ ಅಂಕಗಳಾಗಿರುವದರಿಂದ ಅವು ವಿನಿಯೋಗಿಸಲ್ಪಡದಿದ್ದರೆ ಸರಕಾರದ ಖಜಾನೆಯಲ್ಲೇ ಉಳಿಯುವವು.

ಮುಂಬಯಿ — ಕಿ. ಘ. ಮಶ್ರೂವಾಲಾ]
೪-೧-೪೯

ಉಪರ್ಯುಕ್ತ ಪತ್ರ

“ಹರಿಜನ”ದ ಡಿಸೆಂಬರ ೧೯, ೧೯೪೮ರ ಸಂಚಿಕೆಯಲ್ಲಿ ಪ್ರಕಟವಾದ “ಅಧಿಕಾರಿಗಳನ್ನು ಕುರಿತು ಪ್ರಶ್ನೆಗಳು” ಎಂಬ ಲೇಖದ ೧ನೆ ಮತ್ತು ೩ನೆ ಪ್ರಶ್ನೆಗಳಿಗೆ ಉತ್ತರ ಕೊಡಲು ಅಪ್ಪಣೆ ಕೊಡೋಣಾಗಲಿ.

ಪ್ರಶ್ನೆ: ಉತ್ಪನ್ನಕರ ಮತ್ತು ಮೇಲ್ತೆರಿಗೆಗಳನ್ನು ಕಳೆದ ಮೇಲೆ ಗವರ್ನರ ಜನರಲ್ಲರಿಗೆ ಸಿಗುವ ಶೇಷ ಸಂಬಳವೆಂದರೆ ತಿಂಗಳಿಗೆ ೭೫೦೦ ರೂಪಾಯಿ. ಇದರಲ್ಲಿ ಅಧಿಕಾಂಶವನ್ನು ಸದ್ಯಃಸ್ಥಿತಿಯಲ್ಲಿ ಅಪರಿಹಾರ್ಯವೇ ಆದ ಆವಶ್ಯಕ ವೆಚ್ಚಗಳಿಗಾಗಿ ತೆತ್ತುಬಿಡಬೇಕಾಗುತ್ತದೆ. ಈಗ ಈ ಸಂಬಳ ಕರಮುಕ್ತವಾದ ೫೫೦೦ ರೂಪಾಯಿಗಳಿರಬೇಕೆಂದು ಗೊತ್ತುಪಡಿಸಲಾಗಿದೆ.

ಸರಕಾರಿ ಭವನ ಗವರ್ನರ ಜನರಲ್ಲರ ನಿವಾಸ ಮಾತ್ರವಾಗಿರದೆ, ಅದು ರಾಜ್ಯದ ಅತಿಥಿ ಸತ್ಕಾರಗೃಹವೂ ಅನೇಕ ರಾಷ್ಟ್ರೀಯ ಸ್ವಾಗತ ಸಮಾರಂಭಗಳ ಸ್ಥಾನವೂ ಆಗಿದೆ. ಅದರಲ್ಲಿ ಅನೇಕ ಸರಕಾರಿ ಕಚೇರಿಗಳಿವೆಯಲ್ಲದೆ ಅದು ಮಂತ್ರಿ ಸಭೆಯ ಸ್ಥಾನವೂ ಹೌದು. ಅದರ ಸ್ವಾಗತದ ಕೋಟಡಿಗಳಲ್ಲಿ ಕೆಲವನ್ನು ಈಗ ಭಾರತೀಯ ಕಲಾಪ್ರದರ್ಶನಿಗಾಗಿ ಉಪಯೋಗಿಸಲಾಗಿದೆ. ಹೀಗೆ ಸರಕಾರಿ ಭವನಕ್ಕಾಗುವ ವೆಚ್ಚ ಗವರ್ನರ ಜನರಲ್ಲರ ಸ್ವಂತದ್ದಾಗಿರದೆ ರಾಜ್ಯಭಾರಕ್ಕೆ ಅನುಷಂಗಿಕವಾದ ನಾನಾ ಉದ್ದೇಶಗಳಿಗೋಸ್ಕರ ಆಗುತ್ತದೆ.

ಪ್ರಶ್ನೆ ೩: ರಾಯಭಾರಿಗಳಿಗೆ ೩೦೦೦ದಿಂದ ೧೨೦೦೦ ರೂಪಾಯಿಗಳ ವರೆಗೆ ಸಂಬಳ ಕೊಡಲಾಗುತಿದೆಯೆಂಬದು ಸರಿಯಲ್ಲ. ರಾಯಭಾರಿಗಳನ್ನು ಪ್ರಥಮ, ದ್ವಿತೀಯ, ತೃತೀಯ ಎಂದು ಮೂರು ವರ್ಗಗಳಲ್ಲಿ ವಿಂಗಡಿಸಲಾಗಿದೆ. ಇವರಿಗೆ ಅನುಕ್ರಮವಾಗಿ ೩೫೦೦, ೩೦೦೦ ಮತ್ತು ೨೫೦೦ ರೂಪಾಯಿ ಮಾಸಿಕ ವೇತನ ದೊರೆಯುವದು. ಇದಲ್ಲದೆ, ಅವರಿಗೆ ಪ್ರಾತಿನಿಧ್ಯ ಭತ್ತೆಯನ್ನು ಕೊಡಲಾಗುತಿದ್ದು, ಅದರಲ್ಲಿ ಅವರ ಮನೋರಂಜನಾದಿಗಳ ವೆಚ್ಚವೂ ಅವರಿರುವ ದೇಶಗಳಲ್ಲಿನ ಏರಿದ ಜೀವನದವೆಚ್ಚವೂ ಅಡಕವಾಗಿದೆಯೆಂದು ಗ್ರಹಿಸಲಾಗಿದೆ. ಅತಿಪ್ರಸರಣ ಮತ್ತು ವಿನಿಮಯ ದರಗಳ ಪರಿಣಾಮವಾಗಿ ಅವರ ಜೀವನ ವೆಚ್ಚ ವಿಶೇಷವಾಗಿ ಏರಿದೆ. ಆದುದರಿಂದ ನಮ್ಮ ಪರರಾಷ್ಟ್ರ ಪ್ರತಿನಿಧಿಗಳಿಗೂ ಅವರ ಸಿಬ್ಬಂದಿಗಳಿಗೂ ಈಗಿದ್ದ ಸಂಬಳದಲ್ಲಿ ವೆಚ್ಚ ತೂಗಿಸಿಕೊಂಡು ಹೋಗುವದೇ ಕಠಿಣವಾಗುತಿದೆ.

ಇತರ ದೇಶಗಳ ರಾಯಭಾರಿಗಳಿಗೆ ದೊರೆಯುತಿರುವ ತಕ್ಕಷ್ಟು ಭತ್ತೆಗಳೊಡನೆ ಹೋಲಿಸಿದರೆ ನಮ್ಮ ರಾಯಭಾರಿಗಳಿಗೆ ಕೊಡುವ ಪ್ರಾತಿನಿಧ್ಯ ಭತ್ತೆ ತೀರ ಮಿತವಾದುದೆಂದು ಈ ಕೆಳಗಿನ ಅಂಕೆಗಳಿಂದ ವಿದಿತವಾದೀತು. ಉದಾಹರಣೆಗಾಗಿ, ಪ್ಯಾರಿಸಿನಲ್ಲಿರುವ ಬ್ರಿಟಿಶ ರಾಯಭಾರಿಗೆ ಪ್ರಾತಿನಿಧ್ಯ ಭತ್ತೆಯೆಂದು ೧೫೫೦೦ ರೂಪಾಯಿಗಳು ಸಿಕ್ಕಿದರೆ ನಮ್ಮವರಿಗೆ ಬರಿ ರೂ. ೩೫೦೦. ಕೊಡಲಾಗುತಿದೆ. ಕಾಯರೋದಲ್ಲಿರುವ ಬ್ರಿಟಿಶ ರಾಯಭಾರಿಗೆ ರೂ. ೮೮೦೦ ಭತ್ತೆ ದೊರೆತರೆ ನಮ್ಮವರಿಗೆ ದೊರೆಯುವದು ರೂ. ೩೫೦೦ ಇರಾಣದಲ್ಲಿನ ಬ್ರಿಟಿಶ ರಾಯಭಾರಿಗೆ ರೂ. ೪೮೦೦ ಸಿಕ್ಕರೆ ನಮ್ಮವರಿಗೆ ಕೊಡುವದು ರೂ. ೨೦೦೦.

ಸರಕಾರಿ ಸತ್ಕಾರ ಕೂಟಗಳಲ್ಲಿ ಮಾದಕ ಪೇಯಗಳ ಉಪಯೋಗವನ್ನು ನಿಷೇಧಿಸುವ ಆಜ್ಞೆಗಳು ಹೊರಡಿಸಲ್ಪಟ್ಟಿವೆ.

ಹೊಸದಿಲ್ಲಿ — ನಿಮ್ಮ ವಿಶ್ವಾಸಿ
ಡಿಸೆಂ. ೩೧, ೧೯೪೮ — ಎ. ವಿ. ಪೈ
ಮುಖ್ಯಮಂತ್ರಿಗಳ ಕಾರ್ಯದರ್ಶಿ

ಅನವಶ್ಯಕವಾದುದನ್ನೆಲ್ಲ ತೊರೆಯಬೇಕು

(೯ ನೆಯ ಪುಟದಿಂದ)

ದೊಡ್ಡ ದೊಡ್ಡ ನಗರಗಳಲ್ಲಿಯೂ ಪಟ್ಟಣಗಳಲ್ಲಿಯೂ ಇದ್ದವರು ಅಗತ್ಯವಾಗಿ ಬೇಕಾದ್ದಕ್ಕಿಂತ ೪-೫ ಪಟ್ಟು ಹೆಚ್ಚು ವಸ್ತ್ರವನ್ನು ಬಳಸುತ್ತಾರೆ. ಉಡುಪಿನ ವಿಲಾಸ ವಿನ್ಯಾಸಗಳನ್ನು ತೊರೆದು, ಖಾದಿಯ ಆಂದೋಲವು ಪ್ರಾರಂಭವಾಗುವಾಗ ಇದ್ದ ಹುರುಪು ಹುಮ್ಮಸವನ್ನೇ ಈಗ ಈ ಬಗ್ಗೆ ನಾವು ತೋರಬೇಕು. ಒಂದು ಅಂಗಿ ಒಂದು ಧೋತರ ಇಷ್ಟು ನಮ್ಮ ನಾಡಿನಲ್ಲಿ ಸಭ್ಯ ಉಡುಪಾಗಲು ಸಾಕು. ಉತ್ತರ ಹಿಂದುಸ್ಥಾನದಲ್ಲಿ ಕೆಲವು ತಿಂಗಳುಗಳನ್ನು ಬಿಟ್ಟರೆ ದೇಶಾದ್ಯಂತವೂ ಇರುವ ಹವಾಮಾನಕ್ಕೆ ಅನೇಕ ಪದರುಗಳ ವಸ್ತ್ರಾವರಣದ ಉಡುಪೇ ನಮಗೆ ಒಗ್ಗದು. ಒಂದು ಗಿಡ್ಡ ಪಂಜೆಯನ್ನು ಮಾತ್ರ ಉಟ್ಟು ನಾಡನ್ನೆಲ್ಲ ಇಡೀ ಆಯುಷ್ಯ ಸುತ್ತಿ ಮಹಾತ್ಮಾ ಗಾಂಧಿಯವರು ಈ ಬಗ್ಗೆ ಪ್ರತ್ಯಕ್ಷ ಪಾಠ ಹಾಕಿ ಕೊಟ್ಟಿದ್ದಾರೆ. ಧನಿಕ ಮತ್ತು ಮಧ್ಯಮ ವರ್ಗದ ಸ್ತ್ರೀಯರು ತಮಗೆ ಬೇಕಾದ್ದಕ್ಕಿಂತ ಹೆಚ್ಚಿನ ಸೀರೆ, ಬಟ್ಟೆ ಕೊಳ್ಳುತ್ತ ಆಕರ್ಷಕತೆ ವೈವಿಧ್ಯಗಳನ್ನು ಹುಡುಕುತ್ತ ಪೇಟೆ ಪೇಟೆ ಹುಚ್ಚರಂತೆ ಸುತ್ತುತ್ತಾರೆ. ಸಾದಾ ಉಡುಪಿನ ಮೊರೆ ಹೊಕ್ಕರೆ ನಮ್ಮ ನಾಡಿನ ವಸ್ತ್ರದ ಕೊರತೆಯೇ ಸುಲಭವಾಗಿ ಹಿಂಗಿ ಹೋಗುವದು.

ಇದೇ ಬಗೆಯ ಸ್ಥಿತಿಯೇ ಅನ್ನದ ಬಗ್ಗೆಯೂ ಉಂಟೆಂದು ಹೇಳಬಹುದು: ಪಟ್ಟಣವಾಸಿಗಳಲ್ಲಿ ಬಹು ಜನರು ಸಾಮಾನ್ಯವಾಗಿ ಆರೋಗ್ಯಕ್ಕೆ ಬೇಕಾದುದಕ್ಕಿಂತ ಹೆಚ್ಚು ಗ್ರಾಸಗಳಂಕರಿಸುತ್ತಾರೆ ಮತ್ತು ತಿಂದುದಕ್ಕಿಂತ ಹೆಚ್ಚು ಅನ್ನವನ್ನು ಮಣ್ಣಿಗೆರಚುತ್ತಾರೆ. ಮಾಂಸಾಹಾರಿಗಳಾದವರು ಅದನ್ನೇ ತುಸು ಹೆಚ್ಚು ಬಳಸಿ ಶಾಕಾನ್ನವನ್ನು ಶಾಕಾಹಾರಿಗಳಿಗಾಗಿ ಉಳಿಸಬೇಕು. ಧನಿಕರು ಹಣ್ಣು ಹಂಪಲ ಕಾಯಿಪಲ್ಯ ಹೆಚ್ಚು ಬಳಸಿ ಬಡವರಾದವರಿಗೆ ಅಕ್ಕಿ ಗೋದಿ ಜೋಳ ದ್ವಿದಳ ಧಾನ್ಯ ಇವೇ ಮೊದಲಾದವನ್ನು ತುಸು ಉಳಿಸಿ ಕೊಡಬೇಕು. ವಾರಕ್ಕೆ ಒಂದು ದಿನವಾದರೂ ಒಪ್ಪತ್ತು ಉಂಡು ಬಡ ಹಳ್ಳಿಗರಿಗೆ ಆ ಅನ್ನವನ್ನು ಬಿಟ್ಟರೆ ಅದಷ್ಟೋ ಅಭಾವವು ನಿವಾರಣೆಯಾಗಬಲ್ಲದು.

ಕೋಟ್ಯಂತರ ರೂಪಾಯಿಗಳ ಕೊಡುಗೆ ಕೊಟ್ಟರೂ ಅಸಂಖ್ಯಾತ ಕಂಚಿನ ಮೂರ್ತಿಗಳನ್ನು ನಿಲ್ಲಿಸಿದರೂ ನಮ್ಮನ್ನು ಅಗಲಿದ ಪೂಜ್ಯ ರಾಷ್ಟ್ರಪಿತನ ಔರಸರು ನಾವೆಂದು ಹೇಳಿಕೊಳ್ಳಲು ಅರ್ಹರಾಗಲಾರೆವು. ನಿಃಸ್ವಾರ್ಥಸೇವೆ, ದೀನ ದರಿದ್ರರ ಏಳಿಗೆಗಾಗಿ ಹಗಲಿರುಳು ಹೆಣಗುವದು ಇವುಗಳು ಮಾತ್ರ ನಮ್ಮನ್ನು ಆ ಮಹಾಮಹಿಮನ ಔರಸರನ್ನಾಗಿ ಮಾಡಬಲ್ಲವು.

“ಗಣಪತಿ”

ಮಾಂಸ ತಿನ್ನದಿದ್ದರೂ ದೇವರನ್ನು ತನ್ನ ಪ್ರತಿಯೊಂದು ಕಾರ್ಯದಲ್ಲಿ ಪಾಖಂಡಿತ್ವಕ್ಕೆ ಎಳೆವವನಿಗಿಂತ ಮಾಂಸ ತಿಂದರೂ ದೈವ ಭಯದಿಂದ ಬಾಳುವವನು ಮುಕ್ತಿಗೆ ಹತ್ತಿರದಲ್ಲಿದ್ದಾನೆ.

× × ×

ಪ್ರಾಣಿಗಳನ್ನು ವೈಜ್ಞಾನಿಕ ಪ್ರಯೋಗಕ್ಕಾಗಿ ಕೊಯ್ಯುವುದರ ವಿರುದ್ಧ ನನ್ನ ಆತ್ಮ ದಂಗೆಯೇಳುತ್ತದೆ. ನಾನೆಂದೂ ಮಾಡಿಕೊಳ್ಳದ ಕ್ರೂರಕೃತ್ಯವನ್ನು ಪ್ರಾಣಿಗಳಿಗೆ ನಾನೇಕೆ ಮಾಡಬೇಕು?

ಇನ್ನೊಂದು ಮುಖ

ಕಾಂಗ್ರೆಸ್ ಸಂಸ್ಥೆ ಮತ್ತು ಅದರ ಸದಸ್ಯರ ಬಗ್ಗೆ ಸರ್ವಸಾಧಾರಣ ಅತೃಪ್ತಿಯುಂಟಾಗಲು ಸಾಕಷ್ಟು ಕಾರಣವಿದ್ದರೂ ಜನರು ಮತ್ತು ಕಾಂಗ್ರೆಸ್ಸಿನ ವಿರೋಧಿ ಪಕ್ಷಗಳು ದೇಶದಲ್ಲಿ ಎಲ್ಲವನ್ನೂ ಸರಿಪಡಿಸಲು ಕಾಂಗ್ರೆಸ್ಸಿಗರು ಮಾತ್ರ ತಮ್ಮನ್ನು ತಿದ್ದಿಕೊಳ್ಳಬೇಕು ಎಂದು ಊಹಿಸಿದರೆ ಅದರಿಂದ ತೀವ್ರ ಹಾನಿಯುಂಟಾಗದಿರದು. ಕಾಂಗ್ರೆಸ್ಸಿಗರು ರಾಷ್ಟ್ರದ ಒಂದು ಸಣ್ಣ ಭಾಗವೆನಿಸುತ್ತಾರೆ ಮತ್ತು ಅವರ ಬಗ್ಗೆ ಹೇಳಿದ್ದು ಮಾಡಿದ್ದು ಈ ಎಲ್ಲವನ್ನೂ ತೂಗಿನೋಡಿದರೆ ಅವರೇ ಸಮಾಜದ ಉತ್ತಮ ಭಾಗದವರೆನಿಸಲೂ ಬಹುದು. ಈಗಿರುವ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗಿಂತ ವೈಯಕ್ತಿಕ ಮತ್ತು ಸಾರ್ವಜನಿಕ ನಡೆವಳಿಯಲ್ಲಿ ಉತ್ತಮ ನಿಯಮಾವಳಿ ಬದ್ಧವೂ ಅದನ್ನು ತೆಗೆದೊಗೆದು ಅದರ ಸ್ಥಾನದಲ್ಲಿ ಅದಕ್ಕಿಂತ ಉತ್ತಮವಾಗಿ ಕೆಲಸ ಮಾಡಲು ನಿಲ್ಲಬಲ್ಲುದೂ ಆದ ಇನ್ನೊಂದು ಸಂಸ್ಥೆ ಇರುವಂತೆ ನನಗೆ ತೋರುವುದಿಲ್ಲ. ಸ್ವತಃ ಕಾಂಗ್ರೆಸ್ ಸಂಸ್ಥೆಯೇ ಈ ವಿಷಯವನ್ನು ಒತ್ತಿ ಹೇಳಿ ತನ್ನ ಸದಸ್ಯರ ನ್ಯೂನತೆಗಳನ್ನು ಹೃದ್ಗತ ಮಾಡಿಕೊಂಡಿರುವುದೇ ಒಂದು ದೊಡ್ಡ ಆಶಾದಾಯಕವಾದ ಚಿಹ್ನೆ. ವೇಳೆ ಮೀರುವ ಮೊದಲೇ ಅದು ಮುಖ್ಯ ನೇತೃಗಳ ಶುದ್ಧೀಕರಣ ಕಾರ್ಯಗಳಿಂದ ತನ್ನ ದೌರ್ಬಲ್ಯವನ್ನು ನೀಗಲೂ ಬಹುದೆಂಬುದು ಅಸಂಭವವಲ್ಲ. ಆದರೆ ಕಾಂಗ್ರೆಸ್ಸನ್ನು ದೂಷಿಸುವ ವಿಮರ್ಶಕರು ತಮ್ಮ ನಡತೆಯ ಮಟ್ಟ ಬಹಳ ಮೇಲಿನದಿದೆ ಇಲ್ಲವೆ ತಿದ್ದುವುದು ಅಥವಾ ತೀರಿಸುವುದು ಸರಕಾರ ಮತ್ತು ಕಾಂಗ್ರೆಸ್ಸಿಗರಿಗೆ ಸೇರಿದ್ದು, ಅದರಲ್ಲಿ ತಾವು ಮಾಡಬೇಕಾದ್ದೇನೂ ಇಲ್ಲ ಎಂಬ ಆತ್ಮಸಂತುಷ್ಟಿಯಲ್ಲಿರುವದರಿಂದ ಅವರು ತಮಗೇ ತಾವು ಹಾನಿ ಮಾಡಿಕೊಳ್ಳುತ್ತಾರೆ.

ಅವಶ್ಯವಿದ್ದಾಗ ನಿಸ್ಸಂಕೋಚವಾಗಿ ನಾನು ಕಾಂಗ್ರೆಸ್ ಸರಕಾರ ಇಲ್ಲವೆ ಸದಸ್ಯರ ತಪ್ಪನ್ನು ಎತ್ತಿ ಆಡುವೆನಾದರೂ ಹಾಗೆ ಮಾಡುವಲ್ಲಿ ನನಗೆ ಸಂತೋಷವಿದೆಯೆಂದು ಯಾರೂ ತಿಳಿಯಕೂಡದು. ಕೆಲವೊಮ್ಮೆ ನಾನು ಕಾಂಗ್ರೆಸ್ ಸಾಯುವುದು, ನಾಶಹೊಂದುವುದು ಎಂದಿದ್ದರೆ ಅದು ನನ್ನ ಇಷ್ಟವೆಂದಾಗಲಿ ಶಾಪವೆಂದಾಗಲಿ ತಿಳಿಯತಕ್ಕದ್ದಲ್ಲ. ತದ್ವಿರುದ್ಧವಾಗಿ ಒಬ್ಬ ಗೆಳೆಯನಂತೆ ಮತ್ತು ಕಾಂಗ್ರೆಸ್ಸಿನ ಒಬ್ಬ ಹಳೆಯ ಸೇವಕನಂತೆ ನಾನು ಅದರ ಮೇಲೆ ವಿಮರ್ಶೆ ಮಾಡುವುದು.

ಕಾಂಗ್ರೆಸ್ಸಿಗೆ ಯಾವುದು ಬೇಕಾಗಿದೆಯೋ ಅದು ರಾಷ್ಟ್ರಕ್ಕೆ ಇನ್ನೂ ಹೆಚ್ಚು ಅವಶ್ಯಕವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನೂ ಮೇಲ್ಮಟ್ಟದ ನಡತೆಯನ್ನು ಹಿಡಿಯಬೇಕು. ಪ್ರತಿಯೊಬ್ಬನೂ ದೇವ[illegible]ನಾಗಬೇಕು; ಅಂದರೆ, ಸತ್ಯ, ಧರ್ಮ, ಪ್ರಾಮಾಣಿಕತೆ, ಸರಳತೆ, ಶುಚಿತ್ವ ಇವುಗಳತ್ತ ಲಕ್ಷ ಹಾಕಬೇಕು; ಅಲ್ಲದೆ. ಪರರ ಸುಖಕ್ಕಾಗಿ ಪ್ರೀತಿ ಮನ್ನಣೆಗಳನ್ನು ತಾಳಬೇಕು. ದೇವರನ್ನು ನಮ್ಮ ಜೀವನದಿಂದ ಒದ್ದೋಡಿಸಿಯೂ ಸುಖಿಗಳಾಗಿ ಮತ್ತು ತೃಪ್ತರಾಗಿ ಬಾಳಲಾರೆವೆಂಬುದನ್ನು ಎಲ್ಲರೂ ತಿಳಿದುಕೊಳ್ಳಲಿ.

ಮುಂಬಯಿ
೩-೧-೪೯ — ಕಿ. ಘ. ಮಶ್ರುವಾಲಾ

ನಾವು ಮರೆತೇವೆಂದು

ನನಗೆ ಸತ್ತವರ ಆತ್ಮಗಳಿಂದ ಯಾವ ಸುದ್ದಿಯೂ ತಲುಪಿಲ್ಲ. ಅಂಥ ಸುದ್ದಿ ಬರುವ ಸಾಧ್ಯತೆಯಲ್ಲಿ ಅಪನಂಬಿಗೆಯಿಡಲೂ ನನಗೆ ಯಾವ ಸಾಕ್ಷಿಯೂ ಇಲ್ಲ. ಆದರೆ ನಾನು ಅಂಥ ಸಂಪರ್ಕ ಇಟ್ಟುಕೊಳ್ಳುವುದಕ್ಕೆ ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸುತ್ತೇನೆ. ಸಂಪರ್ಕ ಸಾಧ್ಯವಿದೆಯೆಂದು ಒಪ್ಪಿದರೂ ಆತ್ಮಗಳಿಗೂ ಅವು ವ್ಯವಹಾರಕ್ಕಿಟ್ಟುಕೊಳ್ಳುವ ಮಾಧ್ಯಮರೂಪಿಗಳಾದ ಮನುಷ್ಯರಿಗೂ ಆ ಅಭ್ಯಾಸದಿಂದ ಹಾನಿಯಿದೆ.

× × ×

ಇದ್ದ ಸಂಗತಿಯನ್ನು ನ್ಯಾಯಾಧೀಶರ ಮುಂದೆ ಇಡುವುದು ಮತ್ತು ಅದರ ಸತ್ಯಾಂಶವನ್ನು ಹುಡುಕಿ ತೆಗೆವಲ್ಲಿ ಅವರಿಗೆ ಸಹಾಯ ಮಾಡುವುದು ಇವೇ ಯಾವಾಗಲೂ ವಕೀಲನ ಕರ್ತವ್ಯವಲ್ಲದೆ ಅಪರಾಧಿಯನ್ನು ನಿರಪರಾಧಿಯೆಂದು ಸಿದ್ಧಮಾಡಿ ತೋರಿಸುವುದಲ್ಲ.

× × ×

ಮನುಷ್ಯನು ಮಾಂಸ, ಮೊಟ್ಟೆ ಮುಂತಾದವನ್ನು ತಿನ್ನದಿರಬೇಕೆಂಬುದು ನನ್ನ ಧರ್ಮಶ್ರದ್ಧೆಯ ಒಂದು ಅಂಶ.



ಬಾಲಲೀಲೆ

ಮಗು,

ಬಾಲಲೀಲೆಯನ್ನು ಬಲ್ಲವರು ಬಹಳ ಕಡಿಮೆ. ಬಾಲಕರನ್ನು ಬಾಲವುಳ್ಳವರೊಡನೆ ಹೋಲಿಸಿ ನಗುವವರಿದ್ದಾರೆ. ಅವರಿಗೆ ಬಾಲ ಲೀಲೆಯ ಅಂದವೇ ತಿಳಿಯದು. ಹೆಂಗಸರು ಇಂದಿಗೂ ಜಡೆ ಇಳಿಬಿಟ್ಟುಕೊಂಡಿರುವುದಾದರೂ ಏಕೆ? ಒಂದಲ್ಲ ಒಂದು ವಿಧದಿಂದ ಅಂದವನ್ನು ಹೆಚ್ಚಿಸಿಕೊಂಡು ಜನಪ್ರಿಯರೆನಿಸಿಕೊಳ್ಳಬೆಂಕೆಂದೇ ಅಲ್ಲವೆ?



ನೋಡು--- ಬೆಕ್ಕಿಗೆ ಬಾಲವಿದೆ. ಆದರೆ ಅದು ಕೇವಲ ಅಲಂಕಾರಕ್ಕಾಗಿ ಅಲ್ಲ. ಅದರ ದೆಸೆಯಿಂದ ಅದಕ್ಕೆ ಓಡಾಡುವಾಗ ಮೈಭಾರದ ಹಿಡಿತ ಸಿಗುತ್ತದೆ. ಚಳಿಗಾಲದಲ್ಲಿ ಕೂದಲುಳ್ಳ ಅದನ್ನು ಕಾಲಿಗೆ ಸುತ್ತಿಕೊಂಡು ಕುಳಿತಾಗ ಬೆಕ್ಕಿಗೆ ಬೆಚ್ಚಗೆನಿಸುತ್ತದೆ: ಅದು ಹಿಂದುಗಡೆಯಿಂದ ಯಾವುದಾದರೂ ಪ್ರಾಣಿ ಬಂದರೆ ಅದನ್ನು ಹೆದರಿಸಲು ಬಾಲ ಬೀಸಲು ಬರುತ್ತದೆ.

ಕುದುರೆಯ ಬಾಲಕ್ಕೆ ಉದ್ದುದ್ದ ಕೂದಲಿವೆ. ಅದರ ಸಹಾಯದಿಂದ ಅದು ಮೈಮೇಲೆ ಕುಳಿತ ನೊಣಗಳನ್ನು ಜಾಡಿಸಿಕೊಳ್ಳುತ್ತದೆ. ನಾಯಿಯ ಬಾಲವು ಅದರ ಭಾವನೆಗಳ ಅಳಿಗೋಲೆನಿಸುತ್ತದೆ. ಮರಕುಟುಕನ ಬಾಲವು ಮರವನ್ನು ಕುಟುಕುವಾಗ ಅದಕ್ಕೆ ಆಧಾರವಾಗಿ ನಿಲ್ಲುತ್ತದೆ. ಆದರೆ ಹಂದಿಗೆ ಬಾಲದಿಂದ ಏನು ಪ್ರಯೋಜನ? ಕಾಲಿಗೆ ಸುತ್ತಿಕೊಳ್ಳುವಷ್ಟೊಂದು ದೊಡ್ಡದಾಗಿಲ್ಲ; ಆಧಾರ ಕೊಡುವಷ್ಟು ಬಲವಾಗಿಲ್ಲ; ನೊಣ ಜಾಡಿಸಿಕೊಳ್ಳಲು ಉದ್ದರೋಮಗಳಿಲ್ಲ; ಅದು ಕೇವಲ ಬೆನ್ನೆಲುಬಿಗೆ ಜೋತು ಬಿದ್ದ ಮಾಂಸಲ ಹಗ್ಗ ಎಂದೆನಿಸಿದರೂ ಎನಿಸಬಹುದ..

ಆದರೆ ವಿಚಾರ ಮಾಡಿದರೆ ಹೀಗೆಂದು ತಿಳಿಯಿತು. ಹಂದಿಯ ಬಾಲದಲ್ಲಿಯ ಡೊಂಕು ಅದರ ಭಾವನೆಗಳನ್ನು ಸೂಚಿಸುವುದೆಂದು ಹಂದಿ ಸಾಕುವವರಿಂದ ತಿಳಿದುಕೊಂಡೆನೆಂದು ಎಡ್ವಿನ್ ವೇಟೇಲನು ಬರೆಯುತ್ತಾನೆ. ಇಷ್ಟಲ್ಲದೆ ಹಂದಿಯ ಬಾಲದ ತೊವ್ವೆ ಮಾಡಿದರೆ ಬಹಳ ರುಚಿಯೆಂದು ತಿನ್ನುವವರು ಹೇಳುತ್ತಾರೆ. ಕಡೆಗೆ ಮತ್ತೂ ಒಂದು ಪ್ರಯೋಜನವಿದೆಯೆಂಬುದು ನಾನೇ ಸ್ವತಃ ಒಮ್ಮೆ ಹಂದಿಯನ್ನು ಹಿಡಿಯಲು ಹೋದಾಗ ತಿಳಿಯಿತು. [illegible] ಬಲ್ಲೆಯಾ? ಕೇಳು— [illegible] ಅದನ್ನು ಹಿಡಿಯಲು ನನಗೆ [illegible] ಆಗುತ್ತಿರಲಿಲ್ಲ. ಎಲ್ಲಿ ಹಿಡಿದರೂ ತಪ್ಪಿಸಿಕೊಳ್ಳುವ ಸಾಮರ್ಥ್ಯ ಅದಕ್ಕಿದೆ. ಆದರೆ ಬಾಲ ಹಿಡಿದುಬಿಟ್ಟರೆ ಮುಗಿದೇ ಹೋಯಿತು. ಹಂದಿ ಅತ್ತಿತ್ತ ಅಲ್ಲಾಡಲಾರದು!

ಬಾಲದ ಸಹಾಯದಿಂದ ಗೋಸುಂಬೆ ಹಲ್ಲಿ ಮುಂತಾದ ಕೃಮಿಜಾತಿ ಹರಿಯುವುದನ್ನು ನೀನು ನೋಡಿರುವೆ. ಹಾವಿನ ದೇಹ ಇಡೀ ಬಾಲವೇ. ನೆಲದ ಮೇಲೆ ಹರಿಯುವಾಗ ಅತ್ತಿತ್ತ ಬಳುಕುವ ಬಾಲ ಹಾವಿನ ಹೊಟ್ಟೆಗೆ ನೆಲದ ಮೇಲೆ ಹಿಡಿತ ಕೊಡುತ್ತದೆ. ನೀರಿನಲ್ಲಿ ಈಸುವಾಗ ಅತ್ತ ಇತ್ತ ಬಾಲವನ್ನು ಕೈಗಳಂತೆ ಬಡಿದು ದೇಹದ ಮೇಲೆ ಹಿಡಿತವಿಟ್ಟುಕೊಂಡು ಶೀಘ್ರಗತಿಯಿಂದ ಸಾಗಲು ಬರುತ್ತದೆ

ಬಾಲಗಳಲ್ಲಿ ವಿಶ್ವರೂಪಗಳಿವೆ. ಕೆಲ ಕೋಲಿನಂತೆ, ಕೆಲವು ಹಗ್ಗದಂತೆ, ಕೆಲವು ಅರ್ಧ ಚಂದ್ರನಂತೆ, ಗೊಂಡೆಯಂತೆ, ನಾಗರದಂತೆ, ಕುಂಚದಂತೆ, ಚಮಚದಂತೆ, ಗುದ್ದಲಿಯಂತೆ, ಸುತ್ತಿಗೆಯಂತೆ ಮತ್ತು ಇನ್ನೂ ಬೇರೆ ಬೇರೆ ರೂಪದ ಬಾಲಗಳಿವೆಯೆಂಬುದು ಒಮ್ಮೆ ನೀನು ಯಾವುದಾದರೊಂದು ಪ್ರಾಣಿ ಪ್ರದರ್ಶನಾಲಯಕ್ಕೆ ಹೋದರೆ ನೋಡುವೆ.



ಚೇಳಿನ ಬಾಲದ ಪ್ರಯೋಜನವಂತೂ ಪ್ರಸಿದ್ಧವೇ ಇದೆ. ಅದು ಬಾಲದ ಕೊಂಡಿಯಿಂದ ಒಂದು "ಇಂಜಕ್ಶನ್" ಕೊಟ್ಟಿತೆಂದರೆ ಹೊಟ್ಟೆಗೆ ಬೆಂಕಿ ಹಾಕಿದ ಹಾಗಾಗುತ್ತದೆ. ಇದೇ ಅದರ ಶತ್ರುನಿಗ್ರಹದ ಶಸ್ತ್ರ. ಮೊಸಳೆಗೆ ನೀರಿನಲ್ಲಿ ಬಾಲವೊಂದು ಈಸುಬೆಂಡಾದರೆ ನೆಲದ ಮೇಲೆ ವೈರಿಗಳನ್ನು ಬಡಿಯಲು ಅದೊಂದು ಗರಗಸವೆನಿಸುತ್ತದೆ. ಆಸ್ಟ್ರೇಲಿಯದ ಕಾಂಗರುವಿಗೆ ಅದರ ಬಾಲವು ಕುಳಿತುಕೊಳ್ಳಲು ಒಂದು ಕುರ್ಚಿಯಾಗುತ್ತದೆ. ಮುಳ್ಳು ಹಂದಿಯ ಬಾಲ ಅದರ ಕಣೆಯನ್ನು ಶತ್ರುವಿನ ಮೈಗೆ ಜಡಿಯಲು ಸುತ್ತಿಗೆಯಾಗುತ್ತದೆ.

ದೇವರ ಸೃಷ್ಟಿಯಲ್ಲಿ ಪ್ರತಿಯೊಂದು ವಸ್ತುವಿಗೂ ಪ್ರಯೋಜನ ಮತ್ತು ಚಂದ ಎರಡೂ ಕೂಡಿಯೇ ಇರುತ್ತವೆ. ಇಲ್ಲದ ವಸ್ತುವನ್ನು ಇಟ್ಟುಕೊಳ್ಳಹೋದರೆ ಪ್ರಯೋಜನವೂ ಇಲ್ಲ, ಅಂದವೂ ಆಗದು ಎಂಬುದು ಎಲ್ಲೆಡೆಯೂ ಸತ್ಯವಿದೆ

ಬೆಕ್ಕಿಗೆರಡು ಕೋಡು ಮೂಡ
　　　　ಲೇನು ಚಂದವಕ್ಕು?
ಹಕ್ಕಿ ಕೊಕ್ಕು ಕಳೆದುಕೊಂಡ
　　　　ರೇನು ತಿನ್ನಲಕ್ಕು?
ಮಂಗ ಬಾಲ ಕಳೆದುಕೊಂಡ
　　　　ರೆಂತು ಜಿಗಿಯಲಕ್ಕು?
ನಿನಗೆ ಬಾಲ ಮೂಡೆ ಬಿದ್ದು
　　　　ಬಿಡುವೆ ನಕ್ಕು ನಕ್ಕು!

—ಮಾಮ.

ದುರಂತ ನಿಯಂತ್ರಣಗಳನ್ನು ಕೊನೆಗೊಳಿಸಬೇಕು

(೫ ನೇ ಪುಟದಿಂದ)

"೨. ನಮ್ಮ ದೇಶದಲ್ಲಿ ನಿಯಂತ್ರಣಗಳನ್ನು ವಿದೇಶಗಳಲ್ಲಿನಂತೆ ಸಾಮಾಜಿಕ ನ್ಯಾಯಕ್ಕೆ ಪೋಷಕವಾಗುವಂತೆ ಸಾಗಿಸಿಕೊಂಡುಹೋಗುವದು ಅಸಾಧ್ಯ. ಏಕೆಂದರೆ ಇಲ್ಲಿ ಜನರು ಬಳಸುವ ಸಾಮಗ್ರಿಗಳ ಪ್ರಮಾಣವೂ ವೈವಿಧ್ಯವೂ ಒಂದು ಪ್ರಾಂತದಲ್ಲಿರುವಂತೆ ಇನ್ನೊಂದರಲ್ಲಿಲ್ಲ, ಒಂದೇ ಪ್ರಾಂತದಲ್ಲಿ ಕೂಡ ಒಂದು ವರ್ಗದಂತೆ ಇನ್ನೊಂದರಲ್ಲಿಲ್ಲ. ಜನಸಂಖ್ಯೆಯ ಆಧಾರದ ಮೇಲೆಯೆ ಎಲ್ಲ ನಿಯಂತ್ರಣಗಳನ್ನು ನಡೆಸಿಕೊಂಡು ಹೋದರೆ, ಭಾರತದಲ್ಲಿ ಕೊರತೆಗಳು ಶಾಶ್ವತವಾಗಿ ಉಳಿಯುವವು. ಮತ್ತು ಅನಂತ ಕಾಲದ ವರೆಗೆ, ಅಥವಾ ಏನಿಲ್ಲೆಂದರೂ ಉತ್ಪಾದನೆ ಹೆಚ್ಚುವವರೆಗೆ ನಿಯಂತ್ರಣಗಳುಉಳಿಯಬೇಕಾದೀತು. ಆ ಉತ್ಪಾದನೆಯ ಹೆಚ್ಚಳ ಎಂದಿಗೆ ಕೈಗೂಡೀತೋ ಯಾರು ಬಲ್ಲ? ಮೇಲಿನ ಮಾತಿಗೆ ಆಹಾರ, ವಸ್ತ್ರ ಮತ್ತು ಸಕ್ಕರೆ ನಿಯಂತ್ರಣಗಳೇ ಸಾಕ್ಷಿ.

"೩. ಜನತಾ ಸಹಕಾರ: ನಿಯಂತ್ರಣಗಳು ನಿಜವಾಗಿ ದರಿದ್ರರಾದವರಿಗೆ ಯೋಗ್ಯವಾಗಿ ಪೂರೈಕೆಗಳನ್ನು ಒದಗಿಸುವ ಬದಲು ದೇಶದಲ್ಲಿ ನೂರಕ್ಕೆ ೯೦ರಷ್ಟಿರುವ ಬಡವರನ್ನು ನೀತಿಭ್ರಷ್ಟರನ್ನಾಗಿ ಮಾಡಿವೆ. ಬಾಂಧವ್ಯಭಾವನೆಯಾಗಲಿ ನಾಗರಿಕಕರ್ತವ್ಯಬುದ್ಧಿಯಾಗಲಿ ಅವರಲ್ಲಿ ನಿಶ್ಶೇಷವಾಗಿ ಅಳಿದು ಹೋಗಿರುವ ಮೂಲಕ ಅವರು ತೀರ ಕೆಳಮಟ್ಟಕ್ಕಿಳಿದು ಹೋಗಿದ್ದಾರೆ. ಅವರಿಂದ ಯಾವ ಸಹಕಾರವನ್ನೂ ಅಪೇಕ್ಷಿಸುವದು ವ್ಯರ್ಥ. ಇಷ್ಟು ಜನರೆಲ್ಲ ಕಳ್ಳಪೇಟೆಯಲ್ಲಿ ತೊಡಗಿದ್ದರೆ ಯಾವ ನಿಯಂತ್ರಣಗಳೂ ಸುಕ್ಷಮವಾಗಿ ಸಾಗಲಾರವು.

ನಿಯಂತ್ರಣಗಳ ಮೂಲೋತ್ಪಾಟನೆಯಾಗಲಿ

"ನನ್ನ ಅಭಿಪ್ರಾಯದಲ್ಲಿ, ನಾಣ್ಯನಿಸಿ ನಿಯಮ, ನಿಯಂತ್ರಣ, ರೇಲ್ವೆ ಪೂರ್ವಪ್ರಾಶಸ್ತ್ಯ ಇತ್ಯಾದಿಗಳನ್ನೊಳಗೊಂಡು ಸಮಸ್ತ ನಿಯಂತ್ರಣಗಳನ್ನೂ ಬೇರುಸಹಿತ ಕಿತ್ತು ಪುನಃ ಎಂದೆಂದೂ ಪಡೆ ಸೇರದಂತೆ ಸಮುದ್ರ ಮಧ್ಯದಲ್ಲಿ ಕಲ್ಲುಕಟ್ಟಿ ಮುಳುಗಿಸಿ ಬಿಡಬೇಕು! ಇದರಿಂದ ಸರಕಾರದ ಭಂಡಾರಕ್ಕೆ ಕೋಟ್ಯಂತರ ರೂ. ಉಳಿಯುವವು, ಲಂಚಗುಳಿತನಕ್ಕೆಡೆಗೊಡುವ ಎಲ್ಲ ಸಂದಿಗೊಂದಿಗಳನ್ನು ಮುಚ್ಚುವದು ಮತ್ತು ಅತಿಪ್ರಸರಣದ ಧಾರೆ ಬತ್ತಿಹೋಗು [illegible]

[illegible] ಬೇಡಿರೆಂದು ಸರಕಾರದವರು [illegible] ಜನರ ಮನವೊಲಿಸಬೇಕು."

[illegible] ಹೆಸರನ್ನು ಅವರ ಅಪೇಕ್ಷೆಯ [illegible] ಗುಪ್ತವಾಗಿಟ್ಟಿದ್ದೇವೆ. ನನ್ನ [illegible] ನಾನು ಹೇಳಿದಂತೆ ಅವರು ಹೇಳಿದ್ದರಲ್ಲಿ [illegible] ಭಾಗವನ್ನು ನಾನು ಒಪ್ಪುವೆ. [illegible] ಗಳನ್ನು ಬದಿಗಿಟ್ಟರೂ ನಮ್ಮ [illegible] ಕಾರ್ಯಗಳಿಂದ ಜನರ ನಡತೆಯ [illegible] ಪರಿಣಾಮಕ್ಕೆ ನಾನು ಎಲ್ಲಕ್ಕಿಂತ [illegible] ತ್ತಕೊಡುತ್ತೇನೆ, ನಿಯಂತ್ರಣಗಳು ಅಧಿಕಾ[illegible] ಗಳನ್ನೊಳಗೊಂಡು ಇಡಿ ರಾಷ್ಟ್ರವನ್ನೇ [illegible] ಗೆಡಿಸಿವೆಯೆಂಬಲ್ಲಿ ಸಂದೇಹವೇಇಲ್ಲ. [illegible] ನಿರಾಹಾರ. ನಿರ್ವಸ್ತ್ರತೆಗಳಿಗಿಂತಲೂ [illegible] ಸಂಗತಿ.

ಆದರೆ ಇಂಥ ಸಮಸ್ಯೆಗಳು ಅನೇಕ [illegible] ಬಗಳಲ್ಲಿ ಕೂಡ ಉದ್ಭವಿಸುತ್ತವೆ. [illegible] ಕತೆ ಸರ್ವವಿದಿತ. ಪಗಡೆಯಾಡಲು [illegible] ಕ್ಷತ್ರಿಯನಾದವನು ಆಮಂತ್ರಣವನ್ನು [illegible] ಸ್ಕರಿಸುವದು ಭೂಷಣವಲ್ಲೆಂದು [illegible] ನು ತಿಳಿದಿದ್ದನು. ಅವನ ತಮ್ಮಂದಿರಾದ [illegible] ಹಾಗೆ ಭಾವಿಸಿತಲಿಲ್ಲ. ಆದರೂ ಧರ್ಮರಾಜನಿಗೆ ವಿಧೇಯರಾಗಿರುವದಲ್ಲದೆ ಅವರಿಗೆ [illegible] ಮಾರ್ಗವಿದ್ದಿಲ್ಲ. ಭೂಷಣಾಭೂಷಣಗಳನ್ನು ಕುರಿತು ಧರ್ಮರಾಜನಲ್ಲಿದ್ದ ತಪ್ಪುಕಲ್ಪನೆಯ ದುಷ್ಫಲ ಎಂಥ ಭಯಂಕರವಾಯಿ[illegible] ಇತಿಹಾಸವೇ ಮಹಾಭಾರತ. ನಮ್ಮ [illegible] ಹಾಗೆಯೆ. ನಮ್ಮ ರಾಷ್ಟ್ರಕುಟುಂಬದ [illegible] ಯರು ಪ್ರಾಮಾಣಿಕರು, ನಿಸ್ವಾರ್ಥರು, [illegible] ಗಳು, ಸಮರ್ಥರು; ಅವರನ್ನು ಬಿಟ್ಟರೆ [illegible] ಬೇರೆ ದಿಕ್ಕಿಲ್ಲ, ಕೆಲಸ ಮಾಡಿಮಾಡಿ [illegible] ವರು, ಅವರ ಸುತ್ತಲೂ ಅನಿರೀಕ್ಷಿತ [illegible] ತೊಂದರೆಗಳು ಬಂದುಕೂಡಿವೆ. ನಮಗೆ ಅವರಲ್ಲಿ ನಂಬಿಕೆಯುಂಟು, ಪ್ರೀತಿಯುಂಟು, ಅವರೇ ಬೇಕೆಂದುಂಟು. ಆದರೆ ಅವರ ಕೆಲವು ವಿಚಾರಗಳೂ ಕಾರ್ಯಗಳೂ ಕೇವಲ ತಪ್ಪು, ಕುಟುಂಬದ ಹಿತಕ್ಕೆ [illegible] ವಾದವು ಎಂದು ಎಲ್ಲ ಕಿರಿಯ ಬಂಧುಗಳು ಮನಗಂಡಿರಬಹುದು. ಆದರೆ [illegible] ಮನಸು ಬದಲಾಗುವ ವರೆಗೆ ನಮಗೆ ಬೇರೆ ಹಾದಿಯಿಲ್ಲ. ನಮ್ಮ ಮಾತುಗಳಿಂದ ಅವರು ಮನಸು ಬದಲಿಸದಿದ್ದರೆ ಅನುಭವದಿಂದ, ಹಾನಿಯಿಂದ ಬುದ್ಧಿಗಲಿಯಬೇಕಾಗುವದು. [illegible] ವರೆಗೆ ನಾವು ಅವರೊಡನೆ ಸಹಕರಿಸುತ್ತ, ಸಂಗಡಲೇ ನಮ್ಮ ಅಭಿಪ್ರಾಯಗಳನ್ನು ಅವರ ಮುಂದೆ ಬಲವತ್ತರವಾಗಿ ಮಂಡಿಸುತ್ತಿರಬೇಕು. ಇದಲ್ಲದಿದ್ದರೆ [illegible] ನಿಷ್ಠುರತೆಯಿಂದಲೂ ಅವರನ್ನು [illegible] ಹೊಂದಲು ಕೇಳಿಕೊಂಡು ಧೈರ್ಯದಿಂದ [illegible] ಳಿತವನ್ನು ನಾವೇ ವಹಿಸಿಕೊಳ್ಳಬೇಕು. ಇಂಥ ಸಂಗತಿಗಳು ಕುಟುಂಬದಲ್ಲಿಯೂ ವ್ಯಾಪಾರ ಸಂಸ್ಥೆಗಳಲ್ಲಿಯೂ ಸಂಧಿಕಾಲಗಳಲ್ಲಿ ಉತ್ಪನ್ನವಾಗುವದು ವಿರಳವಲ್ಲ, ರಾಷ್ಟ್ರವೆಂದರೆ ಒಂದು ದೊಡ್ಡ ಕುಟುಂಬವಲ್ಲವೆ?

ಮುಂಬಯಿ, ೨೪-೧೨-೪೮

— [illegible]



ಆಟದ ಆಟ: [illegible]

ರೂಪರಂಗ

ಚಲಚಿತ್ರ ಪ್ರಪಂಚದ ಅಧೋಗತಿ

[illegible]


ನಿಜಕಲೆ

[illegible]

ಪರಸ್ತ್ರೀ ಪರಪುರುಷರ ಅಂಗಸೌಂದರ್ಯ ವತ್ತ ಬಾಯಿ ನೀರು ಕರೆವಂತೆ ಪ್ರೇಕ್ಷಕರನ್ನು ಪ್ರಚೋದಿಸುವ ಕಾಮೋತ್ತೇಜಕ ನೃತ್ಯ, ಗೀತ, ಅಭಿನಯ, ಸಂವಾದ, ವೇಷ, ಭೂಷಣ, [illegible] ಪಾತ್ರಗಳನ್ನು [illegible] ತರುವ ದುರ್ನಯಕ್ಕೆ ಏನೆನ್ನಬೇಕು? ಅಳ ಬೇಕಾದ ಸ್ಥಳದಲ್ಲಿ ನಗುವ, ಬೀಭತ್ಸ ನಗ್ನ ವೇಷವನ್ನು ಶೃಂಗಾರವೆಂದು ತಿಳಿವ, ಕರುಣೆ ತೋರಬೇಕಾದಲ್ಲಿ ಭಯಪ್ರದರ್ಶನ ಮಾಡುವ [illegible] ರಸಾಭಾಸಕ್ಕೆ [illegible] ಬೆಚ್ಚಾಗಿದೆ.

ಅಪಾಯಕರ ಮಾಧ್ಯಮ

[illegible] ಇಂಥ ಚಿತ್ರಾಭಾಸಗಳ ಅವಲೋಕನದಿಂದ [illegible] ಅಸತ್ಯದರ್ಶನರೂ ಹೊಟ್ಟೆಗೇಡಿಗಳೂ ಅತಿಕಾಮಿಗಳೂ ಸ್ವಪರ [illegible] ಬಂದಿರುವುದು [illegible] ವಂತರಿಗೆ ತಿಳಿಯದ ವಿಷಯವಲ್ಲ. ಆದುದರಿಂದ [illegible] ಈಗ [illegible] ಅಪಾಯಕರವಾದ ಶಿಕ್ಷಣ ಮಾಧ್ಯಮವಾಗಿ ಬಿಟ್ಟಿದೆ. ಇದನ್ನು ಕಂಡು ನಮ್ಮ ಸರಕಾರದವರು ನಿರಾಶ್ರಿತರ ಸಮಸ್ಯೆ, ಆಹಾರ ಪ್ರಶ್ನೆ ಮುಂತಾದವುಗಳನ್ನು ಬಿಡಿಸಲು ಹೇಗೆ ಬೇರೆ ಬೇರೆ ಮಂತ್ರಶಾಖೆಗಳನ್ನು ರಚಿಸಿರುವರೋ ಹಾಗೇ ಈ ಸಿನೆಮಗಳ ಬಗ್ಗೂ ಒಂದು ಮಂತ್ರಶಾಖೆಯನ್ನು ನಿರ್ಮಿಸಿ ಕೂಡಲೇ ಅವನ್ನು ರಾಷ್ಟ್ರೀಕರಿಸುವುದು ಅಗತ್ಯವಿದೆ.



ಕುಲದೀಪ ಪಿಕ್ಚರ್ಸ 'ಚುನೇರಿ'ಯ ಚಿತ್ರದಲ್ಲಿ ರಣಧೀರನು ಶೋಭಿಯಳ ಸೆರಗನ್ನು ಹಿಡಿದುಕೊಂಡು ಕುಳಿತಿರುವುದು. ಅವರಿಗೆ ಬಹುಶಃ ನಳದಮಯಂತಿ [illegible] ಕಥೆ [illegible]?

ಕಲೆ ಕಲೆಗಾಗಿ ಅಲ್ಲ, ಜೀವನಕ್ಕಾಗಿ ಎಂಬುದನ್ನು ಸಾಮಾಜಿಕನಾಗಿ ಜೀವಿಸುವ ಪ್ರತಿಯೊಬ್ಬನೂ ಮನಗಾಣಬೇಕು. ಚಲಚಿತ್ರಾದಿ ಕಲೆಗಳು ಎಂಥ ಪರಿಣಾಮಿಯಾದ ಸಾಧನಗಳು. ಅವನ್ನು ಸಮಾಜದ ಹಿತವಾಗುವಂತೆ ಹೇಗೆ ಬಳಸಿಕೊಳ್ಳಬೇಕು ಎಂಬ ಅಂಶವನ್ನು ಗಮನಿಸಬೇಕು. ರಾಷ್ಟ್ರದ ನೈತಿಕ ಅಧಃಪಾತ ಈಗಾಗಲೇ ಆಗುತ್ತ ಸಾಗಿದೆ. ಹೀಗೇ ಬಿಟ್ಟರೆ ಇನ್ನು ಹದಿನೈದೇ ವರುಷಗಳಲ್ಲಿ ಇಡೀ ಹಿಂದುಸ್ಥಾನವು ಅಂಧಂತಮಸ್ಸಿನಲ್ಲಿ ಬಿದ್ದು ಸರ್ವನಾಶ ಸಂಭವಿಸುವಂತಾಗದಿರದು. ಸ್ವತಂತ್ರ ವ್ಯಾಪಾರದ ಹೆಸರಿನಲ್ಲಿ ಸಿನೆಮ ವ್ಯಾಪಾರಿಗಳು ರಾಷ್ಟ್ರೀಕರಣವನ್ನೇ ಏಕೆ, ಯಾವ ನಿಯಂತ್ರಣವನ್ನು ಅನುಮೋದಿಸರು. ಆದರೆ ಇವರನ್ನು ಪ್ರಸನ್ನೀಕರಿಸಿಕೊಳ್ಳುವುದಕ್ಕೋಸ್ಕರ ರಾಷ್ಟ್ರ ಹಿತವನ್ನು ಕಡೆಗಣಿಸಿದರೆ ನಮ್ಮಷ್ಟು ಮೂಢರಾರೂ ಇರರೆಂದಾದೀತು.

ಮೇಲಿನದು ಯಾರ ಅಭಿಪ್ರಾಯವಾದರೆಂದು ತಿಳಿದಿರಿ? ಕ್ಷುದ್ರನೂ, ಮತ್ಸರಗ್ರಸ್ತನೂ ಸಂಕುಚಿತ ಮನೋವೃತ್ತಿಯವನೂ ಆದ ಯಾವನೋ ಒಬ್ಬ ಪೌರಾಣಿಕ ಸನಾತನಿಯ, ಸೊಟ್ಟ ಮೋರೆಯ ನುಡುನುಡಿಗಳೆಂದು ಗ್ರಹಿಸಿದಿರಾ? ಹಾಗೆಂದರೆ ನೀವು ತಪ್ಪಿದಿರಿ. ಅದು ಚಲಚಿತ್ರ ನಿರ್ಮಾಪನ, ದಿಗ್ದರ್ಶನ ಮುಂತಾದ ಕಲೆಗಳಲ್ಲಿ ಅವಿಶ್ರಾಂತವಾಗಿ ದುಡಿದು ಸುಪ್ರಸಿದ್ಧಿಯ ಪಟ್ಟವನ್ನು ಏರಿನಿಂತ ಶ್ರೀ ವಿ. ಶಾಂತರಾಮರ ಕರುಣ ಸಂತಾಪದ ನಿರ್ಧಾರ. ವಾಚ್ಯತಃ ಕಟುವಾಗಿ ಕಂಡರೂ ಪರಿಣಾಮತಃ ಮಧುರವಾಗಿರುವ ಮೇಲಿನ ಅಭಿಪ್ರಾಯವನ್ನು ಚಲಚಿತ್ರಾಸಕ್ತರು ಓದಿ, ಮನನ ಮಾಡಿ, ನಿಧಿಧ್ಯಾಸದಲ್ಲಿ ಇಟ್ಟುಕೊಳ್ಳುವುದಲ್ಲದೆ ಚಲಚಿತ್ರದ ಉದ್ಧಾರಕ್ಕಾಗಿ ದುಡಿಯುವುದು ಅಗತ್ಯ. ಅದು ಸಾಧ್ಯವಾಗದಲ್ಲಿ ಚಿತ್ರದರ್ಶನವನ್ನು ವರ್ಜ್ಯ ಮಾಡಬೇಕು.

— ಚಿತ್ರಭಾನು

ನಾಗರಿಕತೆಯ ಬುಡಕ್ಕೆ ಕೊಡಲಿ

[illegible]

ಜೇನಿನ ವ್ಯವಸಾಯ

—ಶ್ರೀ ವಿ. ಜಿ. ಭಟ್ಟ—

(ಹೊನ್ನಾವರದ ಜೇನಿನ ಸುಪರ್‌ವ್ಹಾಯಜರರಾದ, ಶ್ರೀ ಗಣೇಶ ಭಟ್ಟರು ತಮ್ಮ ಎರಡು ವರ್ಷಗಳ ಅನುಭವದಿಂದ ಬರೆದು ಕಳುಹಿಸಿದ ಲೇಖನದ ಸಾರವನ್ನು ಇಲ್ಲಿ ಕೊಟ್ಟಿದ್ದೇನೆ. ಲೇ)

ಹೊಸ ಪದ್ಧತಿಯಿಂದ ಜೇನು ಸಾಕುವದು, ಹುಳುಹುಪ್ಪಟೆಗಳಿಗೆ ಕೆಡಕಾಗದಂತೆ ಜೇನು ತೆಗೆಯುವದು, ಜೇನಿನ ವ್ಯವಸಾಯ ಮಾಡುವವರ ಸಂಘ ಕಟ್ಟಿ ಕೆಲಸಮಾಡುವದು— ಇವೆಲ್ಲ ತೀರ ಇತ್ತಲಾಗಿ ಸುರುವಾಗಿವೆ. ಜೇನಿನ ವ್ಯವಸಾಯಗಾರರ ಸಂಘವು ಮಾಡಬೇಕಾಗಿ ಕಾರ್ಯಗಳು ಅನೇಕ. ಹಳ್ಳಿಗಳಲ್ಲಿ ಹೊಸ ರೀತಿಯಿಂದ ಜೇನು ಸಾಕುವದನ್ನು ಪ್ರಚಾರ ಮಾಡಬೇಕು, ಈ ವ್ಯವಸಾಯದ ಶಿಕ್ಷಣ ಕೊಡಬೇಕು, ಸದಸ್ಯರಿಗೆ ಬೇಕಾದ ಸಾಹಿತ್ಯಗಳನ್ನು ಸವಲತ್ತಿನಿಂದ ಒದಗಿಸಿಕೊಡಬೇಕು, ಅವರಲ್ಲಿ ತಯಾರಾದ ಜೇನಿಗೆ ಯೋಗ್ಯ ಪೇಟೆಯನ್ನು ಹುಡುಕಿ ಯೋಗ್ಯ ದರವನ್ನು ಕೊಡಿಸಬೇಕು. ಇದಕ್ಕಾಗಿ ಹಳ್ಳಿಗಳ ಗುಂಪು ಮಾಡಿ, ಕೆಲಸಗಾರರನ್ನು ನೇಮಿಸಬೇಕಾಗುತ್ತದೆ. ಒಂದು ಮುಖ್ಯ ಕಚೇರಿ, ಅಲ್ಲಿ ಒಬ್ಬ ವ್ಯವಸ್ಥಾಪಕ ಮತ್ತು ಕಾರ್ಯದರ್ಶಿಗಳು ಅಗತ್ಯ. ಇದಲ್ಲದೆ ಹಳ್ಳಿಹಳ್ಳಿಗಳಲ್ಲಿಯ ಸದಸ್ಯರು ಕೂಡಿಸಿ ತಂದುಕೊಡುವ ಜೇನನ್ನು ಕಾಯಿಸಿ ಬಹುಕಾಲ ಬರುವಂತೆ ಮಾಡಲು (Ripening), ಅವುಗಳನ್ನು ಬಾಟ್ಲಿ ಡಬ್ಬಿಗಳಲ್ಲಿ ಹಾಕಿ ಬಾಯಿ ಮುಚ್ಚುವದು (Seaeing), ಮೇಲ್ಚೀಟಿ ಹಚ್ಚುವದು (Labelling), ಇವುಗಳಿಗಾಗಿ ಕೆಲಸಗಾರರು ಬೇಕಾಗುತ್ತಾರೆ. ಇವರನ್ನೆಲ್ಲ ಸಂಘವು ನೇಮಿಸಿಕೊಳ್ಳಬೇಕಾಗುತ್ತದೆ.

ಹಳ್ಳಿಗರಿಗೆ ತಿಳಿಹೇಳಬೇಕು

ಸುರುವಿನಲ್ಲಿ ಹಳ್ಳಿಗೆ ಹೋಗಿ ರೈತರಿಗೆ ಪೂರ್ವಕಾಲದಿಂದ ನಡೆದು ಬಂದ ಜೇನು ತೆಗೆಯುವ ಕ್ರಮಗಳಲ್ಲಿರುವ ದೋಷಗಳನ್ನು ತಿಳಿಯಪಡಿಸಿ, ಹೊಸ ಪದ್ಧತಿಯಿಂದ ಜೇನು ಸಾಕಿ ಲಾಭ ಪಡೆಯಬರುತ್ತದೆಂಬುದನ್ನು ಮನವರಿಕೆ ಮಾಡಿಕೊಟ್ಟು ಮುಂಗಡ ಹಣ ಕೇಳದೆ ಪೆಟ್ಟಿಗೆಯನ್ನು ಕೊಟ್ಟು, ಜೇನು ಹುಳ ಹಿಡಿದು ಅದರಲ್ಲಿ ತುಂಬಿ ಕೊಟ್ಟು, ಅವರಿಗೆ ರೂಢಿಯಾಗುವ ವರೆಗೆ ಮೇಲಿಂದಮೇಲೆ ಹೋಗಿ ಬಂದುಮಾಡಬೇಕಾದ ಕೋಲಂಬಸ ಸಾಹಸದ ಮೇಲೆ ಸಂಘದ ಮತ್ತು ಉದ್ಯಮಗಳ ಯಶಸ್ಸು ನಿಂತಿದೆ. ಹಳ್ಳಿಗಳಿಗೆ ಹೋಗಿ ಇವನ್ನೆಲ್ಲ ಮಾಡುವವರೇ ಗಂಡು ಜೇನ್ನೊಣಗಳಿಗಾಗಿ ಬಿಟ್ಟರೆ ಸಂಘದ ವ್ಯವಸ್ಥಾಪಕನು ಕಾಗದದ ಕುದುರೆಗಳನ್ನು ಎಷ್ಟು ಓಡಿಸಿದರೂ ಪ್ರಯೋಜನವಾಗದು. ಒಮ್ಮೆ ಹಳ್ಳಿಗರಿಗೆ ಆಸ್ಥೆ ಹುಟ್ಟಿ ಈ ವ್ಯವಸಾಯದ ಜ್ಞಾನವಾಯಿತೆಂದರೆ ಕೆಲಸ ಸುಗಮವಾಗುತ್ತದೆ; ನಿಸರ್ಗದ ದಯೆ, ಸುತ್ತಲಿನವರ ಸಹಕಾರಗಳಿದ್ದರೆ ಸಂಘವು ಬೆಳೆಯುವದು ಕಠಿಣವಲ್ಲ.

ಸಂಘದ ಕೆಲಸಗಾರರು ಕೊಡುವ ಸಲಹೆ ಸಹಾಯಗಳಿಗಾಗಿ ರೈತ ಸದಸ್ಯನು ಗೂಡುಗಳ ಜೇನಿನ ಕೆಲ ಭಾಗವನ್ನು ಸಂಘಕ್ಕೆ ಕೊಡಬೇಕಾಗುತ್ತದೆ. ರೈತನು ತನ್ನ ಉಪಯೋಗಕ್ಕೆ ಬೇಕಾಗುವಷ್ಟು ಜೇನನ್ನು ಇಟ್ಟುಕೊಂಡು ಉಳಿದದ್ದನ್ನು ಸಂಘಕ್ಕೆ ಮಾರಾಟಕ್ಕಾಗಿ ಕೊಡಬೇಕಾಗುತ್ತದೆ. ಇವುಗಳ ಮಾರಾಟದಿಂದ ಬರುವ ಕಮೀಶನ್ನಿನಿಂದ ಮತ್ತು ಸದಸ್ಯರಿಂದ ಸಲ್ಲುವ ಭಾಗಗಳಿಂದ ಕಚೇರಿಯ ಖರ್ಚು, ಬಾಡಿಗೆ, ನೌಕರರ ಸಂಬಳ ಇವನ್ನೆಲ್ಲ ನಡೆಸಬೇಕು. ಮೊದಮೊದಲಿಗೆ ಸಾಕಷ್ಟು ಕಮಿಶನ್ ಹುಟ್ಟದೆ ಸಹಾಯಕ್ಕಾಗಿ ಸರಕಾರಕ್ಕೆ ಬೇಡಿಕೊಳ್ಳಬೇಕಾಗುತ್ತದೆ. ತನ್ನ ಗೂಡುಗಳ ಪೂರ್ಣ ಕೆಲಸವನ್ನು ತಾನೇ ನೋಡಿಕೊಳ್ಳುವ ಸದಸ್ಯನು ಸಂಘಕ್ಕೆ ಕಮಿಶನ್ ಕೊಡಬೇಕಾಗಿಲ್ಲ. ಇಂಥವನು ತರುವ ಜೇನುತುಪ್ಪವನ್ನು ಸಂಘವು ಯಾವ ಕಮಿಶನ್ ತೆಗೆದುಕೊಳ್ಳದೆ, ನಿರ್ದಿಷ್ಟಪಡಿಸಿದ ದರ ಕೊಟ್ಟುಬಿಡಬೇಕಾಗುತ್ತದೆ. ದರವನ್ನು ನಿರ್ದಿಷ್ಟಪಡಿಸುವಾಗ ಸಂಘವು ಈ ಕೆಳಗಿನ ಸಂಗತಿಗಳನ್ನು ಲಕ್ಷದಲ್ಲಿ ಇಟ್ಟುಕೊಳ್ಳಬೇಕು.

ಕೆಲಸದ ವಿಧಾನ

(೧) ಸದಸ್ಯರಿಂದ ಬರುವ ತುಪ್ಪವು ಕಚ್ಚಾ ಇರುತ್ತದೆ. ಅದನ್ನು ಮಿಕ್ಕ ವ್ಯಾಪಾರಿಗಳಂತೆ ಬಲಗೈಯಿಂದ ಕೊಂಡು ಎಡಗೈಯಿಂದ ಮಾರಲು, ಮಾರಿಬಿಡಲು ಬರುವದಿಲ್ಲ. ಅಳೆಯುವದು, ತುಂಬುವದು, ಕಾಯಿಸುವದು "ಸೀಲ್" ಮಾಡುವದು ಇವೆಲ್ಲವುಗಳಿಗಾಗಿ ಮಾರಾಟದ ದರದಿಂದ ೪./· ದಷ್ಟನ್ನು ಸಂಘವು ಇಟ್ಟುಕೊಳ್ಳಬೇಕಾಗುತ್ತದೆ.

(೨) ಅಳೆಯುವಾಗ, ತುಂಬುವಾಗ ಕೆಲ ಮಟ್ಟಿಗೆ ಕಡಿಮೆಯಾಗುವ ಜೇನಿಗಾಗಿ, ಸ್ಯಾಂಪಲ್‌ಗಳಿಗಾಗಿ ೩./· ದಷ್ಟನ್ನು ಸಂಘವು ಕಾದಿಡಬೇಕಾಗುತ್ತದೆ.

(೩)	ಕಚೇರಿಯ ಸ್ವಚ್ಛತೆ, ಇತರ ಕಿರುಕಳ ಗಿರಾಕಿಗಳಿಗೆ ಕೊಡಬೇಕಾದ ಆವರಣ ಇವುಗಳ ಬಗ್ಗೆ	೧./
(೪)	ಬಾಡಿಗೆ, ಸ್ಟೇಶನರಿಗಳಿಗಾಗಿ	೧./·
(೫)	ಪ್ರಚಾರಕ್ಕಾಗಿ	೧./·
(೬)	ಸಲಹೆ, ವ್ಯವಸ್ಥೆಗಳಿಗಾಗಿ	೬./·
(೭)	ಲೆಕ್ಕಪತ್ರ ಇಡುವ ಬಗ್ಗೆ	೪ /
(೮)	ಭಾಂಡವಲದ ಮೇಲಿನ ಬಡ್ಡಿ	೬./·
(೯)	ಸವಕಳಿ	೧./·
(೧೦)	ಕಮಿಶನ್	೭./·
(೧೧)	ಸಂಘದ ಮುನಾಫೆ	೨./·

ಇವೆಲ್ಲ ಹೋಗಲಾಗಿ ಸದಸ್ಯರಿಗೆ ನೂರಕ್ಕೆ ೬೪ ರಷ್ಟು ಉಳಿಯುತ್ತದೆ. ಈ ಖರ್ಚು ಯಾವ ರೀತಿಯಿಂದಲೂ ಹೆಚ್ಚಾಗಕೂಡದು.

ಮಾರಾಟಕ್ಕಾಗಿ ಜೇನು ಮುಂಬೈಯಂಥ ಶಹರಗಳಿಗೆ ಹೋಗಬೇಕಾಗುತ್ತದೆ. ನಮ್ಮ ಕಡೆಗೆ ಬೇಡಿಕೆಯಿದ್ದರೂ ಅದು ಸಾಕಷ್ಟು, ಸದಾಕಾಲ ಇರುವದಿಲ್ಲ. ಶಹರಗಳ ವ್ಯಾಪಾರಿಗಳು ಅತಿಯಾಗಿ ಲಾಭ ಪಡೆಯಬಾರದೆಂದು ಒಂದು ಪೌಂಡಿನ ಒಂದು ಬಾಟ್ಲಿಗೆ ದರ ಹಾಕುವಾಗ ಈ ಕೆಳಗಿನ ಲೆಕ್ಕ ಹಾಕಬೇಕು.

(೧) ಪ್ಯಾಕಿಂಗ್, ಲಗೇಜ್, ಇನ್ಶೂರೆನ್ಸ್, ಡಬ್ಬಿ—ಇವುಗಳಿಗಾಗಿ ಮಾರಾಟದ ದರದ ೬./

(೨) ಟೌನ್ ಡ್ಯೂಟಿ, ಲೀಕೇಜ್, ಬ್ರೇಕೆಜ್, ಕೂಲಿ, ಗೋಡೌನ್ ಬಾಡಿಗೆ ವಗೈರೆ ೬./

(೩) ಬಾಟ್ಲಿ, ಅವುಗಳ ಸ್ವಚ್ಛತೆ, ಲೇಬಲ್, ತುಂಬಿಸುವದು, ಸೀಲು ಮಾಡುವದು, ಲೇಬಲ್ ಹಚ್ಚುವದು ಇತ್ಯಾದಿ ೧೪./.

(೪) ತುಂಬಿಸುವದು, ಲೇಬಲ್ ಅಂಟಿಸುವದು ಇತ್ಯಾದಿಗಳ ಮೇಲ್ವಿಚಾರಣೆ ೧./.

(೫)	ಭಾಂಡವಲಿನ ಮೇಲಿನ ಬಡ್ಡಿ	೬./.
(೬)	ಮಾರಾಟದ ಕಮಿಶನ್	೧೫./
(೭)	ಲಾಭ	೨./.

ಇಷ್ಟು ಹೋಗಲಾಗಿ ನೂರಕ್ಕೆ ೫೦ ದಷ್ಟು ಒಂದು ಪೌಂಡು ಜೇನಿನ ಬಗ್ಗೆ ಉಳಿಯುತ್ತದೆ. ಹೀಗೆ ಲೆಕ್ಕ ಹಾಕಿ ಮಾಡಿದರೆ ಯಾರಿಗೂ ಹಾನಿಯಿಲ್ಲ. ಸಂಘದ ಸದಸ್ಯರಾಗಿ ಸಹಕಾರದಿಂದಲೂ ಜಾಣ್ಮೆಯಿಂದಲೂ ದುಡಿದರೆ ಇದರಿಂದ ಅವರ ಉತ್ಪನ್ನ ಹೆಚ್ಚುವುದರಲ್ಲಿ ಸಂಶಯವಿಲ್ಲ.

ಕರ್ನಾಟಕ

ಧಾರವಾಡ

ಹಿರೇಕೆರೂರ ೨೨, ಮುದ್ದೇಬಿಹಾಳ ೨೨, ಹುನಗುಂದ ೩೨, ಬಾಗೇವಾಡಿ ೧೭, ಇಂಡಿ ೭ ಬೈಲಹೊಂಗಲ ೬, ಖಾನಾಪುರ ೪, ನವಲಗುಂದ ೩ ಹುಬ್ಬಳ್ಳಿ ೨, ರೋಣ ೧, ಧಾರವಾಡ ೧ ಬದಾಮಿ ೧ ಹೀಗೆ ಒಟ್ಟು ೧೧೮ ಕುಲಕರ್ಣಿಯರು ರಾಜೀನಾಮೆ ಕೊಟ್ಟಿದ್ದಾರೆ.

ಲಾಯಸೆನ್ಸ ಪಡೆಯದೆ ಹತ್ತಿಯ ಅರಳಿ ವ್ಯವಹಾರ ಮಾಡಿದ್ದಕ್ಕಾಗಿ ರಾಚಪ್ಪ ವೀರಪ್ಪ ಮಡ್ಡಿ ಬ್ಯಾಹಟ್ಟಿ, ಸಂಗಪ್ಪ ರಾಚಪ್ಪ ಕುಬಸದ ಬ್ಯಾಹಟ್ಟಿ, ರಾಜೇಸಾಹೇಬ ನಾಯಕರ ಬ್ಯಾಹಟ್ಟಿ ಇವರಿಗೆ ತಲಾ ೫ ರೂಪಾಯಿ ದಂಡ ವಿಧಿಸಲಾಯಿತು. ಈರವ್ವ ಛಬ್ಬಿ, ಹನುಮಂತಪ್ಪ ದಂಬರಮನಿ, ಬಸಪ್ಪ ಕುಂದಗೋಳ ಇವರಿಗೂ ೫ರೂ ದಂಡವಾಯಿತು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ವಿಶೇಷ ಸಾಧಾರಣ ಸಭೆಯು ಇದೇ ೧೯ ನೇ ತಾರೀಕು ಹರಿಹರದಲ್ಲಿ ಕೂಡುವದು. ಕರ್ನಾಟಕ ಏಕೀಕರಣ ಮತ್ತು ಮೈಸೂರನ್ನೊಳಗೊಂಡ ಪ್ರಾಂತರಚನೆಯ ಪ್ರಶ್ನೆಯನ್ನು ವಿಚಾರಿಸಿ ಅವುಗಳ ರೀತಿ ನೀತಿಗಳನ್ನು ನಿರ್ಧರಿಸುವದು, ಕಾಂಗ್ರೆಸ ಸಂಘಟನೆಯನ್ನು ಬಲಪಡಿಸುವ ಸಂಬಂಧದಲ್ಲಿ ವಿಚಾರ ಮಾಡುವದು ಮೊದಲಾದ ವಿಷಯಗಳನ್ನು ಚರ್ಚಿಸಲು ಈ ಸಭೆ ಸೇರುವದು.

ನಾಗೇಂದ್ರಗಡದ ಹನುಮವ್ವ ಬಾರಿಕೇರ ಇವಳು ೧೮-೧೧-೪೮ ನೇ ದಿನ ಮಲ್ಲಾಪುರ ಸ್ಟೇಶನದಲ್ಲಿ ೧೫ ದಿನಗಳ ಒಂದು ಜೀವಂತ ಕೂಸನ್ನು ಬಿಟ್ಟುಹೋದಳೆಂದು ರೋಣದ ಪೋಲೀಸರು ಅವಳನ್ನು ಬಂಧಿಸಿದ್ದರು. ಆ ಖಟ್ಲೆಯಲ್ಲಿ ಅವಳಿಗೆ ೯ ತಿಂಗಳ ಶಿಕ್ಷೆಯಾಯಿತು.

ಶಿಗ್ಗಾವಿ ತಾಲೂಕಿನ ೧೦೨ ಹಳ್ಳಿಗಳ ಕುಲಕರ್ಣಿಯರು ರಾಜೀನಾಮೆ ಕೊಟ್ಟಿದ್ದಾರೆ.

ಜನೇವರಿ ೭ ರ ವರೆಗೆ ಧಾರವಾಡ ಜಿಲ್ಹೆಯ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯು ೧೨೪೦೪೪-೧೫-೮ ಕೂಡಿದೆ.

ಧಾರವಾಡ ನಗರ ಸಭೆಯ ನವಕರರು ತಮ್ಮ ಸಂಬಳವನ್ನು ಸ್ವೀಕರಿಸದೆ ಸತ್ಯಾಗ್ರಹ ಹೂಡಿದ್ದರಷ್ಟೇ. ಆದರೆ ಉಭಯತರಲ್ಲಿ ಒಡಂಬಡಿಕೆಯಾಗಿ ನವಕರರು ಸಂಬಳವನ್ನು ಸ್ವೀಕರಿಸಿದರು. ಹೊಸ ಸಂಬಳವನ್ನು ಜಾರಿಯಲ್ಲಿ ತರಲು ಉಪಸಮಿತಿ ನೇಮಿಸಬೇಕು, ಸರಕಾರ ಗೊತ್ತುಪಡಿಸಿದಂತೆ ತುಟ್ಟಿಭತ್ತೆ ಮತ್ತು ನಡುಗಾಲ ಪರಿಹಾರವನ್ನು ದಿನವೆರಡು ದಿನಗಳಲ್ಲಿ ಕೊಡಬೇಕು, ಭಂಗೀ ಹೆಣ್ಣುಮಕ್ಕಳ ಸಂಬಳ ಹೆಚ್ಚಿಸಬೇಕು, ಕೆಳ ತರಗತಿ ನೋಕರರಿಗೆ ಕಂಬಳಿ ಪೋಷಾಕುಗಳನ್ನು ಕೊಡಬೇಕು ಮೊದಲಾದ ಕರಾರುಗಳು ಪರಸ್ಪರರಲ್ಲಿ ಆಗಿವೆ.

ಇದೇ ೧೬ನೇ ತಾರೀಕಿನಿಂದ ಈ ಜಿಲ್ಹೆಯಲ್ಲಿ ಪ್ರಾರಂಭನಾಗಲಿದ್ದ ಆಹಾರ ಧಾನ್ಯ ಸೀದಾವನ್ನು ಫೆಬ್ರುಅರಿ ೧ ರ ವರೆಗೆ ಮುಂದುವರಿಸಿದ್ದಾರೆ. ಆದುದರಿಂದ ಈಗಿದ್ದ ಆಹಾರಧಾನ್ಯಗಳ ಲಾಯಸೆನ್ಸದಾರರು ಅಲ್ಲಿಯ ವರೆಗೆ ಧಾನ್ಯಗಳನ್ನು ಮಾರಬಹುದು. ಮತ್ತು ಫೆಬ್ರುಅರಿ ೧ ಕ್ಕೆ ತಮ್ಮಲ್ಲಿದ್ದ ಸಂಗ್ರಹವನ್ನು ಜಿಲ್ಹಾಧಿಕಾರಿಗಳಿಗೆ ತಿಳಿಸಬೇಕು ಎಂದು ಕಲೆಕ್ಟರರು ಪ್ರಕಟನೆ ಹೊರಡಿಸಿದ್ದಾರೆ.

ವಿಜಾಪುರ

ವಿಲೀನ ಹೊಂದಿದ ಮುಧೋಳ ಸಂಸ್ಥಾನದ ಎಡಹಳ್ಳಿ ಭಾಗದ ಪ್ರಾಥಮಿಕ ಶಿಕ್ಷಕರಿಗೆ ಕಳೆದ ಮೂರು ತಿಂಗಳಿಂದ ಸಂಬಳ ಸಿಕ್ಕಿಲ್ಲ ಪ್ರಾಥಮಿಕ ಶಿಕ್ಷಕರಿಗೆ ಮೊದಲೇ ಕಡಮೆ ಸಂಬಳ. ಅಂಥದರಲ್ಲಿ ಮೂರು ಮೂರು ತಿಂಗಳ ಸಿಕ್ಕದಿದ್ದರೆ ಅವರು ಜೀವನ ಸಾಗಿಸುವದೆಂತು ಎಂಬ ಬಗ್ಗೆ ಮೇಲಧಿಕಾರಿಗಳು ವಿಚಾರ ಮಾಡಬೇಕೆಂದು ಓರ್ವರು ತಿಳಿಸುತ್ತಾರೆ.

ಬಾಗಲಕೋಟೆಯಲ್ಲಿ ಸರಕಾರೀ ನೀರಾ ಕೇಂದ್ರದ ಉದ್ಘಾಟನ ೯ ನೇ ತಾರೀಕು ಜರುಗಿತು. ಸರಕಾರೀ ಅಧಿಕಾರಿಗಳೂ ಪ್ರಮುಖರೂ ಉಪಸ್ಥಿತರಿದ್ದರು. ಉದ್ಘಾಟನೆಯ ನಂತರ ಎಲ್ಲರಿಗೂ ನೀರಾ ಹಂಚಲಾಯಿತು.

ಬಾಗಲಕೋಟೆ ತಾಲೂಕಿನ ೯೩ ಹಳ್ಳಿಗಳಲ್ಲಿ ೮೯ ಹಳ್ಳಿಗಳ, ಜೀಳಗಿ ಪೇಠಾದ ೮೨ ಹಳ್ಳಿಗಳಲ್ಲಿ ೭೮ ಹಳ್ಳಿಗಳ ಕುಲಕರ್ಣಿಯರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಪ್ರಾಂತ ಸಾಹೇಬರು ಅವುಗಳನ್ನೆಲ್ಲ ಸ್ವೀಕರಿಸಿ ತಲಾಠಿ ಜನರು ಅರ್ಜಿ ಮಾಡಿಕೊಳ್ಳಬೇಕೆಂದು ಗ್ರಾಮಗಳಿಗೆ ತಿಳಿಸಿರುವರೆಂದು ತಿಳಿಯುತ್ತದೆ.

ವಿಜಾಪುರ ಜಿಲ್ಹಾ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯು ಜನೆವರಿ ೬ ರ ವರೆಗೆ ೬೭೪೭೧ ರೂಪಾಯಿ ಆಗಿರುವದು. ಬಾಗಲಕೋಟೆಯ ಅರ್ಬನ್ ಕೋ ಅಪರೇಟಿವ್ ಬ್ಯಾಂಕಿನವರು ೧೦೧ ರೂಪಾಯಿಗಳನ್ನು ಕೊಟ್ಟಿರುವರು.

ಬೆಳಗಾವಿ

ಬೆಳಗಾವಿ ಜಿಲ್ಹಾ ಗ್ರಾಮೋದ್ಧಾರ ಮಂಡಳದ ವತಿಯಿಂದ ಸಂಪಗಾವಿ ತಾಲೂಕಿನ ಕಿತ್ತೂರಿನಲ್ಲಿ ಜನೆವರಿ ೨೦ ರಿಂದ ಫೆಬ್ರುಅರಿ ೫ ರ ವರೆಗೆ ಗ್ರಾಮಸೇವಕ ವರ್ಗವು ನಡೆಯುವದು ವರ್ಗಕ್ಕೆ ಬರಲಿರುವವರು ೧೫ ನೇ ತಾರೀಕಿನೊಳಗಾಗಿ ಅರ್ಜಿ ಮಾಡಿಕೊಳ್ಳಬೇಕು.

ಸಂಪಗಾವಿ ತಾಲೂಕಿನ ಸಂಗೊಳ್ಳಿಯಲ್ಲಿ ೭ ನೇ ತಾರೀಕು ರಾತ್ರಿ ಹರಿಜನ ಓಣಿಯಲ್ಲಿ ಬೆಂಕಿ ಹತ್ತಿ ೪ ಮನೆಗಳು ಸುಟ್ಟು ಆಡು ಕುರಿದನಗಳು ನಾಶವಾಗಿ ಸುಮಾರು ೧೨೦೦ ರೂ. ಹಾನಿಯಾಗಿದೆ, ಸಂರಕ್ಷಕ ದಳದವರು ಶ್ರಮವಹಿಸಿ ಬೆಂಕಿಯನ್ನು ಆರಿಸಿದರು.

ಬೆಳಗಾವಿ ಜಿಲ್ಹಾ ಲಂಚ ನಿರ್ಮೂಲನ ಶಾಖೆಯ ಅಧಿಕಾರಿಗಳಾದ ಶ್ರೀ ಬಾಳಾಸಾಹೇಬ ಗುಡಿಯವರಿಗೆ ಮುಂಬಯಿ ಸರಕಾರದವರು ಇಂಡಿಯನ್ ಪೋಲೀಸ ಪದಕಗಳನ್ನು ಕೊಟ್ಟಿರುವರು. ಮುಂಬಯಿ ಗವರ್ನರ ಸಾಹೇಬರು ಅವರನ್ನು ಅಭಿನಂದಿಸಿ ಪತ್ರ ಬರೆದಿದ್ದಾರೆ.

ಉತ್ತರ ಕನ್ನಡ

ಹಿಂದೀ ಹದ್ದಿನೊಳಗಿಂದ ಗೋವಾ ಹದ್ದಿಗೆ ದನಗಳ ಕಳ್ಳ ಸಾಗಾಟ ನಡೆದಿದೆ. ಈ ರೀತಿ ಒಟ್ಟು ೧೫ ದನಗಳು ಸಾಗಿಸಲ್ಪಡುತಿರುವಾಗ ಕಸ್ಟಮ ಇನಸ್ಪೆಕ್ಟರ ಪೈಯವರು ಮಾಜಾಳಿಯ ಹತ್ತಿರ ಅವನ್ನು ಜಪ್ತಮಾಡಿ ಮೂರು ಜನರನ್ನು ಈ ಸಂಬಂಧದಲ್ಲಿ ಸೆರೆಹಿಡಿದರು.

ಕಾರವಾರ ಪ್ರಾಥಮಿಕ ಶಾಲಾ ಶಿಕ್ಷಕ ಶಾರೀರಿಕ ಶಿಬಿರದ ಮುಕ್ತಾಯ ಸಮಾರಂಭ ವಿದ್ಯಾಧಿಕಾರಿಗಳಾದ ಶ್ರೀ ಸಾನೆಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಆಗ ಉರುವಕೊಂಡದ ಸ್ವಾಮಿಗಳು ಉಪದೇಶಪರ ನಾಲ್ಕು ಮಾತು ಹೇಳಿದರು.

ಉತ್ತರ ಕನ್ನಡ ಜಿಲ್ಹೆಯಲ್ಲಿ ೨೫-೧೨-೪೮ ರ ವರೆಗೆ ೨೩೩೫-೪-೯ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ ಕೂಡಿರುವದು.

ಉತ್ತರ ಕನ್ನಡ ಜಿಲ್ಹಾ ಸಾಹಿತ್ಯ ಸಮ್ಮೇಲನವು ಕಳೆದ ೮ ನೇ ತಾರೀಕು ಶಂ. ಬಾ. ಜೋಶಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಆಗ ಶ್ರೀ ಜೋಶಿಯವರು ಸೌಂದರ್ಯವಿಚಾರವಾಗಿ ಭಾಷಣ ಮಾಡಿದರು. ಉರುವಕೊಂಡದ ಮಹಾಸ್ವಾಮಿಗಳು ಸಮ್ಮೇಲನವನ್ನು ಪ್ರಾರಂಭಿಸಿ ಕನ್ನಡಿಗರಾದ ನಾವು ಏಕೀಕರಣವನ್ನು ಸಾಧಿಸಲಿಕ್ಕೆ ಬೇಕು, ಅದು ನಮ್ಮ ಸತ್ವವನ್ನವಲಂಬಿಸಿದೆ ಎಂದು ಮುಂತಾಗಿ ಉಪದೇಶಿಸಿದರು.

ಬಳ್ಳಾರಿ

ಬಳ್ಳಾರಿ ಜಿಲ್ಹೆಯ ಉಜ್ಜಯನೀ ಸಿದ್ಧಮಾನ ಪೀಠದ ಸ್ವಾಮಿಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಲಿಂಗೈಕ್ಯರಾಗಿ ಇದೇ ಪುಷ್ಯ ಬಹುಳ ೪ ಗೆ ಹದಿಮೂರು ವರುಷಗಳು ಪೂರ್ಣ ಮುಗಿಯುತ್ತವೆ. ಈ ದಿವಸ ಸಕಲ ವೀರ ಶೈವರು ಆ ಮಹಾತ್ಮರ ಪುಣ್ಯ ದಿನವನ್ನು ವಿಜೃಂಭಣೆಯಿಂದ ಆಚರಿಸಬೇಕಾಗಿ ವೇ. ಸಿ. ಎಂ. ವಿರುಪಾಕ್ಷ ಶಾಸ್ತ್ರಿಗಳು ಹಿರೇಹಡಗಲಿ ಇವರು ಬಿನ್ನವಿಸುತ್ತಾರೆ.

ಕನ್ನಡ ಸಂಸ್ಥಾನ

ಭದ್ರಾವತಿ ನಗರ ಸಭೆಗೆ ಶ್ರೀ ಬಿ ಮಾಧವಾಚಾರ್ಯರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಇವರಿಗೆ ೧೧ ಮತಗಳು ಪ್ರತಿಸ್ಪರ್ಧಿಗಳಾದ ಶ್ರೀ ಖೋಟಿ ಮಲ್ಲಪ್ಪನವರಿಗೆ ೮ ಮತಗಳು ಬಿದ್ದವು. ದಿವಂಗತ ಹಾಲಪ್ಪನವರ ತತ್ವದಂತೆಯೆ ನಡೆಯುವದಾಗಿ ಮಾಧವಾಚಾರ್ಯರು ಚುನಾವಣೆಯ ನಂತರ ಹೇಳಿದರು.

ಕಸ್ತೂರಬಾ ಸಭೆಗಾಗಿ ಅರಸೀಕೇರೆಗೆ ಬಂದಿದ್ದ ಕೇಂದ್ರ ಶಾಸನಸಭೆಯ ಅಧ್ಯಕ್ಷ ಶ್ರೀ ಮಾವಳಣಕರರಿಗೆ ಪುರಸಭೆಯವರು ಮಾನಪತ್ರವನ್ನು ಅರ್ಪಿಸಿದರು. ಮೊದಲು ಇವರನ್ನು ಮತ್ತು ಠಕ್ಕರಬಾಪ್ಪಾ ಇವರನ್ನು ಪ್ರಚಂಡ ಮೆರವಣಿಗೆಯಿಂದ ಕರೆದುಕೊಂಡು ಹೋಗಲಾಯಿತು. ಪುರಸಭೆಯ ಅಧ್ಯಕ್ಷರಾದ ಶ್ರೀ ಕೆ. ಅನಂತನಾಗರಾಜರು ಮಾನ ಪತ್ರವನ್ನು ಓದಿದರು.

ಅರಸೀಕೇರೆಗೆ ಬಂದಿದ್ದ ಅಮೇರಿಕೆಯ ರೆಷ್ಟಿನರು ಅಮೇರಿಕೆಯಲ್ಲಿಯ ವರ್ಣಭೇದದ ಬಗ್ಗೆ ಮಾತಾಡುತ್ತ ನಿಗ್ರೊ ಜನರಿಗಾಗುವ ತೊಂದರೆಗಳನ್ನು ವಿವರಿಸಿದರು.

ದಕ್ಷಿಣ ಕನ್ನಡ

ಇಂಡಿಯಾ ಸರಕಾರದಿಂದ ಅಡಿಕೆ ಸರ್ವೆ ಅಫೀಸರರಾಗಿ ನೇಮಿಸಲ್ಪಟ್ಟ ಶ್ರೀ ಕೆ. ಕೆ. ನಂಬಿಯಾರರು ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ವ್ಯವಸಾಯದ ಕೇಂದ್ರಗಳನ್ನು ದಿನಾಂಕ ೯ರಿಂದ ೨೩ ರ ವರೆಗೆ ಸಂದರ್ಶಿಸುತ್ತಾರೆ. ದಕ್ಷಿಣದ ಅಡಿಕೆಯು ಮುಂಬಯಿ ಸಂತೆಯ ಮೂಲಕ ಉತ್ತರ ಭಾರತಕ್ಕೆ ಹೋಗುತ್ತಿತ್ತು. ಇತ್ತೀಚೆಗೆ ಮುಂಬಯಿಗೆ ಕಳುಹಿಸಲು ರೈಲುಗಾಡಿಗಳಲ್ಲಿ ಕಷ್ಟವಾಗುತ್ತಿತ್ತು. ಇದನ್ನು ಅಧಿಕಾರಿಗಳ ಗಮನಕ್ಕೆ ತಂದುದರ ಪರಿಣಾಮವಾಗಿ ಅಡಿಕೆ ವ್ಯಾಪಾರದ ಬಜಾರಿನ ಸುವ್ಯವಸ್ಥೆಯಾಗುವದಾಗಿ ತಿಳಿದುಬಂದಿದೆ.

ದಕ್ಷಿಣ ಕನ್ನಡ ಹರಿಜನ ಸೇವಕ ಸಂಘದ ವಾರ್ಷಿಕ ಮಹಾಸಭೆಯು ದಿನಾಂಕ ೮ ರಂದು ಡಾ|| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ವರದಿಯನ್ನು ಸಭೆಯು ಸ್ವೀಕರಿಸಿದ ಬಳಿಕ ಶ್ರೀಯುತರಾದ ಡಾ||ಯು.ಪಿ.ಮಲ್ಯರು ಅಧ್ಯಕ್ಷರಾಗಿಯೂ ಎಸ್. ಎಸ್. ಕಿಲ್ಲೆಯವರು ಜಿಲ್ಲಾ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಗತವರ್ಷದಲ್ಲಿ ಸಂಘವು ಹರಿಜನ ವಿದ್ಯಾರ್ಥಿಗಳಿಗಾಗಿ ಸುಮಾರು ೨೧೩೨ ರೂಪಾಯಿಗಳಷ್ಟು ಹಣವನ್ನು ವೆಚ್ಚಮಾಡಿದೆ.

ಮಂಗಳೂರಿನ ಅಂಚೇ ಕೆಲಸಗಾರರ ಸಂಘಗಳ ಸಂಯುಕ್ತ ಸಭೆಯು ದಿನಾಂಕ ೭ ರಂದು ಸಂಜೆ ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಗೆ ಬಂದಿದ್ದ ಅಂಚೇ ಸಂಘಗಳ ಮದ್ರಾಸು ಪ್ರಾಂತಿಕ ಕಾರ್ಯದರ್ಶಿ ಎಂ. ಎ. ಜಬ್ಬಿರರು ತಮ್ಮ ಭಾಷಣದಲ್ಲಿ ಅಂಚೇ ಕೆಲಸಗಾರರು ಮುಷ್ಕರ ಹೂಡುವದು ಅನಿವಾರ್ಯವಾಗಿದೆಯೆಂದರು. ಆ ಮೇಲೆ ಮಾತನಾಡಿದವರು ತಮ್ಮ ಸಂಘಗಳು ಮುಷ್ಕರ ಹೂಡಲು ಸಿದ್ಧವಿವೆ ಎಂಬುದಾಗಿ ತಿಳಿಸಿದರು.

ಮಂಗಳೂರಿನ ರೋಮನ್ ಕೆಥೋಲಿಕ್ ಪಾಯೋನಿಯರ್ ನಿಧಿಯ ೬೦ ನೇ ವಾರ್ಷಿಕೋತ್ಸವವು ತಾ ೨ ರಂದು ಮಂಗಳೂರಿನ ಬಿಷಪ್ಪರಾದ ರೇ|| ಫಾ|| ವಿ. ಆರ್. ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರುಗಿತು.

ಉಳ್ಳಾಲದ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ದಿನಾಂಕ ೩೦ ರಂದು ಒಂದು ಸಾರ್ವಜನಿಕ ಸಭೆಯೂ ವಿನೋದಾವಳಿಗಳೂ ಜರುಗಿದವು. ಹಲವರು ಕಾಂಗ್ರೆಸ್ ಧೋರಣೆಯನ್ನು ವಿವರಿಸಿದರಲ್ಲದೆ ಆರ್ ಎಸ್ ಎಸ್ ದಂತಹ ರಾಷ್ಟ್ರ ವಿಘಾತಕ ಕೂಟಕ್ಕೆ ಯಾರೂ ಬೆಂಬಲನೀಯಬಾರದಾಗಿ ಸಾರಿದರು.

ದಕ್ಷಿಣ ಕನ್ನಡ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಂಘದ ದ್ವಿತೀಯ ವಾರ್ಷಿಕ ಮಹಾಸಭೆಯು ದಿನಾಂಕ ೧ ರಂದು ಮೂಲ್ಕಿಯಲ್ಲಿ ಶ್ರೀ ಎಚ್. ಎಸ್. ಹುಸೇನ್‌ಸಾಹೇಬ್, ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರುಗಿತು. (೧) ಬ್ರಿಟಿಷ್ ಸರಕಾರದ ಕೈಕೆಳಗಿದ್ದ ಅಧಿಕಾರಿಗಳು ಸರಕಾರದ ತತ್ವಕ್ಕೆ ಅನುಸರಿಸಿ ನಡೆಯುವ ಬದಲು ಹಿಂದಿನ ಮನೋವೃತ್ತಿಯನ್ನೇ ಅನುಸರಿಸಿರುವುದನ್ನು ಖಂಡಿಸುವ. (೨) ಈಗಿನ ಸರಕಾರವು ಗ್ರಾಮ ಉದ್ಯೋಗಸ್ಥರನ್ನು ಗ್ರಾಮ ಗುಮಾಸ್ತರೆನ್ನುವಂತಹ ಮಟ್ಟಕ್ಕೆ ತಂದಿರುವದನ್ನು ಖಂಡಿಸುವ. (೩) ಮತ್ತು ತುಟ್ಟಿ ಭತ್ತೆಯು ಸಿಗುವಂತಾಗುವ ಠರಾವುಗಳು ಸ್ವೀಕೃತವಾದವು.

ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯ ಸಭೆಯು ದಿನಾಂಕ ೧ ರಲ್ಲಿ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ರಾಜಕೀಯ ಸಂತ್ರಸ್ತರಿಗೆ ಫಲವತ್ತಾದ ಜಮೀನುಗಳು ಬೇಗನೇ ಸಿಗುವಂತಾಗಬೇಕು. ಆರ್ ಎಸ್ ಎಸ್ ಕೂಟಕ್ಕೆ ತಮ್ಮ ಮಕ್ಕಳು ಸೇರದಂತೆ ಹೆತ್ತವರು ಜಾಗ್ರತೆಯಿಂದಿರಬೇಕು. ಸ್ಟೋರ್ಸು ಡಿಪೋಗಳಿಗೆ ರೈತರು ಅಕ್ಕಿ ಹಾಕಿದಾಗಲೇ ಅವರಿಗೆ ಹಣ ಕೊಡಬೇಕು, ಎಂದು ಕೇಳುವ ಠರಾವುಗಳಾದವು.

ಕಾಂಪಾಪುರದ ಐಲು ಮಂದಿ ಆರ್ ಎಸ್ ಎಸ್ ಕಾರ್ಯಕರ್ತರಿಗೆ, ಉಡ್ಪಿಯ ಸ್ಪೆಶಲ್ ಫರ್ಸ್ಟ್‌ಕ್ಲಾಸ್ ಮೆಜಿಸ್ಟ್ರೇಟರು ಪ್ರತಿಯೊಬ್ಬರಿಗೂ ಎರಡೆರಡು ತಿಂಗಳುಗಳ ಸಾದಾ ಶಿಕ್ಷೆಯನ್ನು ವಿಧಿಸಿದ್ದಾರೆ.

ಟೆಲಿಗ್ರಾಫ್ [illegible] ಡೆಪ್ಯುಟಿ ಡಿರೆಕ್ಟರ್ ಜನರಲ್ (ಹೊಸದಿಲ್ಲಿ) ಆಗಿರುವ ರಾವ್ ಬಹಾದೂರ್ ಪಿ. ಎಸ್. ಎಂ. ಸುಂದರಂ‑ [illegible]

೧೯೪೯ ರಲ್ಲಿ ಜಗತ್ತಿನ ಗ್ರಹಗತಿಯೇನು?

([illegible])

ಫ್ರಾನ್ಸ್ [illegible] ಕ್ರಾಂತಿಯಾಗುವ ಭಯವಿದೆ.

[illegible] ಪ್ರಭಾವ [illegible] ಉರುಳಬಹುದೆನ್ನುತ್ತಾರೆ. [illegible] "ಉದಾರ"ವಾದ ಸರಕಾರ [illegible] ದ್ದಾರೆ. ಗ್ರೀಸ್ ಮತ್ತು ಜರ್ಮನಿಯ ವಿಷಯದಲ್ಲಿ ಪ್ರಬಲ ರಾಷ್ಟ್ರಗಳೊಳಗೆ [illegible] ಬೆಳೆದರೂ ಬರ್ಲಿನ್ನಿನ ವಿಷಯದಲ್ಲಿ [illegible] ರೊಂದು ನಿರ್ಣಯವಾಗುವದರಿಂದ [illegible] ವಾಗುವ ಸಂಭವವಿಲ್ಲ.

ಜರ್ಮನಿಗೆ ಸುಯೋಗ

ಸುತ್ತಲಿನ ವಿಪನ್ನತೆ ಮತ್ತು ವೈಮನಸ್ಯ [illegible] ಸ್ಥಿತಿಗತಿಗಳ ಲಾಭ ಪಡೆದು ಜರ್ಮನಿ [illegible] ತಲೆಯೆತ್ತಲೆಳಸುವದು. ಈ ವರ್ಷ ಅದಕ್ಕೆ ಪ್ರಸನ್ನಕಾಲವಾಗಿದೆ.

ಅಮೇರಿಕೆಯಲ್ಲಿ ಅಧ್ಯಕ್ಷ ಟ್ರೂಮನ್ನರು ಆರಿಸಿಬರುವರೆಂದು ಕಳೆದ ವರ್ಷವೆ [illegible] ಬೆಂಗಳೂರಿನ ಜ್ಯೋತಿಷ್ಯರು ಈ ವರ್ಷ ಟ್ರೂಮನ್ನರ ಪ್ರತಿಷ್ಠೆ ಬೆಳೆಯುವದೆಂದೂ ವ್ಯಾಪಾರ ವ್ಯವಹಾರಗಳನ್ನು ನಿಯಂತ್ರಿಸುವ ಕಾಯದೆಗಳಾಗುವವೆಂದೂ ಹೇಳುತ್ತಾರೆ. ಆದರೆ ದೇಶದಲ್ಲಿ ರಾಜಕೀಯ ಮತ್ತು [illegible] ಬೆಳೆದು ಶಾಸನ ಸಭೆಯು ಮುಂದೆ ಅಧ್ಯಕ್ಷರು ಹೊಸ ಬೇಡಿಕೆಗಳನ್ನು ಮಂಡಿಸಬಹುದಾದುದರಿಂದ ಅವರಿಗೆ ಅಪಕೀರ್ತಿ [illegible] ಮೇಯಲ್ಲಿ ಅಮೇರಿಕೆಯ ಅಧ್ಯಕ್ಷರ ಸಂಬಂಧದಲ್ಲಿ ಪರಕೀರ್ತಿಕಾರಕವಾದ ಘಟನೆಗಳು ನಡೆಯಬಹುದೆಂದು [illegible] ತ್ತಾರೆ. ಯುರೋಪಿನ ಮೇಲೆ ಅಮೇರಿಕೆಯ ಹಿಡಿತ ಬಿಗಿಯಾಗುವದಂತೆ.

ಚೀನದಲ್ಲಿ ಚಿಯಾಂಗರ [illegible] ಪ್ರತಿಷ್ಠೆಯೂ [illegible] ಯೆಂದೂ ಅವರು ಕೈಸಾಗದೆ [illegible] ಮಾಡುವರೆಂದೂ ಹೇಳಿದ ಮಾತು ಭವಿಷ್ಯವೆಂಬದಕ್ಕಿಂತ ಭೂತವೆಂದೇ ಹೇಳಬಹುದು. ಚೀನದ ದುರ್ಭಾಗ್ಯಕ್ಕೆ ಕೊನೆಯಿಲ್ಲ. ಜನರ ಸ್ಥಿತಿ ಇದಕ್ಕಿಂತ ಸುಕರವೆಂದು [illegible] ವಿದ್ವಾಂಸರೂ ಒಗ್ಗೊರಲಿಂದ [illegible] ಅಗ್ನೇಯ ಏಶಿಯದಲ್ಲಿ ಕಮ್ಯುನಿಸ್ಟ [illegible] ದಿಂದ ಲಾಭವೇನೂ ಆಗದೆ ಅಶಾಂತಿ ಹಬ್ಬೀತು. ಇದೀಗ ಸಂಕ್ಷೇಪದಲ್ಲಿ ಜಗತ್ತಿನ [illegible] ಭವಿಷ್ಯ. ನೀವು ಭವಿಷ್ಯವನ್ನು [illegible] ಬಹುದು, ನಗುವವರಿರಬಹುದು. ಆದರೆ ಈ ವಾಕ್ಯದ ವರೆಗೆ ನೀವಿದನ್ನು ಓದಿದಿರಿ [illegible] ರೆಂದು ನಮಗೆ ಗೊತ್ತು.

ಹೈದ್ರಾಬಾದ ಸಂಸ್ಥಾನ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾದ ಶ್ರೀಮತಿ [illegible] ಕುಮಾರಿ [illegible] ನೇ ತಾರೀಕು ಕೊಪ್ಪಳಕ್ಕೆ ಬಂದರು. ಜಿಲ್ಹಾ ಕಾಂಗ್ರೆಸ್ ಸಮಿತಿಯ ಪರವಾಗಿ ಅವರನ್ನು ಸ್ವಾಗತಿಸಿ ಪ್ರಚಂಡ ಮೆರವಣಿಗೆಯಿಂದ ಅವರನ್ನು [illegible] ವೆಲ್ಲ ತಿರುಗಿಸಿಕೊಂಡು ಹೋಗಲಾಯಿತು.

ಕಲಬುರ್ಗಿ (ಕಲಬುರಗಿ) ದಲ್ಲಿ ಕರ್ನಾಟಕ ಏಕೀಕರಣ ಸಂಘವು ಸ್ಥಾಪಿತವಾಗಿದೆ. ಶ್ರೀ ಬಸವಂತರಾವ ದೇಶಮುಖ ಇವರು ಅಧ್ಯಕ್ಷರಾಗಿಯೂ ಶ್ರೀ [illegible] ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. [illegible] ಕರಣಕ್ಕಾಗಿ [illegible] ಕಾಂಗ್ರೆಸ ಚುನಾವಣೆಯಲ್ಲಿ ಮತ ಕೊಡಬೇಕೆಂದು [illegible] ಸುವ ಗೊತ್ತುವಳಿ ಕಾರ್ಯಕಾರಿ [illegible] ಸ್ವೀಕರಿಸಲಾಯಿತು.

ವರು ಮಂಗಳೂರಿಗೆ ಬಂದಾಗ [illegible] ರಂದು ದ. ಕ. ಜಿಲ್ಲಾ [illegible] ಅವರನ್ನು ಸತ್ಕರಿಸಲಾಯಿತು. [illegible] ಸಂಘದ [illegible] ಮಾತನಾಡುತ್ತ "[illegible] ಬೆಳ್ಳಂಗಡಿಗಾಗಿ [illegible] ಕಂತಿಯು [illegible] ಮುಂಬಯಿ ಬೆಂಗಳೂರುಗಳಿಗೆ [illegible] ಮೂಲಕ [illegible] ಸಿದರು.

ಹಿಂದುಸ್ತಾನ

ಮುಂಬಯಿ

ಹಿಂದುಸ್ಥಾನದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಅವರು ಮುಖ್ಯ ಮಂತ್ರಿಗಳ ರಾಷ್ಟ್ರ ಸಹಾಯ ನಿಧಿಯಿಂದ ೨೫೦೦೦ ರೂ. ಗಳನ್ನು ಮುಂಬಯಿ ಅಕಬರ ಶಿಬಿರದಲ್ಲಿ ವಾಸವಾಗಿರುವ ನಿರಾಶ್ರಿತರಿಗೆ ವಿಶೇಷ ಸಹಾಯ ಸಲ್ಲಿಸಲು ಕೊಟ್ಟಿದ್ದಾರೆ. ಕೊಡುಗೆಯು ಈ ಹಣವನ್ನು ಶಿಬಿರ ನಿವಾಸಿಗರಿಗೆ, ಆಹಾರ ವಸ್ತ್ರ, ಔಷಧಿ, ಹಾಗು ಇತರ ಅವಶ್ಯಕತೆಗಳನ್ನು ಒದಗಿಸಿ ಕೊಡಲು ಉಪಯೋಗಿಸಲಾಗುವದು.

ಮುಂಬಯಿ ಸರ್ಕಾರವು ಮುಂಬಯಿ ನೂಲಿನ ಒಡನೆ ವ್ಯಾಪಾರಸ್ಥರ ಲೈಸೆನ್ಸ ಅಜ್ಞೆಯು ಮಾವಿತ್ತು ನಿರ್ಬಂಧನೆಗಳಿಂದ, ಕೋಲ್ಲೆ ಪರದೆ ಮುಂ ಅರಿವೆ, ಟಾವೆಲ್ಲು, ನೂಲಿನ ಹೊದ್ದುಕೊಳ್ಳುವ ಚಾದರ, ಜಮಖಾನೆಗಳು, ಕರವಸ್ತ್ರ, ಜಾಲು ಅಂಚು ಕಟ್ಟಿದ ಟೇಬಲ ವಸ್ತ್ರ ಇವುಗಳನ್ನು ಮುಕ್ತ ಮಾಡಲು ನಿರ್ಧರಿಸಿದೆ. ಈ ಅರಿವೆಗಳನ್ನು ಸಂಗ್ರಹಿಸುವದಕ್ಕಾಗಲಿ ವ್ಯಾಪಾರ ಮಾಡುವದಕ್ಕಾಗಲಿ ಲೈಸೆನ್ಸ ಅವಶ್ಯವಿಲ್ಲ.

ಗವರ್ನರ ಜನರಲ್ಲರು ಮುಂಬಯಿ ಪ್ರಾಂತದ ಆರು ಕಾಯದೆಗಳಿಗೆ ಸಮ್ಮತಿ ಕೊಟ್ಟಿದ್ದು ಅವು ಇಂತಿವೆ— ೧೯೪೮ ರ, ಮುಂಬೈ ಹರಿಜನ ಮಂದಿರ ಪ್ರವೇಶ ಕಾಯದೆ, ದೇಶೀ ವೈದ್ಯಕೀ ಪದ್ಧತಿಗಳ ಕಾಯದೆ, ಕ್ರಿಮಿನಲ್ ಪ್ರೊಸೀಜರ ಕೋಡ ಕಾಯದೆ. ಮುಂಬಯಿ ನಗರ ಮುನಿಸಿಪಲ್ ಕಾಯದೆ. ಮುಂಬಯಿ ಔದ್ಯೋಗಿಕ ಸಂಬಂಧಗಳ ಕಾಯದೆ ಮತ್ತು ಮುಂಬಯಿ ಕ್ಷಾರಭೂಮಿಗಳ ಕಾಯದೆ.

ಶಾಲೆ ಕಾಲೇಜುಗಳ ಅಭ್ಯಾಸ ಬಿಟ್ಟು ೧೯೪೨ ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಸರಕಾರೀ ನೌಕರಿಗಳಿಗೆ ಅವಶ್ಯವಿರುವ ಶೈಕ್ಷಣಿಕ ಪಾತ್ರತೆಯ ವಿಷಯದಲ್ಲಿ ಹಲವೊಂದು ಸವಲತ್ತುಗಳನ್ನೀಯಲಾಗಿದೆ.

ಯಾವದೊಂದು ಸ್ಥಳಕ್ಕೆ ಇಂಥ ವಿದ್ಯಾರ್ಥಿಗಳಿಂದ ಬರುವ ಅರ್ಜಿಗಳನ್ನು ಪರಿಶೀಲಿಸುವಾಗ ಅಗತ್ಯವಿರುವ ಶೈಕ್ಷಣಿಕ ಪಾತ್ರತೆಯ ಕೊರತೆಯೊಂದನ್ನು ಬಿಟ್ಟು ಇತರ ದೃಷ್ಟಿಯಲ್ಲಿ ಅವರು ಆ ಸ್ಥಳಕ್ಕೆ ಯೋಗ್ಯರೆಂದು ಕಂಡು ಬಂದರೆ ಸರಕಾರಕ್ಕೆ ಹಾಗೆ ಶಿಫಾರಸು ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿದೆ. ಆದರೆ ಉಮೇದುವಾರರು ೧೯೪೨ ರ ಚಳವಳಿಯಲ್ಲಿ ತಾವು ಭಾಗವಹಿಸಿದ ಬಗ್ಗೆ ಮತ್ತು ಅದರಿಂದ ತಮಗೆ ನಿರ್ದಿಷ್ಟ ಶೈಕ್ಷಣಿಕ ಯೋಗ್ಯತೆ ಪಡೆಯುವದಾಗಲಿಲ್ಲವೆಂಬ ಬಗ್ಗೆ ಸಮಾಧಾನಕರವಾಗಿ ಸಿದ್ಧಪಡಿಸಬೇಕು.

ಶುದ್ಧ ಸ್ಪಿರಿಟನ್ನು ತಯಾರಿಸುವ ಭಟ್ಟಿಗಳಿಂದ ಮತ್ತು ಡಿನೇಚರ್ಡ ಸ್ಪಿರಿಟನ್ನು ತಯಾರಿಸುವ ಭಟ್ಟಿಗಳಿಂದ ಹೆಚ್ಚು ಲೈಸೆನ್ಸ ಫೀ ತೆಗೆದುಕೊಳ್ಳಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದೆ. ಅದರಂತೆ ಶುದ್ಧ ಸ್ಪಿರಿಟನ ಕಿರುಕುಳ ಮಾರಾಟದ ಲೈಸೆನ್ಸ ಫೀಯನ್ನು ಹೆಚ್ಚಿಸಬೇಕೆಂದೂ ಅದು ನಿರ್ಧರಿಸಿದೆ. ಲೈಸೆನ್ಸ ಪಡೆದ ಭಟ್ಟಿಗಳು ಕಾಕಂಬಿಯಿಂದ ಶುದ್ಧ ಸ್ಪಿರಿಟನ್ನು ತಯಾರಿಸುತ್ತವೆ. ಕಾಕಂಬಿಯು ಸಕ್ಕರೆ ಕಾರಖಾನೆಗಳಲ್ಲಿ ಹೊರಡುವ ಉಪಸರಕು. ಖಾಸಗಿ ಭಟ್ಟಿಗಳಿಗೆ ಶುದ್ಧ ಸ್ಪಿರಿಟನ್ನು ತಯಾರಿಸಲು ಮತ್ತು ಅದನ್ನು ದೂಷಿತಮಾಡಿ (ಡಿನೇಚರ್ಡ) ಪೇಟೆಯಲ್ಲಿ ಮಾರಲು ಸವಲತ್ತು ಕೊಡಲಾಗಿದೆ. ಎಪ್ರೀಲ ೧, ೧೯೪೯ ರಿಂದ ಲೈಸೆನ್ಸ ಫೀಗಳನ್ನು ಈ ಕೆಳಗಿನಂತೆ ಆಕರಿಸಲಾಗುವದು:-

ಶುದ್ಧ ಸ್ಪಿರಿಟಿಗೆ ೧ ಲಕ್ಷ ಪ್ರೂಫ್ ಗ್ಯಾಲನ್ನುಗಳ ವರೆಗೆ ೧೦ ಸಾವಿರ ರೂ; ಅದಕ್ಕೂ ಹೆಚ್ಚಿಗೆ ಶುದ್ಧ ಸ್ಪಿರಿಟ ಹೊರಟಲ್ಲಿ ೨೦ ಸಾವಿರ ರೂ. ಶುದ್ಧ ಸ್ಪಿರಿಟನ್ನು ದೂಷಿತ ಮಾಡಲು ಮತ್ತು ದೂಷಿತ ಸ್ಪಿರಿಟನ್ನು ಮಾರಲು ಬೇಕಾಗುವ ಲೈಸೆನ್ಸಿಗೆ ವರ್ಷಕ್ಕೆ ೧ ಲಕ್ಷ ಗ್ಯಾಲನ್ನುಗಳ ವರೆಗೆ ೫ ಸಾವಿರ ರೂಪಾಯಿ. ಅದಕ್ಕೂ ಹೆಚ್ಚಿಗೆ ಇದ್ದರೆ ೧೦ ಸಾವಿರ ರೂ. ಶುದ್ಧ ಸ್ಪಿರಿಟನ ಕಿರುಕುಳ ಮಾರಾಟದ ಲೈಸೆನ್ಸಿಗೆ ೧೦೦ ರೂ.

ಮುಂಬಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರೂ ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನ ಹಿಂದಿನ ಅಧ್ಯಕ್ಷರೂ ಆದ ಶ್ರೀ ಸಯ್ಯದ ಅಬ್ದುಲ್ಲಾ ಬ್ರೆಲ್ವಿಯವರು ತಾ. ೯ ರಂದು ರಾತ್ರಿ ೮-೪೫ ಕ್ಕೆ ಹೃದಯ ವಿಕಾರದಿಂದ ನಿಧನ ಹೊಂದಿದರು. ಅವರು ೧೯೧೫ ರಿಂದಲೇ ಮುಂಬಯಿ ಕ್ರಾನಿಕಲ್ ಪತ್ರಿಕೆಯಲ್ಲಿ ದುಡಿಯಲು ಪ್ರಾರಂಭಿಸಿ ೧೯೨೦ ರಲ್ಲಿ ಅದರ ಸಂಪಾದಕರಾದರು. ಇವರು ನಿಷ್ಠಾವಂತ ಕಾಂಗ್ರೆಸಿಗರೆಂದು ಹೆಸರುವಾಸಿಯಾಗಿದ್ದರು. ಇವರಿಗೆ ಮರಣ ಕಾಲಕ್ಕೆ ೫೬ ವರ್ಷಗಳಾಗಿದ್ದವು.

ಹೊಸದಿಲ್ಲಿ

ಮ. ಗಾಂಧಿಯವರ ಪುಣ್ಯ ತಿಥಿಯ ದಿನ ದಿಲ್ಲಿಯ ರಾಜಘಾಟದಲ್ಲಿ ಅವರಿಗೆ ಸಂಬಂಧಿಸಿದ ಭಾವ ಚಿತ್ರ, ಲೇಖ ಇವೇ ಮೊದಲಾದವುಗಳ ಪ್ರದರ್ಶನ ಏರ್ಪಡಿಸಲಾಗುವದು. ಹಾಗೂ ಇದನ್ನು ಸಾರ್ವಜನಿಕರಿಗೆ ೧೫ ದಿನ ತೆರೆದಿಡಲಾಗುವದು. ಈ ಪ್ರದರ್ಶನದ ಕೆಲಸವನ್ನು ಶಾಂತಿನಿಕೇತನದ ಕಲಾತಜ್ಞರಿಗೆ ಒಪ್ಪಿಸಲಾಗಿದೆ.

ಹಿಂದುಸ್ಥಾನ ಸರಕಾರವು ರೇಲ್ವೆ ಮತ್ತು ಒಕ್ಕಲತನದ ವಿಸ್ತರಣೆಗಾಗಿ ಅಂತಾರಾಷ್ಟ್ರೀಯ ಬ್ಯಾಂಕಿನಿಂದ ಸಾಲ ಪಡೆಯುವ ಬಗ್ಗೆ ಅರ್ಜಿ ಮಾಡಿಕೊಳ್ಳಲಿದ್ದಾರೆಂದು ತಿಳಿಯುತ್ತದೆ.

ಸಂಯುಕ್ತ ರಾಷ್ಟ್ರ ಸಂಘದವರು ಕಾಶ್ಮೀರಕ್ಕೆ ಬೇಗ ೪೦ ಜನ ಮಿಲಿಟರಿ ನಿರೀಕ್ಷಕರನ್ನು ಕಾಶ್ಮೀರ ಸಮಿತಿಯ ಜೊತೆಗೆ ಕಳಿಸಲಿರುವರೆಂದು ತಿಳಿಯುತ್ತದೆ.

ಸಂಯುಕ್ತ ಪ್ರಾಂತ

ಕೇಂದ್ರ ಶಿಕ್ಷಣ ಸಲಹೆ ಸಮಿತಿಯ ೧೫ ನೆಯ ಸಭೆಯು ಅಲಹಾಬಾದದಲ್ಲಿ ಭಾರತದ ಶಿಕ್ಷಣ ಸಚಿವರಾದ ಮೌ. ಅಬುಲಕಲಂ ಆಝಾದರ ಅಧ್ಯಕ್ಷತೆಯಲ್ಲಿ ತಾ. ೭,-೮ ಎರಡು ದಿನ ಸೇರಿ, ಪ್ರಾಥಮಿಕ ಶಿಕ್ಷಣವು ೬ ರಿಂದ ೧೪ ವರ್ಷಗಳ ವರೆಗೆ ಕಡ್ಡಾಯದ್ದಾಗಿರಬೇಕೆಂದೂ ಅದನ್ನು ಮಾತೃಭಾಷೆಯ ಮುಖಾಂತರವೇ ಕೊಡಬೇಕೆಂದೂ ಮಾಧ್ಯಮಿಕ ಶಾಲೆಗಳಲ್ಲಿ ರಾಷ್ಟ್ರ ಭಾಷೆಯು ಮೊದಲಿನ ಭಾಗದಲ್ಲಿ ಕಡ್ಡಾಯದ್ದಾಗಿರಬೇಕೆಂದೂ ವಿಶ್ವವಿದ್ಯಾಲಯದಲ್ಲಿ, ಬರುವ ೫ ವರ್ಷ ಇಂಗ್ಲೀಷೇ ಮಾಧ್ಯಮವಾಗಿರಬೇಕೆಂದೂ ಆಮೇಲೆ ಕ್ರಮೇಣ ಪ್ರಾದೇಶಿಕ ಭಾಷೆಗಳನ್ನು ಇಂಗ್ಲೀಷಿನ ಬದಲು ಉಪಯೋಗಿಸಬಹುದೆಂದೂ ಮಾಧ್ಯಮಿಕ ಶಿಕ್ಷಣ ಬಗ್ಗೆ ಪ್ರಾಂತಿಕ ಸರಕಾರಗಳಿಗೆ ಸಲಹೆಕೊಡಲು ಪ್ರಾಂತಿಕ ಸಲಹೆ ಸಮಿತಿಗಳು ಏರ್ಪಡಬೇಕೆಂದೂ ನಿರ್ಣಯಗಳನ್ನು ಮಾಡಿತು.

ಅ. ಭಾ. ವಿಜ್ಞಾನ ಪರಿಷತ್ತಿನ ೩೬ ನೆಯ ಅಧಿವೇಶನಕ್ಕೆ ಬಂದ ೬೦೦ ಪ್ರತಿನಿಧಿಗಳು ಸರ್. ಸಿ. ವಿ. ರಾಮನ್ನರ ೬೦ ನೆಯ ವರ್ಧಂತಿಯ ಬಗ್ಗೆ ತಾ. ೫ ರಂದು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಸಂ. ಪ್ರಾಂತದ ಗವರ್ನರರಾದ ಶ್ರೀಮತಿ ಸರೋಜನಿ ನಾಯಡೂರವರೂ ಅವರಿಗೆ ಶುಭಕೋರಿದರಲ್ಲದೆ ಅಲಹಾಬಾದ ನಗರ ಸಭೆಯವರು ಸರ್. ರಾಮನ್ನರಿಗೆ ಸ್ವಾಗತ ಸಮಾರಂಭ ಏರ್ಪಡಿಸಿದ್ದರು.

೧೬ ವರ್ಷದ ಒಳಗಿನ ಹುಡುಗರು ಹೊಗೆಸೊಪ್ಪು ಸೇದಕೂಡದೆಂದು ಒಂದು ಗೊತ್ತುವಳಿಯು ಸಂಯುಕ್ತ ಪ್ರಾಂತ ಶಾಸನ ಸಭೆಯಲ್ಲಿ ಬರಲಿದೆಯೆಂದು ತಿಳಿಯುತ್ತದೆ.

ಹಿಂದೀ ಸಂಸ್ಥಾನ

ಭೋಪಾಳವು ಹಿಂದುಸ್ಥಾನದಲ್ಲಿ ಲೀನವಾಗಬೇಕೆಂಬ ಬಗ್ಗೆ ತಾ. ೬ ರಂದು ೫ ಸಾವಿರ ಜನರ ಸಾರ್ವಜನಿಕ ಸಭೆ ಸೇರಿತ್ತು. ಆಗ ಸೈನಿಕರು, ಪೋಲೀಸರು ಮತ್ತು ಮುಸ್ಲಿಂ ಗಾರ್ಡ ಇವರು ಸಭಿಕರ ಮೇಲೆ ಲಾಠಿಪ್ರಹಾರವನ್ನೂ ಗೋಳಿಬಾರನ್ನೂ ಮಾಡಿದರು. ಆಗ ೮ ಜನರು ಸತ್ತರು. ಅನೇಕರು ಗಾಯಗೊಂಡರು. ಪೋಲೀಸರು ಕೆಲ ಮನೆಗಳಲ್ಲಿ ಸಹ ಹೊಕ್ಕು ಜನರನ್ನು ಹೊಡೆದರು. ಸ್ತ್ರೀಯರ ಮೆರವಣಿಗೆಯೊಂದರ ಮೇಲೆಯೂ ಲಾಠಿ ಪ್ರಹಾರ ವಾಯ್ತು.

ಮುಂಬಯಿ ಕೋಟೆಯ ಪ್ರದೇಶದಲ್ಲಿ ತಾ. ೧೦ ರಂದು ಮುಂಜಾನೆ ೩೯ ಲಕ್ಷ ೪೯ ಸಾವಿರ ರೂ. ಗಳ ಸಶಸ್ತ್ರ ದರೋಡೆ ನಡೆಯಿತು. ಟಾಟಾ ಮಿಲ್ಸದ ಇಬ್ಬರು ಕಾರಕೂನರು ಮತ್ತು ಕೆಲ ಕೆಲಸಗಾರರು ಪರೇಳದಲ್ಲಿಯ ಗಿರಣಿಗಳ ಕೆಲಸಗಾರರಿಗೆ ಪಗಾರ ಕೊಡುವದಕ್ಕಾಗಿ ಹಣ ತುಂಬಿದ ಉಕ್ಕಿನ ಟ್ರಂಕುಗಳನ್ನು ಹೊರಗೆ ಟ್ರಕ್ಕಿನಲ್ಲಿ ತಂದಿಟ್ಟರು. ಆಗ ನಾಲ್ವರು ಪಿಸ್ತೂಲುಧರಿಸಿ ಒಂದು ಕಾರಿನಲ್ಲಿ ಬಂದು ಹಣ ತುಂಬಿದ ನಾಲ್ಕು ಟ್ರಂಕುಗಳನ್ನು ಕಾರಿನಲ್ಲಿ ಹೇರಿಕೊಂಡು ಪಾರಾದರು. ತಪಾಸಣೆ ನಡೆದಿದೆ.

ಮದ್ರಾಸ

ಇಂಡಿಯನ್ ರಿವ್ಯೂ ಪತ್ರಿಕೆಯ ಸಂಪಾದಕರೂ ಪ್ರಮುಖ ಪತ್ರಿಕೋದ್ಯಮಿಗಳೂ ಆದ ಶ್ರೀ ಜಿ. ಎ. ನಟೇಶನ್ನರು ತಾ. ೯ ರಂದು ರಾತ್ರಿ ೧.೩೦ ಕ್ಕೆ ನಿಧನ ಹೊಂದಿದರು. ಮರಣದ ಸಮಯಕ್ಕೆ ಅವರಿಗೆ ೭೬ ವರ್ಷಗಳಾಗಿದ್ದವು. ಇವರು ಪ್ರಕಟಿಸಿದ ಅನೇಕ ಗ್ರಂಥಗಳು ವಿದೇಶದಲ್ಲಿ ಕೂಡ ಪ್ರಸಾರಗೊಂಡಿವೆ. ಇವರು ರಾಜಕಾರಣದಲ್ಲಿಯೂ ದುಡಿದವರು.

ಮಧ್ಯಪ್ರಾಂತ

ಹಿಂದುಸ್ಥಾನ ಸರಕಾರದ ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ಮಧ್ಯಪ್ರಾಂತದಲ್ಲಿಯ ಪಠಾರಿ ಎಂಬಲ್ಲಿ ೧೦ ಸಾವಿರ ಎಕರೆ ಪಡಭೂಮಿಯನ್ನು ಸಾಗುವಳಿ ಮಾಡುವ ಮಧ್ಯಪ್ರಾಂತ ಸರಕಾರದ ಯೋಜನೆಯನ್ನು ತಾ. ೫ ರಂದು ಉದ್ಘಾಟಿಸಿದರು.

ಧಾನ್ಯಗಳ ಎತ್ತುವಳಿ ಸರಕಾರದ ಹೊಸ ಆಜ್ಞೆ

ಧಾನ್ಯಗಳ ಎತ್ತುವಳಿಯ ವಿಷಯದಲ್ಲಿ ಮುಂಬೈ ಸರಕಾರವು ಒಂದು ಹೊಸ ಆಜ್ಞೆಯನ್ನು ಹೊರಡಿಸಿದೆ. ಎತ್ತುವಳಿ ತೆರಬೇಕಾದವರ ಕುಟುಂಬದಲ್ಲಿ ಐವರು ವಯಸ್ಕರಿಗಿಂತ ಹೆಚ್ಚು ಜನರಿದ್ದರೆ ಆ ಬಗ್ಗೆ ಅವರು ಎತ್ತುವಳಿ ಲೆಕ್ಕದಲ್ಲಿ ಸವಲತ್ತು ಪಡೆಯಬಲ್ಲರು. (ಈ ಮೊದಲು ಒಂದು ಕುಟುಂಬವೆಂದರೆ ಐವರು ವಯಸ್ಕರೆಂದು ಗ್ರಹಿಸಲಾಗಿತ್ತು) ಒಂದು ವೇಳೆ ಈ ಸಂಖ್ಯೆಯು ಐವರಿಗಿಂತ ಕಡಿಮೆ ಇದ್ದರೆ ಎತ್ತುವಳಿಯ ಪ್ರಮಾಣವನ್ನು ಹೆಚ್ಚಿಸಲಾಗುವದು. ಪ್ರತಿಕೂಲ ಋತುಮಾನದಿಂದ ಯಾವದೊಂದು ಪ್ರದೇಶದ ಸಾಗುವಳಿದಾರರಿಗೆ ಹಾನಿ ತಟ್ಟಿದರೆ, ಆ ಬಗ್ಗೆ ಅವರು ಸ್ಥಳಿಕ ಅಧಿಕಾರಿಗಳಿಗೆ ಎತ್ತುವಳಿ ಲೆಕ್ಕದಲ್ಲಿ ಹೆಚ್ಚು ಕಡಿಮೆ ಮಾಡಬೇಕಾಗಿ ಬಿನ್ನಯಿಸಿಕೊಳ್ಳಲು ಈ ಆಜ್ಞೆಯಲ್ಲಿ ಅವಕಾಶವಿದೆ. ದೊಡ್ಡ ಖಾತೆದಾರರಿಗೆ ಅವರ ವಾಡಿಕೆಯ ಎತ್ತುವಳಿ ಲೆಕ್ಕಕ್ಕಿಂತ ಹೆಚ್ಚು (ಸರಚಾರ್ಜ) ಆಕರಿಸಲಾಗುವದು. ೨೦ ಮಣ ಅಥವಾ ಅದಕ್ಕೂ ಹೆಚ್ಚು ಎತ್ತುವಳಿ ಕೊಡುವವರಿಗೆ ೧೦೦ ಕ್ಕೆ ೫ ಮತ್ತು ೪೦ ಮಣ ಅಥವಾ ಅದಕ್ಕೂ ಹೆಚ್ಚು ಎತ್ತುವಳಿ ಕೊಡುವವರಿಗೆ ನೂರಕ್ಕೆ ೧೦ ಸರಚಾರ್ಜ ಬೀಳುವದು.

ಭೂಮಿಯ ಒಡೆಯ ಇಲ್ಲವೆ ಸಾವಕಾರನಿಗೆ ಗೇಣಿ, ಸಾಲದ ಮೇಲಿನ ಬಡ್ಡಿ ಅಥವಾ ಸರಕುಗಳ ರೂಪದಲ್ಲಿ ಪಡೆದ ಸಾಲ ಇವುಗಳನ್ನು ಸಲ್ಲಿಸುವ ಅವಧಿಯನ್ನು ಮುಂಬರಿಸುವ ಬಗ್ಗೆ ಹಳೆಯ ಆಜ್ಞೆಯಲ್ಲಿದ್ದ ಏರ್ಪಾಡನ್ನು ಹೊಸ ಆಜ್ಞೆಯಲ್ಲಿಯೂ ಸೇರಿಸಲಾಗಿದೆ.

ತೀರ್ಥಹಳ್ಳಿ ತಾಲೂಕು ಗೇಣೀದಾರರ ಸಭೆ ಸೇರಿ ಗೇಣೀದಾರರಿಗೆ ಭತ್ತ ಕೊಟ್ಟ ನಂತರ ತಮ್ಮಲ್ಲಿ ಏನೂ ಉಳಿಯುವದಿಲ್ಲಾದ್ದರಿಂದ ತರಿಸಾಗುವಳಿದಾರರಿಗೆ ೧೫ ರೂ. ಬೋನಸ್ಸು ಕೊಡಬೇಕು. ತಗಾಯಿ ಸಾಲ ಮೊದಲಾದ್ದೆಲ್ಲ ಸಾಗುವಳಿದಾರರೆಲ್ಲರಿಗೂ ಸಿಗುವಂತಾಗಬೇಕು ಮೊದಲಾದ ಗೊತ್ತುವಳಿಗಳಾದವು.

ಕರ್ನಾಟಕ ವಿಶ್ವವಿದ್ಯಾಲಯ ಮಸೂದೆ

ಮುಂಬಯಿ ಸರಕಾರವು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಅದರ ಮೂರ್ತ ಸ್ವರೂಪದ ಬಗ್ಗೆ ಒಂದು ಮಸೂದೆಯನ್ನು ಸಿದ್ಧಗೊಳಿಸಿದೆ.

ಈ ಹೊಸ ಮಸೂದೆಯು ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯ ಸಲಹೆ ಸೂಚನೆಗಳನ್ನು ಮುಖ್ಯವಾಗಿ ಅನುಸರಿಸಿದೆ. ಸಮಿತಿಯು ಪ್ರಾಂತದ ಕರ್ನಾಟಕ ಭಾಗದ ಶಿಕ್ಷಣ ಸಂಸ್ಥೆಗಳನ್ನು ಸೇರ್ಪಡಿಸಿಕೊಳ್ಳುವ ವಿಶ್ವವಿದ್ಯಾಲಯವಿರಬೇಕೆಂದು ಮುಖ್ಯವಾಗಿ ಸೂಚಿಸಿದ್ದಿತು. ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರ ಅಧಿಕಾರ, ಮತ್ತು ಸಂಸ್ಥೆಗಳನ್ನು ಸೇರ್ಪಡಿಸಿಕೊಳ್ಳುವ ವಿಷಯದಲ್ಲಿ ಮಸೂದೆಯು ಪುಣೆ ವಿಶ್ವವಿದ್ಯಾಲಯ ಕಾಯದೆಯನ್ನು ಅನುಸರಿಸಿದೆ; ವಿಶ್ವವಿದ್ಯಾಲಯದ ಹೆಸರು, ವಿವಿಧ ಮಂಡಳಿಗಳ ಘಟನೆ ಇತ್ಯಾದಿ ವಿಷಯಗಳಲ್ಲಿ ಮಸೂದೆಯು ಸಮಿತಿಯ ಸಲಹೆಗಳನ್ನು ಎತ್ತಿಕೊಂಡಿದೆ.

ಮೈಸೂರು ಸಂಸ್ಥಾನಕ್ಕೆ ೧೯೪೯ ರಲ್ಲಿ ಒಂದು ಲಕ್ಷ ಟನ್ನು ಆಹಾರ ಧಾನ್ಯದ ಕೊರತೆ ಬೀಳುವದು. ಈಗ ಸಂಸ್ಥಾನದಲ್ಲಿ ಕೇವಲ ಆರು ವಾರದ ಆಹಾರ ಧಾನ್ಯ ಮಾತ್ರ ಇದೆ. ಭೂಮಿಯಲ್ಲಿ ಬೇಸಾಯ ಕಡಮೆಯಾದ್ದರಿಂದ ಸಂಸ್ಥಾನದಲ್ಲಿ ಈ ವರುಷ ಹುಟ್ಟುವಳಿ ಹೆಚ್ಚಿಲ್ಲ. ವ್ಯಾಪಾರಿ ಬೆಲೆಗಳು ಹೆಚ್ಚುತಿವೆ.

ಬೆಳಗಾವಿ ಮುಂಬಯಿಗಳಲ್ಲಿ ಮಾನ್ಯ ದಿವಾಕರರು

“ಸಾರ್ವಜನಿಕ ಗೌರವವು ಸಾರ್ವಭೌಮ ಗೌರವಕ್ಕೂ ಮಿಗಿಲು”

“ ಸಾರ್ವಜನಿಕ ಸೇವೆಯೇ ನನ್ನ ಚಿರ ಸಂಗಾತಿ ”

ಹಿಂದುಸ್ಥಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿಯ ಮಂತ್ರಿಗಳಾದ ಮಾನ್ಯ ರಂಗರಾವ ದಿವಾಕರರು ಧಾರವಾಡದಿಂದ ತಾ. ೩ ರಂದು ಬೆಳಗಾವಿಗೆ ಹೊರಟರು. ದಾರಿಯಲ್ಲಿ ಕಿತ್ತೂರ, ಮುಗಟಖಾನ ಹುಬ್ಬಳ್ಳಿ ಬಾಗೇವಾಡಿ ಮೊದಲಾದ ಗ್ರಾಮಗಳಲ್ಲಿಯ ನಾಗರಿಕರು ಮಾನ್ಯ ಮಂತ್ರಿಗಳಿಗೆ ಹೃತ್ಪೂರ್ವಕ ಸ್ವಾಗತ ನೀಡಿದರು.

ಕಿತ್ತೂರದಲ್ಲಿ ರಾಣೀ ಕಿತ್ತೂರ ಚನ್ನಮ್ಮನ ದಳವೆಂಬ ವಿದ್ಯಾರ್ಥಿನಿಯರ ದಳವೊಂದು ಮಂತ್ರಿಗಳನ್ನು ಸ್ವಾಗತಿಸಿ ಹಾರಹಾಕಿತು. ದಳದ ನಾಯಿಕೆಯನ್ನು ಮಂತ್ರಿಗಳು ಮಾತನಾಡಿಸಿ ನೀವು ಯಾರೆಂದು ಕೇಳಲು ನಾಯಿಕೆಯು ತಾನು ಚನ್ನಮ್ಮನ ವಂಶಜಳೆಂದು ಹೇಳಿದಳು. ಮುಂದೆ ಮುಗಟಖಾನ ಹುಬ್ಬಳ್ಳಿಯಲ್ಲಿಯೂ ಸ್ವಾಗತವಾಯ್ತು. ಅಷ್ಟರಲ್ಲಿ ಜಿಲ್ಹಾ ಕಾಂಗ್ರೆಸ ಅಧ್ಯಕ್ಷರು ಮಂತ್ರಿಗಳನ್ನಿದಿರುಗೊಂಡರು ಮಂತ್ರಿಗಳು ೧೦ ನಿಮಿಷ ಸದ್ಯದ ಕರ್ತವ್ಯದ ಬಗ್ಗೆ ಮಾತನಾಡಿದರು. ಭಾಷಣಾನಂತರ ೭೫ ವರ್ಷದ ಮುದುಕರೊಬ್ಬರು ಮುಂದೆಬಂದು ನನಗೂ ಒಂದೆರಡು ಮಾತು ಹೇಳಬೇಕಾಗಿದೆ ಎಂದು ನುಡಿದು, ನಿಮ್ಮ ವಚನ ಶಾಸ್ತ್ರ ರಹಸ್ಯವನ್ನು ಓದಿ ಅದಕ್ಕೆ ಮೆಚ್ಚಿ ನಿಮಗೊಂದು ನಮಸ್ಕಾರವನ್ನು ಮನಸ್ಸಿನಲ್ಲಿಯೆ ಮಾಡಿದ್ದೆನು. ನಿಮ್ಮನ್ನು ಪ್ರತ್ಯಕ್ಷ ಕಾಣುವ ಯೋಗ ಬಂದೀತೆಂದು ಬಗೆದಿದ್ದಿಲ್ಲ. ಇಂದು ಕಾಣುವ ಭಾಗ್ಯಬಂತು. ಅದಕ್ಕಾಗಿ ನಿಮಗೆ ಸಾಷ್ಟಾಂಗ ನಮಸ್ಕಾರ ಮಾಡಬಯಸುವೆನೆಂದು ಅಂದರು. ಅದಕ್ಕೆ ಮಂತ್ರಿಗಳು, ಹಿರಿಯರು ಕಿರಿಯರಿಗೆ ನಮಸ್ಕಾರ ಮಾಡಿದರೆ ಕಿರಿಯರ ಆಯುಷ್ಯ ಹಾನಿಯಾಗುವದು. ಆದ್ದರಿಂದ ನೀವು ನಮಸ್ಕಾರ ಮಾಡಬಾರದು. ಎಂದು ಬರೀ ಹಸ್ತಾಂದೋಲನ ಮಾಡಿದರು. ಪ್ರಚಂಡ ಜಯಘೋಷದಲ್ಲಿ ಮಂತ್ರಿಗಳ ಕಾರು ಮುಂದೋಡಿತು. ಮುಂದೆ ಬಾಗೇವಾಡಿಯಲ್ಲಿಯೂ ನಡೆದ ಸ್ವಾಗತಕ್ಕೆ ಕೃತಜ್ಞತೆ ವ್ಯಕ್ತಪಡಿಸಿ ಅಲ್ಲಿಯೂ ಹತ್ತು ನಿಮಿಷ ಸಮಯೋಚಿತ ಭಾಷಣ ಮಾಡಿ ಬೆಳಗಾವಿಗೆ ಹೊರಟರು.

ಬೆಳಗಾವಿಯಲ್ಲಿ

ಬೆಳಗಾವಿಗೆ ಮಧ್ಯಾಹ್ನ ೩॥ ಗಂಟೆಗೆ ತಲುಪಿ ನೇರವಾಗಿ ಶ್ರೀ ಗಂಗಾಧರರಾವ ದೇಶಪಾಂಡೆಯವರ ಮನೆಗೆ ತೆರಳಿದರು. ಬೆಳಗಾವಿ ಇನ್ನೂ ನಾಲ್ಕು ಮೈಲಿರುವಾಗಲೇ ಬೆಳಗಾವಿಯ ಗೃಹರಕ್ಷಕ ದಲದ ಕಪ್ತಾನರು ಮಂತ್ರಿಗಳನ್ನು ಎದುರುಗೊಂಡು ಮೊದಲು ಹೂಮಾಲೆ ಹಾಕಿದರು. ಶ್ರೀ ಗಂಗಾಧರರಾಯರ ಮನೆಯಲ್ಲಿ ಪುರಪ್ರಮುಖರೂ ಸರಕಾರೀ ಅಧಿಕಾರಿಗಳೂ ನೆರೆದಿದ್ದರು. ಆಮೇಲೆ ಬಜಾರದ ಚೌಕಿನಲ್ಲಿ ಪೋಲೀಸರ ಗೃಹರಕ್ಷಕ ದಳದ ಗೌರವ ರಕ್ಷೆಯನ್ನು ಸ್ವೀಕರಿಸಿ ಮಾನ್ಯ ಮಂತ್ರಿಗಳು ಕಲೆಕ್ಟರರ ಮನೆಗೆ ತೆರಳಿದರು. ಅಲ್ಲಿ ಮುಂಬಯಿ ಅಬಕಾರಿ ಮಂತ್ರಿಗಳಾದ ಶ್ರೀ. ಎಲ್. ಎಂ. ಪಾಟೀಲರೊಡನೆ ಚಹಾಪಾನ ಮಾಡಿ ಕಾರ್ಯಕರ್ತರ ಸಭೆಗೆ ಆಗಮಿಸಿದರು. ಅಲ್ಲಿ ಕರ್ನಾಟಕ ಏಕೀಕರಣ, ಪ್ರಜಾಪ್ರಭುತ್ವದ ಆಡಳಿತ ಇವೇ ಮೊದಲಾದ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿ ಟಿಳಕ ಚೌಕಿನಲ್ಲಿ ಕೂಡಿದ ಸಾರ್ವಜನಿಕ ಸಭೆಗೆ ಬಂದರು. ಜನಸ್ತೋಮವು ಅತ್ಯಂತ ಉತ್ಸಾಹದಿಂದ ಮಂತ್ರಿಗಳನ್ನು ಸ್ವಾಗತಿಸಿತು. ಮೊದಲು ಜಿಲ್ಹಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ಸುತಗಟ್ಟಿಯವರು ಚಿಕ್ಕ ಭಾಷಣ ಮಾಡಿ ಮಂತ್ರಿಗಳಿಗೆ ಹೂವಿನಹಾರ ಹಾಕಿದರು. ಆ ಮೇಲೆ ನೂರಾರು ಸಂಸ್ಥೆಗಳ ಪರವಾಗಿ ಹಾರಾರ್ಪಣ ನಡೆಯಿತು. ಮಂತ್ರಿಗಳ ಭಾಷಣದ ಸಾರ ಹೀಗಿದೆ—

ಮಂತ್ರಿಪದ ಆಕಸ್ಮಿಕ ಘಟನೆ ಮಾತ್ರ

ನಾನು ಅಖಂಡ ಕರ್ನಾಟಕದ ಸಮಗ್ರ ದೃಷ್ಟಿ ಇಟ್ಟುಕೊಂಡ ಮನುಷ್ಯ. ಆದ್ದರಿಂದ ಕರ್ನಾಟಕದ ಯಾವ ಊರೂ ನನಗೆ ಪರವಲ್ಲ. ಅದರಂತೆ ಬೆಳಗಾವಿಯೂ ನನಗೆ ಪರವಲ್ಲ. ಶ್ರೀ ಗಂಗಾಧರರಾವ ದೇಶಪಾಂಡೆ ಮೊದಲಾದವರೊಂದಿಗೆ ಇಲ್ಲಿಯೂ ನಾನು ಕಾರ್ಯಮಾಡಿದ್ದೇನೆ. ಇಂದು ಸರಕಾರವು ನಿಮ್ಮದಿದೆ. ಸರಕಾರದಲ್ಲಿಯ ವ್ಯಕ್ತಿಗಳು ಬೇಡವಾದರೆ ಅಥವಾ ಈ ಸರಕಾರವೇ ಬೇಡವಾದರೆ ವ್ಯಕ್ತಿಗಳನ್ನೂ ಸರಕಾರವನ್ನೂ ಕೂಡಿಯೇ ತೆಗೆದೊಗೆವ ಅಧಿಕಾರ ಜನತೆಗಿದೆ. ಪ್ರಜಾರಾಜ್ಯದಲ್ಲಿ ಪ್ರಜೆಗಳೇ ಸಾರ್ವಭೌಮಾಧಿಕಾರವುಳ್ಳವರು. ಆದ್ದರಿಂದ ಅಧಿಕಾರಿಗಳು ಸಲ್ಲಿಸಿದ ಗೌರವಕ್ಕಿಂತ ಸಾರ್ವಜನಿಕರು ಸಲ್ಲಿಸುವ ಗೌರವಕ್ಕೆ ನಾನು ಹೆಚ್ಚು ಬೆಲೆ ಕೊಡುತ್ತೇನೆ. ಈ ಗೌರವ ಸಾರ್ವಭೌಮನಿತ್ತ ಗೌರವಕ್ಕಿಂತ ಹೆಚ್ಚಿನದಾಗಿದೆ. ಇದರಿಂದ ಅಧಿಕಾರಿಗಳ ಗೌರವವನ್ನು ಕಡೆಗಣಿಸುವೆನೆಂದಲ್ಲ. ಸಾರ್ವಜನಿಕರೊಡನೆ ಬೆರತುಕೊಂಡು ದುಡಿಯುತ್ತ ಬಂದ ಜೀವವಿದು. ಆದ್ದರಿಂದ ಅವರ ಗೌರವದ ಬಗ್ಗೆ ನನಗೆ ಇಷ್ಟು ಆದರವೂ ಆತ್ಮೀಯತೆಯೂ ಎನ್ನಿಸುತ್ತದೆ ಅಷ್ಟೆ. ನನಗೆ ದೊರೆತ ಈ ಮಂತ್ರಿಪದವು ಜೀವನದಲ್ಲಿಯ ಒಂದು ಆಕಸ್ಮಿಕ ಘಟನೆ ಮಾತ್ರ. ಆದರೆ ಸಾರ್ವಜನಿಕ ಸೇವೆಯೇ ನನ್ನ ಚಿರಸಂಗಾತಿ. ನೀವು ತೋರಿಸುವ ಗೌರವದಿಂದ ನಾನು ಸ್ಫೂರ್ತಿಗೊಂಡಿದ್ದೇನೆ. ಈ ಸ್ಫೂರ್ತಿಯ ಫಲವು ಮರಳಿ ನಿಮಗೆ ನನ್ನ ಸೇವಾರೂಪದಲ್ಲಿ ಸಲ್ಲಲಿ ಎಂದು ದೇವರಲ್ಲಿ ಬೇಡುತ್ತೇನೆ.

ಈ ಸಾರ್ವಜನಿಕ ಸಭೆ ಮುಗಿಸಿಕೊಂಡು ಮಾನ್ಯ ಮಂತ್ರಿಗಳು ಮುಂಬಯಿಗೆ ಪ್ರಯಾಣ ಬೆಳೆಸಿದರು.

ಮುಂಬಯಿ ದಾರಿಯಲ್ಲಿ

ಬೆಳಗಾವಿಯಿಂದ ಮಾನ್ಯ ಮಂತ್ರಿಗಳಾದ ಶ್ರೀ ದಿವಾಕರರು ಮೋಟಾರಿನಿಂದ ಮುಂಬಯಿಗೆ ಹೊರಟಾಗ ದಾರಿಯಲ್ಲಿ ಗೋಕಾಕ ರೋಡ ಸ್ಟೇಶನದಲ್ಲಿ ಗೋಕಾಕ ಗಿರಣಿಯ ಕೊಣ್ಣೂರ ಮತ್ತು ಸುತ್ತುಮುತ್ತಲಿನ ಗ್ರಾಮಗಳ ಅಸಂಖ್ಯಾಕ ಜನರು ಸೇರಿ ಅವರಿಗೆ ಹೂಮಾಲೆ ಅರ್ಪಿಸಿ ಗೌರವ ತೋರಿದರು. ಮಂತ್ರಿಗಳು ಸಮಯೋಚಿತ ಮಾತುಗಳಿಂದ ಕೃತಜ್ಞತೆ ವ್ಯಕ್ತಪಡಿಸಿದರು.

ಹುಕ್ಕೇರಿರೋಡ ನಿಲ್ದಾಣದಲ್ಲಿಯೂ ಮಂತ್ರಿಗಳಿಗೆ ಸ್ವಾಗತ ಏರ್ಪಡಿಸಲಾಗಿತ್ತು. ಇಲ್ಲಿ ಗಾಡಿಯೂ ಬಹಳಹೊತ್ತು ನಿಲ್ಲುವದರಿಂದ ಅಲ್ಲಿ ಸಭೆಯ ಏರ್ಪಾಟನ್ನೇ ಮಾಡಲಾಗಿತ್ತು. ಮಂತ್ರಿಗಳನ್ನು ಜಯಜಯಕಾರದ ಮಧ್ಯದಲ್ಲಿ ವ್ಯಾಸಪೀಠಕ್ಕೆ ಕರೆದೊಯ್ಯಲಾಯ್ತು. ಅಲ್ಲಿ ಅನೇಕ ಸಂಸ್ಥೆಗಳ ಪರವಾಗಿ ಡಾ. ಕೊಕಟನೂರ, ಡಾ. ಕಡಲಗೀಕರ, ಶ್ರೀ. ವ್ಹಿ. ಎನ್. ಕುಲಕರ್ಣಿ, ಡಾ. ಬಿ. ಆರ್. ಕುಲಕರ್ಣಿ, ಶ್ರೀ ಬಾಳಾಜಿ ಕುರಬೇಟಿ ಇವರೇ ಮೊದಲಾದವರು ಹೂಮಾಲೆಯನ್ನೂ ನೂಲಿನ ಮಾಲೆಯನ್ನೂ ಅರ್ಪಿಸಿದರು. ಇವಕ್ಕೆಲ್ಲ ಮಂತ್ರಿಗಳು ಕೃತಜ್ಞತೆ ತೋರಿ ತಮಗೆ ದೊರೆತ ಮಂತ್ರಿಪದ ಕರ್ನಾಟಕಕ್ಕೇ ಸಿಕ್ಕ ಗೌರವವೆಂದೂ ಎಲ್ಲರೂ ಸರಕಾರದೊಂದಿಗೆ ಸಹಕರಿಸಿ ಕೆಲಸ ಮಾಡಬೇಕೆಂದೂ ಕೇಳಿಕೊಂಡರು. ಅಲ್ಲಿಯ ಸಂಯುಕ್ತ ಕರ್ನಾಟಕದ ಸುದ್ದಿಗಾರರು, ಕರ್ನಾಟಕಕ್ಕೆ ಏನಾದರೂ ಸಂದೇಶ ಕೊಡಬೇಕೆಂದು ಕೋರಲು, ಕರ್ನಾಟಕವು ತನ್ನ ಉಜ್ವಲ ಪರಂಪರೆಯನ್ನು ಕಾಯ್ದುಕೊಳ್ಳುವನೆಂಬ ಭರವಸೆ ನನಗಿದೆ ಎಂಬುದೇ ನನ್ನ ಸಂದೇಶ ಎಂದು ಹೇಳಿದರು. ಜಯಜಯಕಾರದಿಂದ ಮಂತ್ರಿಗಳನ್ನು ಬೀಳ್ಕೊಳ್ಳಲಾಯಿತು. ಮುಂದೆ ಶೇಡಬಾಳದಲ್ಲಿಯೂ ಇದೇ ಬಗೆಯಾಗಿ ಸ್ವಾಗತವಾಯ್ತು ಹುಗು ಹಾರಾರ್ಪಣವಾಯ್ತು. ಇಲ್ಲಿಯ ವಿಶೇಷ ಘಟನೆಯೆಂದರೆ ನಾಟಕಾಸಂಪ ಶೇಡಬಾಳರು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ಆತ್ಮೋದ್ಧಾರ ಎಂಬ ಚಿಕ್ಕ ನಾಟಕದ ಹೊತ್ತಿಗೆಯನ್ನು ಮಂತ್ರಿಗಳಿಗೆ ಅರ್ಪಿಸಿದರು. ಶ್ರೀ ದತ್ತೋಪಂತ ಹನುಮಸಾಗರರು ಮಾನ್ಯ ರಂಗರಾಯರನ್ನು ಆನಂದದಿಂದ ಬಿಗಿದಪ್ಪಿಕೊಂಡರು. ಮಾನ್ಯಮಂತ್ರಿಗಳು ಸಮಯೋಚಿತ ಮಾತನಾಡಿ ಮುಂದೆಸಾಗಿದರು.

ಮುಂಬಯಿಯಲ್ಲಿ

ಮುಂಬಯಿಯಲ್ಲಿ ತಾ. ೮ ರಂದು ಮುಂಬಯಿ ಸಂಯುಕ್ತ ಕರ್ನಾಟಕ ಸಂಘದವರು ಹಿಂದುಸ್ಥಾನ ಕೇಂದ್ರ ಸರಕಾರದಲ್ಲಿ ಸುದ್ದಿ ಮತ್ತು ಆಕಾಶವಾಣಿಯ ಮಂತ್ರಿಗಳಾದ ಶ್ರೀ ರಂಗರಾವ ದಿವಾಕರರಿಗೆ ಮಾನಪತ್ರ ಅರ್ಪಿಸಿದರು. ಈ ಸಂಘವು ಮುಂಬಯಿಯಲ್ಲಿಯ ೨೬ ಕನ್ನಡ ಸಂಘಗಳ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರೂ ಸಂಘದ ಅಧ್ಯಕ್ಷರೂ ಆದ ಶ್ರೀ ಆರ್. ಎ. ಜಹಗೀರದಾರರು ಮಾನ್ಯ ಮಂತ್ರಿಗಳ ದೇಶ ಸೇವೆಯನ್ನೂ ಸಾಹಿತ್ಯ ಸೇವೆಯನ್ನೂ ಹೊಗಳಿ ಮಾತನಾಡಿದರು. ಈ ಸಮಾರಂಭಕ್ಕೆ ಮುಂಬಯಿ ಸರಕಾರದ ಅರ್ಥಸಚಿವರು, ಕೃಷಿ ಸಚಿವರು, ಮುಂ. ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಕೆ ಪಾಟೀಲರು, ಮುಂಬಯಿ ಶರೀಫರಾದ ಶ್ರೀ ಜೋಕಿಮ ಆಳ್ವಾ, ಶ್ರೀ ಕೆ. ಎಂ. ಮುನಶಿ ಮೊದಲಾದ ಗಣ್ಯ ವ್ಯಕ್ತಿಗಳು ಆಗಮಿಸಿದ್ದರು. ಈ ದಿನ ಮಧ್ಯಾಹ್ನ ಮಾನ್ಯ ಮಂತ್ರಿಗಳಿಗೆ ನ್ಯಾಯಮೂರ್ತಿ ಆರ್ ಎ ಜಹಾಗೀರದಾರರು ಗ್ರೀನ್ಸ ಹೋಟೆಲಿನಲ್ಲಿ ಚಹಾಪಾನ ಏರ್ಪಡಿಸಿದ್ದರು. ಸಂಜೆಗೆ ಶ್ರೀ ಕೆ ಎಚ್ ಕಬ್ಬೂರರು ತಾಜಮಹಾಲ ಹೋಟೆಲಿನಲ್ಲಿ ಭೋಜನ ಏರ್ಪಡಿಸಿದ್ದರು.

ತಾ ೫ ರಂದು ಮುಂಬಯಿ ಶರೀಫರಾದ ಶ್ರೀ ಜೋಕೀಮ ಆಳ್ವಾ ಅವರು ಶ್ರೀ ದಿವಾಕರರ ಗೌರವಾರ್ಥವಾಗಿ ಉಪಹಾರ ಏರ್ಪಡಿಸಿದ್ದರು. ಆಗ ಮಾತನಾಡುತ್ತ ಮಂತ್ರಿಗಳು, ದೇಶದ ಮುಂದಿರುವ ಅನೇಕ ಸಮಸ್ಯೆಗಳನ್ನು ಬಿಡಿಸಲು ಪತ್ರಿಕೆಗಳು ಸರಕಾರಕ್ಕೆ ಐಕ್ಯ ಭಾವದಿಂದ ಸಹಕಾರ ನೀಡಬೇಕೆಂದು ಕೇಳಿಕೊಂಡರು. ಜಾಗತಿಕ ಶಾಂತಿ ಸಾಧನೆಗೆ ಹಿಂದುಸ್ಥಾನವು ಮಾಡಬೇಕಾದ ನಿಶ್ಚಿತ ಕಾರ್ಯವೊಂದಿದ್ದು ಇದನ್ನು ನಿರ್ವಹಿಸಿದರೆ ಪ್ರಪಂಚದ ಉಳಿದ ರಾಷ್ಟ್ರಗಳಿಗಿಂತ ಉನ್ನತ ಸ್ಥಾನವು ಅದಕ್ಕೆ ಖಚಿತವಾಗಿ ದೊರಕುವದೆಂದೂ ಈ ಹೊಣೆ ಭಾರತದ ಜನತೆಯ ಮೇಲಿದೆಯೆಂದೂ ತಿಳಿಸಿದರು. ಈ ಸಮಾರಂಭಕ್ಕೆ ಮುಂಬಯಿ ಗೃಹಸಚಿವರು, ಆಸ್ಟ್ರೇಲಿಯನ್ ಹಾಯ ಕಮಿಶನರ, ಶ್ರೀ ಜ್ರೈಳ್ವಿ, ಜಾನ್ ಟರ್ನರ, ಶ್ರೀ ಭರತನ್, ಇವರೇ ಮೊದಲಾದವರು ಆಗಮಿಸಿದ್ದರು.

ಇದೇ ದಿನ ಸಂಜೆಗೆ ಮಹಾರಾಷ್ಟ್ರ ವರ್ಕಿಂಗ ಸಂಘದವರು ಗೌರವ ಸಮಾರಂಭ ಏರ್ಪಡಿಸಿದ್ದರು. ಆಗ ಮಾತನಾಡುತ್ತ, ಕೆಲವೇ ತಿಂಗಳಲ್ಲಿ ಇನ್ನೂ ಕೆಲವು ಪ್ರಾದೇಶಿಕ ಆಕಾಶವಾಣಿ ಕೇಂದ್ರಗಳನ್ನು ತರೆಯಲಾಗುವದೆಂದು ಮಂತ್ರಿಗಳು ತಿಳಿಸಿದರು. ಎಲ್ಲ ರೇಡಿಯೋ ಕೇಂದ್ರಗಳನ್ನು ಹಿಂದುಸ್ಥಾನ ಸರಕಾರದವರು ತಮ್ಮ ಕಡೆಗೇ ತೆಗೆದುಕೊಳ್ಳತಕ್ಕವರಿರುವರೆಂದೂ ಈಗಾಗಲೇ ಬಡೋದೆಯ ಕೇಂದ್ರವನ್ನು ತೆಗೆದುಕೊಂಡಾಗಿದೆಯೆಂದೂ ಬೇಗ ಮೈಸೂರು ಕೇಂದ್ರವನ್ನೂ ತೆಗೆದುಕೊಳ್ಳಲಾಗುವದೆಂದೂ ಆನುಷಂಗಿಕವಾಗಿ ಮಂತ್ರಿಗಳು ಅರುಹಿದರು.

ಈ ಪೂರ್ವದಲ್ಲಿ ಮಂತ್ರಿಗಳು, ಸುದ್ದಿ ಹಾಗು ಆಕಾಶವಾಣಿ ಶಾಖೆಯ ಚಿತ್ರಪಟ ವಿಭಾಗಕ್ಕೂ ಮುಂಬಯಿ ಸುದ್ದಿ ಶಾಖೆಯ ಕಚೇರಿಗಳಿಗೂ ಭೆಟ್ಟಿಕೊಟ್ಟರು. ಆಕಾಶವಾಣಿ ಕೇಂದ್ರದ ಅಧಿಕಾರಿಗಳ ಹಾಗೂ ಕಲಾವಿದರ ಸಭೆಯಲ್ಲಿ ಮಾತನಾಡುತ್ತ, ಆಕಾಶವಾಣಿಯು ಜನರಂಜನೆಯನ್ನೂ ಮಾಡಬೇಕಾಗಿದೆ. ಮತ್ತು ಜೊತೆ ಜೊತೆಗೆ ಲೋಕ ಶಿಕ್ಷಣದ ಮಹಾ ಕಾರ್ಯವನ್ನೂ ಸಾಧಿಸಬೇಕಾಗಿದೆ. ಈ ದೃಷ್ಟಿಯಿಂದ ಈ ಶಾಖೆಯಲ್ಲಿ ಬಹಳ ಬೆಳವಣಿಗೆ ದಾಡುವದಿದೆ ಎಂದು ಮೊದಲಾಗಿ ಹೇಳಿದರು.

ಮುಂಬಯಿ ಪ್ರಾಂ. ಕಾಂ. ಕ. ಸತ್ಕಾರ

ಮುಂಬಯಿ ಪ್ರಾಂ. ಕಾಂ. ಕ. ಅಧ್ಯಕ್ಷರಾದ ಶ್ರೀ ಎಸ್ ಕೆ ಪಾಟೀಲರು ಮಂತ್ರಿವರ್ಯರಾದ ದಿವಾಕರರನ್ನು ಸ್ವಾಗತಿಸುತ್ತ, ಹೋರಾಟದ ಕಾಲಕ್ಕೆ ಸುಖ ದುಃಖಗಳನ್ನು ನುಂಗುತ್ತ ನಗೆಯಿಂದ ಇವರು ಸ್ವಾಗತಿಸಿದ್ದಾರೆ ಎಂದು ಮೊದಲಾಗಿ ಹೇಳಿದರು. ಈ ಸಂದರ್ಭದಲ್ಲಿ ಮಂತ್ರಿಗಳು ಮಾತನಾಡುತ್ತ, ಜಗತ್ತು ಹಿಂದುಸ್ಥಾನದ ಕಡೆಗೆ ಆಶಾಪೂರ್ಣ ದೃಷ್ಟಿಯಿಂದ ನೋಡುತ್ತಿದೆ. ಗಾಂಧೀಜಿಯವರು ಹಿಂದುಸ್ಥಾನದ ಕೀರ್ತಿಯನ್ನು [illegible] ಹೆಚ್ಚಿಸಿ ಹೋಗಿದ್ದಾರೆ. ಇದನ್ನು ಕಾಪಾಡಿಕೊಂಡು ಜಗತ್ತಿನ ಆಶಾಪೂರ್ತಿಯಾಗಿ ಹೆಣಗುವ ಹೊಣೆ [illegible]

[illegible]

ತಾ. ೫ ರ ಸಂಜೆಗೆ ಶ್ರೀ ಕೆ. ಎಂ. [illegible] ಮಾನ್ಯ ದಿವಾಕರರಿಗೋಸ್ಕರ ಭೋಜನ ಸಮಾರಂಭ ಏರ್ಪಡಿಸಿದ್ದರು. ಮುಂಜಾನೆ ಮುಂಬಯಿ ಗವರ್ನರರಾದ [illegible] ರಾಜಾ ಮಹಾರಾಜ ಸಿಂಗರವರಲ್ಲಿ ಮಾನ್ಯ ದಿವಾಕರರಿಗೆ [illegible] ನಡೆಯಿತು. ತಾ. ೬ ರಂದು ಮುಂಜಾನೆ ಮಾನ್ಯ ಮಂತ್ರಿಗಳು ದಿಲ್ಲಿಗೆ ಹೊರಟರು.

[illegible]

“ದೂರ ದೂರದಲ್ಲಿ ಕೆಲಸಿದ ಕನ್ನಡಿಗರಲ್ಲಿ ಜಾಗೃತಿಯಾಗಿದ್ದು ಎಲ್ಲರಲ್ಲಿಯೂ ಪ್ರೇಮೋತ್ಸಾಹ ಉಕ್ಕುವದನ್ನು ಕಂಡೆ. ನನ್ನ ಗೌರವವು ಕನ್ನಡಿಗರ ಗೌರವ; ಅದು ತ್ಯಾಗ, ಸೇವೆಗಳಿಗೆ ಸಲ್ಲಿಸಿದ ಗೌರವ. ಕನ್ನಡಿಗರ ಈ ಪ್ರೇಮ ಉತ್ಸಾಹಗಳು ಸ್ವತಂತ್ರ ಭಾರತದ ಸಮಸ್ಯೆಗಳನ್ನು ಎದುರಿಸುವಲ್ಲಿ ವಿನಿಯೋಗವಾಗಲಿ; ಸಬಲ ಪ್ರಜಾಸತ್ತೆಯನ್ನು ಸ್ಥಾಪಿಸಲು ಸಹಾಯಕವಾಗಲಿ.”

Reg. No. B. 3148

LICENCE No. 3
Licensed to Post without Prepayment

KARMAVEER 17-1-49

ವಾರದ ಭವಿಷ್ಯ

ಜ್ಯೋತಿಷಿ ಕೃಷ್ಣಶಾಸ್ತ್ರಿ, ಭವಿಷ್ಯ ಕಥನ ಆಫೀಸ ಖಡೇಬಜಾರ, ಬೆಳಗಾವಿ

ಜನೆವರಿ ತಾ. ೧೭ ರಿಂದ ೨೩ ರ ವರೆಗೆ

ಮೇಷ

ಸ್ವಂತ ಮತ್ತು ಹೆಂಡತಿಯ ಪ್ರಕೃತಿ ಸ್ವಸ್ಥವಾಗಿದ್ದರೂ ಮಕ್ಕಳಲ್ಲಿ ಯಾರಾದರೂ ಕಾಹಿಲೆ ಬೀಳುವರು. ಇಷ್ಟಮಿತ್ರರ ವರ್ತನೆ ಮುಂತಾದ ಕಡೆ ಅಸಮಾಧಾನ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆಯಂತೂ ಎಲ್ಲರ ಬಾಯಲ್ಲಿ ಹೊಗಳಿಸಿಕೊಳ್ಳುವಂಥದು. ಲಾಭವೂ ಮಾನದಂತೆಯೆ. ಆದರೇನು? ಮನೆಗೆ ಬಂದರೆ ಮಾತ್ರ ಎಲ್ಲಿಂದಲೂ ಅನಿಸಿಕೆ ಇಲ್ಲದ ಸ್ಥಿತಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಗೆಲವು. ಸಂಗ್ರಹದಲ್ಲಿ ಹೆಚ್ಚಳ. ಯಾವುದೇ ಮಾತನ್ನು ಮಿತಿಮೀರಿ ವಿಚಾರಿಸಿ ತಲೆಕೆಡಿಸಿಕೊಳ್ಳುವ ಬುದ್ಧಿ. ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರವೂ ಭೆಟ್ಟಿಗಿಂತ ಹೆಚ್ಚು ಕೆಲಸವಾದೀತು. ಭೆಟ್ಟಿಗೆ ಅಷ್ಟು ತೊಂದರೆಯಿಲ್ಲ. ತಾ. ೧೭, ೧೮, ೨೧, ೨೩ ಅನುಕೂಲ.

ವೃಷಭ

ನಿಮ್ಮ ಸ್ವಂತ ಪ್ರಕೃತಿಗಿಂತ ಹೆಂಡತಿ ಮಕ್ಕಳದು ಸುಖಕರ. ಪ್ರಾಪಂಚಿಕ ಸುಖ ಸಾಮಾನ್ಯ. ಆದರೆ ಒಲ್ಲದವರ ಕೂಡ ಸಹವಾಸ ಮಾಡುವ ಅಪ್ರಿಯ ಸಂದರ್ಭವೊದಗುವದು. ಉದ್ಯೋಗದಲ್ಲಿ ಪ್ರಗತಿ ಲಾಭಗಳು ಎಣಿಸಿದಷ್ಟು ಸಿಕ್ಕದರೂ ಪ್ರತಿಷ್ಠೆ ಅದಕ್ಕಿಂತಲೂ ಭರದಿಂದ ಬೆಳೆಯುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶ. ಪ್ರವಾಸಾದಿ ಕೆಲಸಗಳೂ ಅತ್ಯುತ್ಕೃಷ್ಟ. ಬೋಹಿಮೆಗೆ ತೊಂದರೆ ಕಡಿಮೆ. ತಾ. ೧೯, ೨೧, ೨೩ ಅನುಕೂಲ.

ಮಿಥುನ

ಸ್ವಂತ ಪ್ರಕೃತಿ ಬಹಳ ಕೆಟ್ಟಿದ್ದರೂ ಹೆಂಡತಿ ಮಕ್ಕಳು ಸುಖವಾಗಿರುವದರಿಂದ ಅದೇ ಒಂದು ಉತ್ಸಾಹ. ಬಗೆದ ಕಾರ್ಯದಲ್ಲಿ ದಾಯಾದ್ಯರು ವಿಘ್ನ ತಂದೊಡ್ಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಇವು ಮೂರೂ ಅತ್ಯುತ್ತಮ. ಮಿತ್ರರಲ್ಲಿ ಒಬ್ಬನಿಗೆ ಪ್ರಚಂಡ ಉತ್ಕರ್ಷದ ಸಂಧಿ. ಸ್ಥಾವರದಲ್ಲಿ ಹೆಚ್ಚಳ. ವಾದ ಸ್ಪರ್ಧೆಗಳೂ ಗೆಲವನ್ನೇ ತರುವವು. ಪತ್ರವ್ಯವಹಾರದಿಂದ ಕೆಲಸ ಕೈಗೂಡದು. ಪ್ರವಾಸ ಮತ್ತು ಭೆಟ್ಟಿಯು ಹಿತ. ಆದ್ರೆಗೆ ತೊಂದರೆ ಕಡಿಮೆ. ತಾ. ೧೭, ೧೯, ೨೧, ೨೩ ಹಿತಾವಹ.

ಕರ್ಕ

ಈ ವಾರ ನೀವು ಗ್ರಹಗಳ ಅಪ್ರೀತಿಗೆ ಪಾತ್ರರಾಗುತ್ತೀರಿ. ನಿಮಗಾಗಲಿ ಹೆಂಡತಿಗಾಗಲಿ ಪ್ರಕೃತಿ ನೆಟ್ಟಗಿರುವದಿಲ್ಲ. ಅಲ್ಲದೆ ಮನೆಯಲ್ಲಿ ಜಗಳಗಳ ಕಲಕಲೆ. ಮಕ್ಕಳ ಉನ್ನತಿಯೂ ಗುಣವೊಂದೇ ಸಮಾಧಾನದ ಮಾತು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಬೇಕಾದಷ್ಟು ದರೂ ಲಾಭ ಮಾತ್ರ ತೀರ ಸ್ವಲ್ಪ. ಸ್ಥಾವರದಲ್ಲಿಯೂ ಹಾನಿಯಾಗುವದಲ್ಲದೆ ದಾಯಾದ್ಯರು ಕೈತೋರಿಸುವರು. ವಾದ ಮತ್ತು ಸ್ಪರ್ಧೆಗಳಲ್ಲಿ ಮಧ್ಯಮಸ್ಥಿತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೇ ಶ್ರೇಯಸ್ಕರ. ಪುಷ್ಯದ ೧ ಮತ್ತು ೩ನೆ ಹಾಗು ಆಶ್ಲೇಷದ ೧ ಮತ್ತು ೩ನೆ ಪಾದಗಳಿಗೆ ಇದ್ದುದ್ದರಲ್ಲಿ ಒಳಿತು. ತಾ. ೧೭, ೧೮, ೧೯, ೨೦ ಅನುಕೂಲ.

ಸಿಂಹ

ಸ್ವಂತ ಆರೋಗ್ಯ ಅಷ್ಟಕ್ಕಷ್ಟೇ. ಆದರೆ ಹೆಂಡತಿ ಮಕ್ಕಳು ಸುಖವಾಗಿರುವರು. ಆದರೆ ಇತರ ವಿಷಯಗಳಲ್ಲಿ ಹಲ ಬಗೆಯ ಪ್ರಾಪಂಚಿಕ ಎಡರು ತೊಡರುಗಳು ಗಂಟುಬೀಳುವವು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳಿಗೆ ಏನೂ ಕೊರತೆಯಿಲ್ಲದಿದ್ದರೂ ಮುಖ್ಯ ಲಾಭದಲ್ಲಿ ಮಾತ್ರ ಕಕ್ಕಸ್ಸು. ವಾದ ಸ್ಪರ್ಧೆಗಳಲ್ಲಿ ಒಳ್ಳೆ ಯಶಸ್ಸು ಸಿಕ್ಕಿದರೂ ಅದನ್ನು ಪಕ್ಕಗೊಡದಂತೆ ಶತ್ರುಶಕ್ತಿ ಮೀರಿ ಬೆಳೆಗುವದು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಶ್ರೇಷ್ಠ. ಪೂರ್ವಾರ್ಧಕ್ಕೆ ತೊಂದರೆ ಕಡಿಮೆ. ೧೯, ೨೧, ೨೨, ೨೩ ಅನುಕೂಲ.

ಕನ್ಯಾ

ಮೈ ಕೆಟ್ಟಿದ್ದರೂ ಮನಸ ಕೆಟ್ಟಿಗಿಲ್ಲ. ಏಕೆಂದರೆ ಹೆಂಡತಿ ಮಕ್ಕಳೇ ಪ್ರತಿಕೂಲ ವರ್ತನೆಯಲ್ಲಿ ಪ್ರಸಕ್ತರಾಗುವರು. ಮನೆಯವರಿಗಿಂತ ಹೊರಗಿನವರೇ ನಿಮ್ಮನ್ನು ಹೆಚ್ಚು ಮಮತೆಯಿಂದ ಕಾಣುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳು ಪುಷ್ಕಳವಾಗಿ ಹೆಚ್ಚಿದರೂ ಲಾಭದ ಲೆಕ್ಕ ಹಾಕಿದರೆ ಮಾತ್ರ ಶೂನ್ಯ. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿ. ಪ್ರವಾಸಾದಿ] ಕಾರ್ಯಗಳೂ ಸಾಮಾನ್ಯವೆ. ಹಸ್ತಕ್ಕೆ ಸ್ವಲ್ಪ ತೊಂದರೆ ಕಡಿಮೆ. ತಾ. ೨೦, ೨೧, ೨೨, ೨೩ ಲೇಸು.

ತುಲಾ

ಪ್ರಕೃತಿ ಸಾಧಾರಣ. ಸ್ತ್ರೀ ಮತ್ತು ಸಂತತಿ ಸುಖ ಬಗೆದಂತೆ. ಉದ್ಯೋಗದಲ್ಲಿಯೂ ಪ್ರಗತಿ ಪ್ರತಿಷ್ಠೆ ಲಾಭಗಳು ಉತ್ತಮ. ಸಂಗ್ರಹದಲ್ಲಿ ಹೆಚ್ಚಳ. ಪ್ರವಾಸಾದಿ ಕಾರ್ಯಗಳು ಹಿತಾವಹ. ವಾದ ಸ್ಪರ್ಧೆಗಳಲ್ಲಿ ಉಭಯ ಪಕ್ಷಗಳ ಸ್ಥಿತಿ ಸಮಾನ. ಸ್ವಾತಿಗೆ ಪ್ರಸನ್ನಕಾಲ. ತಾ. ೧೭, ೧೮, ೨೨, ೨೩ ಉತ್ತಮ.

ವೃಶ್ಚಿಕ

ಪ್ರಕೃತಿ ಮತ್ತು] ಪ್ರಾಪಂಚಿಕ ಸುಖ ಉತ್ಕೃಷ್ಟ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳಿಗೆ ಆತಂಕ ಬಂದರೂ ಸ್ವಲ್ಪ ತೊಂದರೆ ತೆಗೆದುಕೊಂಡರೆ ಕೆಲಸ ಸಾಧಿಸುವದು. ಲಾಭವೂ ತುಂಬ. ವಾದ ಸ್ಪರ್ಧೆಗಳಲ್ಲಿ ಯಶಸ್ಸು. ಸ್ಥಾವರದಲ್ಲಿ ಹೆಚ್ಚಳ. ಪ್ರಿಯಜನರ ಭೆಟ್ಟಿ. ಭೆಟ್ಟಿಗಿಂತ ಪ್ರವಾಸ ಪತ್ರವ್ಯವಹಾರಗಳೇ ಕಾರ್ಯಸಾಧಕವಾಗುವವು. ಅನುರಾಧೆಯ ೧ನೆ ಮತ್ತು ೩ನೆ, ಹಾಗು ಜ್ಯೇಷ್ಠದ ೧ನೆ ಮತ್ತು ೩ನೆ ಚರಣಗಳಿಗೆ ಇನ್ನಷ್ಟು ಅನುಕೂಲ ಸಮಯ. ತಾ. ೧೭, ೧೮, ೧೯, ೨೦ ಉತ್ತಮ.

ಧನು

ಪ್ರಕೃತಿ ಉತ್ತಮ ಮತ್ತು ಪ್ರಾಪಂಚಿಕ ಸುಖವೂ ಸರಿಯಾಗಿಯೆ ಇರುವದು. ಆದರೆ ಹೆಂಡತಿ ಮಾತ್ರ ಸ್ವಲ್ಪ ಎಡುರಾಡುಗಳು ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅಪೇಕ್ಷಿಸಿದಷ್ಟಿಲ್ಲದಿದ್ದರೂ ಪ್ರತಿಷ್ಠೆ ಲಾಭಗಳು ಯಥೇಷ್ಟವಾಗಿ ಸಿಗುವವು. ಮಿತ್ರ ಸುಖಕ್ಕೂ ಕೊರತೆಯಿಲ್ಲ. ಧಾರ್ಮಿಕ ಮತ್ತು ಮಂಗಲ ಕಾರ್ಯಗಳು ನಿಶ್ಚಿತವಾಗುವ ಸಂಭವವಿದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ನಿಮ್ಮ ಕೈ ಮೇಲಾಗುವದು. ಪ್ರವಾಸಾದಿ ಕೆಲಸಗಳೂ ನೆನೆದಂತೆ. ಪೂರ್ವಾಷಾಢಕ್ಕೆ ಹೆಚ್ಚು ಅನುಕೂಲ. ತಾ ೧೯, ೨೦, ೨೧, ೨೩ ಉತ್ತಮ.

ಮಕರ

ಸ್ವಂತದ ಮತ್ತು ಹೆಂಡತಿಯ ಪ್ರಕೃತಿ ಕೆಡುವದಲ್ಲದೆ ಮೇಲೆ ಮಕ್ಕಳ ದುರ್ವರ್ತನೆ ನೋಡಿ ಸಾಕಪ್ಪಾ ಎನಿಸಿಬಿಟ್ಟೀತು. ಯಾವ ಮಾತು ತೆಗೆದುಕೊಂಡರೂ ಪ್ರಪಂಚ ನಿಸ್ಸಾರವೆಂಬುದು ನಿದರ್ಶನಕ್ಕೆ ಬರುವದು. ಕೆಲವು ವಿಷಯಗಳು ಮನಸಿಗೆ ವಿರುದ್ಧ ನಡೆದು ಹೋಗುವ ಭಯವಿದೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಒಳಿತಾಗಿದ್ದರೂ ಪ್ರತಿಷ್ಠೆಗೇ ಧಕ್ಕೆ ತಗಲುವದು. ಮಿತ್ರ ಸುಖವೊಂದೇ ಸುಖ. ವಾದ ಮತ್ತು ಸ್ಪರ್ಧೆಯಲ್ಲಿ ಹಾಗೂ ಅಲ್ಲಿ ಹೀಗೂ ಅಲ್ಲ ಎಂದಾಗುವದು. ವಾಹನದಿಂದ ಅಪಘಾತವೊದಗುವ ಸಂಭವವಿರುವದರಿಂದ ಎಚ್ಚರಿಕೆ! ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಒಳಿತು. ಶ್ರವಣಕ್ಕೆ ತೊಂದರೆ ಕಡಿಮೆ. ತಾ ೨೦, ೨೧, ೨೨, ೨೩ ಅನುಕೂಲ.

ಕುಂಭ

ಪ್ರಕೃತಿ ಸ್ವಂತದ್ದು ಒಳಿತಾಗಿದ್ದರೂ ಹೆಂಡತಿ ಮಕ್ಕಳದು ಅಷ್ಟು ಸಮಾಧಾನಕರವಿದು. ಬೇರೆ ವಿಷಯಗಳಲ್ಲಿ ಪ್ರಾಪಂಚಿಕ ಸುಖಕ್ಕೆ ಅಷ್ಟು ಕೊರತೆಯಿರಿಸದು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಗೆ ಮಾತ್ರ ಲೋಕಾಪವಾದದ ತೊಡೆತ ಬೀಳುವದು. ಸರಕಾರಿ ಕೆಲಸದಲ್ಲಿಯೂ ಕೊಡ ತೆಗೆದುಕೊಳ್ಳುವ ವ್ಯವಹಾರದಲ್ಲಿಯೂ ನಿಷ್ಕಾರಣ ಉಪದ್ರವ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಸ್ಥಿತಿ. ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಪ್ರವಾಸವೇ ಹಿತಾವಹ. ಶತತಾರಿಕೆಗೆ ತೊಂದರೆ ಕಡಿಮೆ. ತಾ ೧೭, ೧೮, ೨೩ ಸುಖಕರ.

ಮೀನ

ಪ್ರಕೃತಿ ಎಲ್ಲರದೂ ಉತ್ತಮವಾಗಿದ್ದರೂ ಮಕ್ಕಳು ಮಾತ್ರ ಹೇಳಿದ್ದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಎಷ್ಟಿದ್ದರೂ ಲಾಭಕ್ಕೆ ಮಾತ್ರ ತತ್ಪರ. ಮಿತ್ರರೇ ತಿರುಗಿ ಬೀಳುವರು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶಸ್ಸು. ಆದರೆ ಶತ್ರುಗಳು ತಮ್ಮ ಕೈವಾಡವನ್ನೇನೂ ಬಿಡುವದಿಲ್ಲ. ಪ್ರವಾಸಾದಿ ಕಾರ್ಯಗಳು ಹಿತಕರ. ಉತ್ತರಾಭಾದ್ರಪದದ ೧ ಮತ್ತು ೩ ನೆ ಹಾಗು ರೇವತಿಯ ೧ ಮತ್ತು ೩ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೯, ೨೦, ೨೩ ಅನುಕೂಲ.

ಐದು ಕೊಡಗಳ ಆತ್ಮಕಥೆ

[೨ನೆಯ ಪುಟದಿಂದ]

ದೊಡ್ಡ ಮನೆತನದಲ್ಲಿ ಕೆಲಸ ಮಾಡಿದ ಕೀರ್ತಿಯು ಈ ಕೊಡಗಳಿಗಿದ್ದವು. ಒಮ್ಮೆ ಆ ಮನೆಯಲ್ಲಿ ಲಮಾಣಿ ಜನರಿಂದ ಎಷ್ಟೋ ಸಾಮಾನುಗಳು ಕಳವಾಗಿ ಹೋದವು. ನಂತರ ಪೋಲೀಸ ತಪಾಸಣೆಯಲ್ಲಿ ಈ ಎರಡು ಕೊಡಗಳು ಮಾತ್ರ ಸಿಕ್ಕದವು. ಅವನ್ನೇ ಈಗ ಈ ಕಚೇರಿಯ ಕೋಣೆಯಲ್ಲಿ ತಂದಿಟ್ಟಿದ್ದರು.

೪ ನೆಯ ಕೊಡದ ಕಥೆ

ಇದು ಸ್ವಲ್ಪ ಮನೋರಂಜಕವಿತ್ತು. "ನನ್ನ ತುದಿಗಿದ್ದ ಕಲಾಕೃತಿಯಿಂದ ಹಾಗೂ ನನ್ನ ಆಕಾರದಿಂದಲೇ ನಾನು ದೇವರ ಪೂಜೆಗಾಗಿ ಕೆಲಸ ಮಾಡುತ್ತಿದ್ದೆನೆಂಬುದು ನಿಮಗೆ ಗೊತ್ತಿರಬಹುದು. ದೇವರ ಆರಾಧನೆಯಿಂದಲೇ ತನಗೆ ಬಹಳ ದಿನಗಳ ಮೇಲೆ ಗಂಡುಮಗ ಹುಟ್ಟಿದ್ದರಿಂದ ಒಬ್ಬ ಶ್ರೀಮಂತ ಗೃಹಸ್ಥನ ಹೆಂಡತಿಯು ನನ್ನನ್ನು ಮುದ್ದಾಂ ಕೊಂಡು ಆ ದೇವರ ಗುಡಿಗೆ ದಾನ ಕೊಟ್ಟಿದ್ದಳು. ನನ್ನನ್ನು ಕಂಡು ಆ ಗುಡಿಯ ಪೂಜಾರಿಗೂ ಅತ್ಯಂತ ಸಂತೋಷವಾಯಿತು. ಅಗ್ರೋದಕವನ್ನು ನನ್ನಲ್ಲಿಯೇ ತುಂಬುತಿದ್ದ. ಸತ್ಕಾರ್ಯಕ್ಕಾಗಿ ನನ್ನ ಉಪಯೋಗವಾಗುತ್ತಿರುವದನ್ನು ನೋಡಿ ನನಗೂ ಬಹಳ ಸಮಾಧಾನವಾಗಿತ್ತು. ಹೀಗೆ ಕೆಲವು ಮಾಸಗಳು ಕಳೆದು ಹೋಗಲಾಗಿ ಒಂದು ದಿನ ಆ ಪೂಜಾರಿಯು ನೀರು ತರಬೇಕೆಂದು ನನ್ನನ್ನು ನದಿಗೆ ಒಯ್ದಾಗ ಅವನ ಪರಿಚಿತಳಾದ ಒಬ್ಬ ಸ್ತ್ರೀಯು ನನ್ನನ್ನು ಬಹಳ ಹೊಗಳಿದಳು. ಆಕೆಯ ಸ್ತುತಿಯನ್ನು ಕೇಳಿ ನನಗೆ ಸಂತೋಷವಾಗದೆ ಹೆದರಿಕೆ ಉಂಟಾಯಿತು. ನಾನು ಗುಡಿಗೆ ಬಂದೆ. ಮುಂದೆ ೩-೪ ದಿನಗಳ ಮೇಲೆ ಮಧ್ಯಾಹ್ನ ೩..೪ ಘಂಟೆಯ ಸುಮಾರಕ್ಕೆ ಗುಡಿಯೊಳಗೆ ಬಂದು ಆ ಪೂಜಾರಿಯು ನನ್ನನ್ನು ಹಿಡಿದುಕೊಂಡ ಹೊರಟ. ಇಂಥ ಅದ್ಧ ವೇಳೆಯಲ್ಲಿ ನನ್ನನ್ನು ಎಲ್ಲಿಗೆ ಆತನು ಒಯ್ಯುತ್ತಿರಬಹುದೆಂಬುದು ನನಗೆ ಹೊಳೆಯಲಿಲ್ಲ. ನನ್ನನ್ನು ಹಿಡಿದುಕೊಂಡು ಗುಡಿಯ ಹೊಸ್ತಿಲಿನ ವರೆಗೆ ಹೋಗಿ ಆತ ಪುನಃ ತಿರುಗಿ ಬಂದು ನನ್ನ ಸ್ಥಳದಲ್ಲಿ ನನ್ನನ್ನಿಳಿಸಿದ. ನನ್ನನ್ನು ಎತ್ತಿಕೊಂಡು ಎಲ್ಲಿಗೊ ಹೋಗುವ ಬಗ್ಗೆ ಅವನ ಮನಸ್ಸು ಇನ್ನೂ ಹೊಯ್ದಾಡುತಿದ್ದಂತೆ ತೋರಿತು. ಮುಂದೆ ಎರಡು ಮೂರು ದಿನಗಳ ವರೆಗೂ ಆವನು ಹೀಗೆ ಮಾಡಹತ್ತಿದ. ನನ್ನನ್ನು ಹೊರಗೆ ಒಯ್ಯುವಷ್ಟು ಅವನ ಮನಸ್ಸಿನ ಧೈರ್ಯವಾಗಿದ್ದಿಲ್ಲವೆಂದು ತೋರುತ್ತದೆ. ಆದರೆ ನಾಲ್ಕನೆ ದಿನ ಅದೇ ಹೊತ್ತಿಗೆ ಪೂಜಾರಿಯು ಗುಡಿಯೊಳಗೆ ಬಂದ ಕೂಡಲೇ ಈ ದಿನ ಈತನು ತನ್ನ ಮನಸ್ಸಿನಲ್ಲಿದ್ದದ್ದು ಮಾಡಿಯೇ ತೀರುವನೆಂದು ನನಗೆ ಗೊತ್ತಾಯಿತು. ನನ್ನನ್ನು ಎತ್ತಿಕೊಂಡವನೇ ತನ್ನ ಮನೆಯ ದಾರಿ ಹಿಡಿದು ಬಿಟ್ಟ. ಅವನ ಮನೆಯಲ್ಲಿ ಎಲ್ಲರೂ "ದೇವರ ಕೊಡವನ್ನು ಮನೆಗೆ ಹ್ಯಾಗೆ ತಂದಿರಿ" ಎಂದು ಕೇಳಹತ್ತಿದರು. ಅವರ ಮುಂದೆ ಕೊಡಕ್ಕೆ ಹೊಸರು ಹಾಕಿಸುವದಿದೆ. ಎಂದು ಗುಳಿಗೆ ಹೊಡೆದ ಆ ಪೂಜಾರಿ.

ಅದೇ ದಿನ ರಾತ್ರಿ ೧೧ ಘಂಟೆ ಸುಮಾರಕ್ಕೆ ಆ ಪೂಜಾರಿಯು ನನ್ನನ್ನು ಒಬ್ಬ ಹೆಂಗಸಿನ ವಶಕ್ಕೆ ಒಪ್ಪಿಸಿಬಿಟ್ಟ. ಆ ದಿನ ನದಿಯ ಮೇಲೆ ನನ್ನನ್ನು ಮಿತಿಮೀರಿ ಹೊಗಳಿದ ಹೆಂಗಸೇ ಅವಳಿದ್ದಳು. ಪೂಜಾರಿಯು ಅವಳನ್ನೂ ಪೂಜಿಸುತಿದ್ದ. ಆದರೆ ಅವಳ ಮನೆಯಲ್ಲಿ ನನಗೆ ಬಹಳ ದಿನಗಳಿರಬೇಕಾಗಲಿಲ್ಲ. ಕೆಲವು ದಿನಗಳ ಮೇಲೆ ಆ ಸ್ತ್ರೀಯು ಕಾಲರಾದಿಂದ ಒಮ್ಮಿಂದೊಮ್ಮೆಲೆ ಇಹಲೋಕವನ್ನು ತ್ಯಜಿಸಿದಳು. ಹತ್ತಿರದವರು ಯಾರೂ ಇರಲಿಲ್ಲ. ಪೋಲೀಸರು ಪಂಚನಾಮೆ ಮಾಡಿ ಆಕೆಯ ಆಸ್ತಿಯನ್ನು ನಾಜರರ ವಶಕ್ಕೆ ಕೊಟ್ಟರು. ಅದರಲ್ಲಿ ನಾನೂ ಬಂದೆ. ಇನ್ನು ಮುಂದೆ ನನ್ನ ನಶೀಬದಲ್ಲಿ ಏನು ಇದೆಯೋ ಯಾರು ಬಲ್ಲರು? "

೫ ನೇ ಕೊಡದ ಕಥೆ

ಈ ಕೊಡವು ಇಲ್ಲಿಯವರೆಗೆ ಸ್ತಬ್ಧವಾಗಿ ಕುಳಿತು ತನ್ನ ಸರತಿ ಬಂದ ಕೂಡಲೆ ಮೊದಲು ಒಂದು ದೀರ್ಘ ನಿಟ್ಟುಸಿರನ್ನು ಬಿಟ್ಟು ಹೀಗೆ ಹೇಳಿತು. "ನಾನು ಸುದೈವದಿಂದ ಒಂದು ದೊಡ್ಡ ಮನೆತನವನ್ನು ಸೇರಿಕೊಂಡು ಸುಖವಾಗಿದ್ದೆ. ಕನಿಷ್ಠ ೩೦–೪೦ ಜನರಾದರೂ ಅಲ್ಲಿರುತ್ತಿದ್ದರು. ಅವರೆಲ್ಲರೂ ಯಾವಾಗಲೂ ಒಂದಿಲ್ಲೊಂದು ಕೆಲಸದಲ್ಲಿ ತತ್ಪರರಾಗಿಯೇ ಇರುತ್ತಿದ್ದರು. ಆ ಮನೆಯ ಹಿರಿಯ ಮಗನ ಲಗ್ನವು ಸುಲಕ್ಷಣೆಯಾದ ಒಬ್ಬ ಸುಂದರ ಯುವತಿಯ ಕೂಡ ಜರುಗಿತು. ಸೊಸೆಯು ಅತ್ತೆಯ ಮನೆಗೆ ಬಂದಳು. ಆ ತರುಣ ದಂಪತಿಗಳನ್ನು ನೋಡಿದರೆ ರತಿಕಾಮರ ಕಲ್ಪನೆಯು ಯಾರಿಗಾದರೂ ಬರುತ್ತಿತ್ತು. ಅದನ್ನು ನೋಡಿ ವಿಧಿಗೇ ಹೊಟ್ಟೆಕಿಚ್ಚು ಆಗಿರಬೇಕು. ಆ ಹಿರಿಯ ಮಗನ ಮನಸ್ಸಿನಲ್ಲಿ ತನ್ನ ತರುಣ ಸುಂದರ ಹೆಂಡತಿಯ ಶೀಲದ ಬಗ್ಗೆ ಸಂಶಯ ಉತ್ಪನ್ನವಾಯಿತು. ಕೂಡಲೇ ಆಕೆಯನ್ನು ನಾನಾ ವಿಧವಾಗಿ ಪೀಡಿಸಹತ್ತಿದ. ಪಾಪ ಆಕೆಯೇನು ಮಾಡಬೇಕು. ಒಂದು ದಿನ ದೇವರ ಪೂಜೆಗೆ ಮಡಿನೀರು ತರುವ ನೆವ ಮಾಡಿಕೊಂಡು, ನನ್ನನ್ನು ಬಾಗಲಲ್ಲಿ ಕರೆದುಕೊಂಡು ಹೊರಬಿದ್ದಳು. ಬಾವಿಯ ದಂಡೆಯ ಮೇಲೆ ನನ್ನನ್ನಿಟ್ಟವಳೇ ತಾನು ಒಳಗೆ ಹಾರಿಕೊಂಡಳು. ನೀರೊಳಗೆ ಬೀಳುವ ಮುಂದೆ ಆ ತರುಣ ಜೀವಿಯು ಮಾಡಿದ ಆರ್ತನಾದವು ಇನ್ನೂ ನನ್ನ ಕಿವಿಯಲ್ಲಿ ದನಿಗೊಳ್ಳುತ್ತಿದೆ. ಆ ಮೇಲೆ ಪೋಲೀಸರು ಪಂಚನಾಮೆ ಮಾಡಿ ನನ್ನನ್ನು ಇಲ್ಲಿ ತಂದು ಒಗೆದರು. ಈಗಲೂ ಆ ದುರ್ದೈವಿ ತರುಣಿಯು ನೆನಪಾದ ಕೂಡಲೆ ಎದೆಯು ಧಸ್ಸೆನ್ನುತ್ತದೆ. "

ಹೀಗೆ ಹೇಳುತ್ತ ನಿಜವಾಗಿಯೂ ಆ ಐದನೆಯ ಕೊಡವು ಅತ್ಯಂತ ಕರ್ಕಶ ಸ್ವರದಿಂದ ಚೀರಿತು. ಅದನ್ನು ಕೇಳುತ್ತಲೇ ನಾನು ಗಡಬಡಸಿಕೊಂಡು ಎಚ್ಚತ್ತೆ. ಎದ್ದು ನೋಡುವದರೊಳಗೆ ಆ ಕೊಡಗಳು ತಮ್ಮ ತಮ್ಮ ಸ್ಥಾನಗಳಲ್ಲಿಯೇ ಇದ್ದು, ನನ್ನ ಕೋಣೆಯ ಕಾವಲುಗಾರನು ಮಾತ್ರ ವಿಚಿತ್ರ ಸ್ವರದಿಂದ 'ಆಲಬೇಲ್" ಕೊಡುತ್ತಿದ್ದ. (ಈ ವರೆಗೆ ಪ್ರಸಿದ್ಧವಾಗದಿದ್ದುದು)

ಹಕ್ಕಿಯ ಹಾಡು

ಹಕ್ಕಿಯ ಕಾಯುವೆ ನಾ । ಹಕ್ಕಿಯ
ಕಾಯುವೆ ನಾ ।
ಅಕ್ಕರದಲಿ ನಾ । ಸಕ್ಕರಿ ನೆಕ್ಕುತ ॥ಪಲ್ಲ॥

ಕಲ್ಲನು ಇಟ್ಟು । ಕವಣೆಯ ತಿರುವಿ ।
ಕಾಗೆಯ ಹಾರಿಸುವೆ ।
ನಾ ಗುಬ್ಬಿಯ ಎಬ್ಬಿಸುವೆ ॥೧॥

ಅಪ್ಪನ ಅಂಗಿಯ । ಜಪ್ಪಿಸಿ ತಂದಿನಿ
ಗಪ್ಪನೆ ಹಾಕುವೆ ನಾ ।
ಕಂಟಿಗೆ ಗಪ್ಪನೆ ಹಾಕುವೆ ನಾ ॥೨॥

ಮೆಟ್ಟಿನ ಮೇಲೆ। ದಪ್ಪನು ಇಟ್ಟಿನಿ ।
ಸಪ್ಪಳ ಮಾಡುವೆ ನಾ ।
ಹಕ್ಕಿಯ ಬೆದರಿಸಿ ಚದರಿಸುವೆ ॥೩॥

ಎಲೆ–ಎಲೆ ನಾಗಿ । ನೆರೆಹೊಲನಾಗಿ ।
ಭರದಲಿ ಬಾರವ್ವ ।
ಕವಣಲಿ ಕಾಗೆಯ ಹೊಡೆಯುವ್ವ ॥೪॥

—ನಾಗಿ—

ಎಲ್ಲಿ ಕೂತಿತೌ । ಕರಡಿಬಣ್ಣದ ।
ಕುರುಡಿ ಕಾಗೆಯು ಸಖಿಯೆ ।
ಕುರುಡಿ ಕಾಗೆಯು ಸಖಿಯೆ ॥೫॥

—ನೀಲಾ—

ಎದ್ದಿತಳ ಸಖಿ । ಸದ್ದು ಮಾಡತಿನಿ ।
ಒಬ್ಬಳೇ ಅಗಿನಿ ಬಾರವ್ವ ।
ಸಖಿ ಒಬ್ಬಳೇ ಅಗಿನಿ ಬಾರವ್ವ ॥೬॥

ಗಿರಿಸಾಗರ ಎಸ್. ಜಿ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ನೊಹರೆಯವರು ಮುದ್ರಿಸಿ ಪ್ರಕಟಿಸಿದರು.